ಏಪ್ರಿಲ್ 13, 2025
40ನೇ ವರ್ಷದಲ್ಲಿ
www.facebook.com/firstcrimenewspaper/
ಸ್ಥಾಪಕ ಸಂಪಾದಕ : ದಿ||ಎಂ. ಮಲ್ಲಿಕಾರ್ಜುನಯ್ಯ

# ಪೊಲೀಸ್ ನ್ಯೂಸ್

1980
ಪರಿಶೋಧನೆ, ಪತ್ತೇದಾರಿಕೆ ಮತ್ತು ರೋಚಕ ಸುದ್ದಿಗಳ ಸಚಿತ್ರ ಕನ್ನಡ ವಾರಪತ್ರಿಕೆ ಬೆಲೆ : ₹ 20/-

## ಜಾಲಿ ರೈಡ್‌ಗೆ ಕರೆದುಕೊಂಡು ಹೋಗಿ


# ಭಾವಿ ಪತಿಗೆ ಚಟ್ಟ ತೋರಿಸಿದ ಪ್ರೇಯಸಿ!





## ಹೆಂಡತಿಯನ್ನು ಕೊಂದು ಪೀಸ್ ಪೀಸ್ ಮಾಡಿ ಸೂಟ್‌ಕೇಸ್‌ನಲ್ಲಿ ತುಂಬಿದ್ದೇಕೆ?

## ನಟೋರಿಯಸ್ ಕ್ರಿಮಿನಲ್ ಬಾಂಬೆ ಸಲೀಂ ಅರೆಸ್ಟ್!





## ಕೇರಳದ ಸೈಕೋಗೆ ಕೊಡಗಿನಲ್ಲಿ ನಾಲ್ಕು ಬಲಿ!

## ಬಿಡದಿ ಸ್ಮಾರ್ಟ್ ಸಿಟಿಗಾಗಿ ಭೂ ಸ್ವಾಧೀನ ರಂಪಾಟ!

# ರಾಮನಗರ : ಬಿಡದಿ ಸ್ಮಾರ್ಟ್ ಸಿಟಿಗಾಗಿ ಭೂ ಸ್ವಾಧೀನ ರಂಪಾಟ!
# ಜೆಡಿಎಸ್-ಕಾಂಗ್ರೆಸ್ ನಡುವೆ ಮತ್ತೊಂದು ಸಂಘರ್ಷ?


ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ


ಡಿಸಿಎಂ ಡಿ.ಕೆ. ಶಿವಕುಮಾರ್

**ರಾಮನಗರ**
✍ ಶಾಂತರಾಜು ಜಿ. ಕಲ್ಲಹಳ್ಳಿ

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ರಾಜಧಾನಿ ಬೆಂಗಳೂರಿಗೆ ಪರ್ಯಾಯವಾಗಿ ರಾಮನಗರ ತಾಲ್ಲೂಕು ಬಿಡದಿ ಬಳಿ ನಿರ್ಮಿಸುತ್ತಿರುವ ಟೌನ್‌ಶಿಪ್ ಯೋಜನೆಗೆ ಹೌಸಿಂಗ್ ಅಂಡ್ ಅರ್ಬನ್ ಡೆವಲಪ್‌ಮೆಂಟ್ ಕಾರ್ಪೊರೇಷನ್ (ಹುಡ್ಕೊ) ಸುಮಾರು 17 ಸಾವಿರ ಕೋಟಿ ರೂ. ಸಾಲ ನೀಡಲು ಮುಂದೆ ಬಂದಿದೆ. ಕಳೆದ 18 ವರ್ಷಗಳಿಂದ ನನೆಗುದಿಗೆ ಬಿದ್ದಿದ್ದ ಈ ಯೋಜನೆ ಹಲವು ಏಳುಬೀಳುಗಳನ್ನು ಕಂಡಿತ್ತು. ಯೋಜನೆ ಸಾಕಾರವಾಗದೆ ರೈತರು ಅತಂತ್ರರಾಗಿದ್ದರು. ಮಾರ್ಚ್ 12ರಂದು ಮಹತ್ವಾಕಾಂಕ್ಷೆಯ ಯೋಜನೆಯಡಿ ಭೂಸ್ವಾಧೀನ ಪ್ರಕ್ರಿಯೆಗೆ ಅಧಿಸೂಚನೆ ಹೊರಡಿಸಲಾಗಿತ್ತು. ಭೂಸ್ವಾಧೀನಕ್ಕೆ ರೈತ ವಲಯದಿಂದ ವಿರೋಧ ವ್ಯಕ್ತವಾಗಿ, ಯೋಜನೆಯನ್ನು ವಿರೋಧಿಸಿ ರೈತರು ಹೋರಾಟಕ್ಕೆ ಅಣಿಯಾಗುತ್ತಿದ್ದಾರೆ. ಈ ಹಂತದಲ್ಲಿ ಸ್ಮಾರ್ಟ್ ಸಿಟಿ ನಿರ್ಮಾಣ ಯೋಜನೆಯ ಅಂದಾಜು ವೆಚ್ಚ 21,650 ಕೋಟಿಯಲ್ಲಿ ಶೇ. 80ರಷ್ಟು ಅಂದರೆ ಸುಮಾರು 17 ಸಾವಿರ ಕೋಟಿಯಷ್ಟು ಸಾಲ ಸೌಲಭ್ಯ ನೀಡಲು ಹುಡ್ಕೊ ಹಣಕಾಸು ಸಂಸ್ಥೆ ಉತ್ಸುಕವಾಗಿದ್ದು, 21,000 ಕೋಟಿ ರೂ. ವರೆಗೆ ಸಾಲ ನೀಡುವ ಭರವಸೆ ನೀಡಿದೆ. ಈ ಯೋಜನೆಯ ಭೂ ಸ್ವಾಧೀನ ಪರಿಹಾರದ ವೆಚ್ಚ ಹೆದ್ದಾರಿಗಳು ಸುಸಜ್ಜಿತ ಮೂಲ ಸೌಕರ್ಯಗಳ ವೆಚ್ಚ 21,650 ಕೋಟಿ ಆಗಬಹುದು ಎಂದು ಅಂದಾಜಿಸಲಾಗಿದೆ. ಗ್ಲೋಬಲ್ ಟೆಂಡರ್ ಮೂಲಕ ಡಿಪಿಆರ್ ಸಿದ್ಧತೆಗೆ ಪ್ರಾಧಿಕಾರ ಮುಂದಾಗಿದೆ ಮತ್ತು ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಆಯುಕ್ತರು ಈ ವ್ಯಾಪ್ತಿಯಲ್ಲಿ 8943 ಎಕರೆ ಭೂ ಸ್ವಾಧೀನಕ್ಕೆ ಅಧಿಸೂಚನೆ ಹೊರಡಿಸಿದ್ದಾರೆ. ಸರಕಾರಿ ಭೂಮಿ ಹೊರತುಪಡಿಸಿ 7300 ಖಾಸಗಿ ಜಮೀನು ಭೂ ಸ್ವಾಧೀನಕ್ಕೆ ಒಳಪಡುತ್ತಿದೆ.

## ಬಿಡದಿ ಸ್ಮಾರ್ಟ್ ಸಿಟಿ ಪ್ರಮುಖ ಅಂಶಗಳು

★ 2014ರ ಭೂ ಸ್ವಾಧೀನ ಕಾಯ್ದೆಯಂತೆ ಖಾಸಗಿ ಭೂ ಸ್ವಾಧೀನಕ್ಕೆ 10 ಸಾವಿರ ಕೋಟಿ ರೂ. ವೆಚ್ಚ.

★ ಹುಡ್ಕೊ ನೀಡುವ 17-21 ಸಾವಿರ ಕೋಟಿ ರೂ. ಸಾಲಕ್ಕೆ ಶೇ. 9ರಷ್ಟು ಬಡ್ಡಿ.

★ ಬೆಂಗಳೂರಿಗೆ 25 ಕಿ.ಮೀ. ದೂರದಲ್ಲಿ ನಿರ್ಮಾಣವಾಗಲಿರುವ ಟೌನ್‌ಶಿಪ್.


ಮಾಗಡಿ ಶಾಸಕ ಹೆಚ್.ಸಿ.ಬಾಲಕೃಷ್ಣ

ನೈಸ್ ರಸ್ತೆ ವಿಚಾರ, ಬಿಎಂಐಸಿಪಿಎ, ರೆಡ್ ಝೋನ್ ವಿವಾದ ಮಾದರಿಯಲ್ಲಿಯೇ ಬಿಡದಿ ಸ್ಮಾರ್ಟ್ ಸಿಟಿ ಯೋಜನೆಯೂ ರಾಜಕೀಯ ಸಂಘರ್ಷವೂ ರೈತರ ಸಂಕಷ್ಟಕ್ಕೆ ದಾರಿಯಾಗಲಿದೆಯೇ ಎಂಬ ಪ್ರಶ್ನೆ ಕಾಡುವಂತಾಗಿದೆ.

ಪ್ರಸ್ತುತ ಬಿಡದಿ ಸ್ಮಾರ್ಟ್ ಸಿಟಿ ಯೋಜನೆಯ ಹೆಸರಿನಲ್ಲಿ ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಭೂ ಸ್ವಾಧೀನಕ್ಕೆ ಮುಂದಾಗಿದೆ. ಆದರೆ ಭೂ ಸ್ವಾಧೀನಕ್ಕೆ ನಡೆಯುತ್ತಿರುವ ಪರ ವಿರೋಧ ಚರ್ಚೆಗಳು ಇಂತಹದೊಂದು ಪ್ರಶ್ನೆ ಸೃಷ್ಟಿಸಿದೆ. 2007ರಲ್ಲಿ ಹೆಚ್.ಡಿ. ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿದ್ದ ವೇಳೆಯಲ್ಲಿ ಬಿಡದಿ ಸ್ಮಾರ್ಟ್ ಸಿಟಿ ಯೋಜನೆಗೆ ಚಾಲನೆ ನೀಡಿದ್ದರು. ಈ ವೇಳೆ ಬಿಡದಿ ಭಾಗದ 9 ಗ್ರಾಮ ರೆಡ್ ಝೋನ್ ವ್ಯಾಪ್ತಿಗೆ ಸೇರಿದ್ದವು. ಇದರೊಂದಿಗೆ 90ರ ದಶಕದಲ್ಲಿ ನಡೆಯುತ್ತಿದ್ದ ನೈಸ್ ರಸ್ತೆ ಕಾಮಗಾರಿ ಬಿಡದಿಗೂ ಸೇರಬೇಕಿತ್ತು. ಭೂ ಸ್ವಾಧೀನ ಪ್ರಕ್ರಿಯೆಯ ವಿರೋಧದ ನಡುವೆ ಒಂದಷ್ಟು ಗ್ರಾಮಗಳು ಇಂದಿಗೂ ಅತಂತ್ರಗೊಂಡಿವೆ. ನೈಸ್ ರಸ್ತೆ ಕಾಮಗಾರಿಯೂ ಪೂರ್ಣಗೊಂಡಿಲ್ಲ. ರೈತರಿಗೆ ಪರಿಹಾರವೂ ಸಹ ಸಿಕ್ಕಿಲ್ಲ. ಅದೇ ಮಾದರಿಯಲ್ಲಿ ಬಿಎಂಐಸಿಪಿಎ (ಬೆಂಗಳೂರು-ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಅಥಾರಿಟಿ) ಕೆಲಸಕ್ಕಾಗಿ ಬೆಂಗಳೂರಿನಿಂದ ಮೈಸೂರಿನವರೆಗೂ ಒಂದಷ್ಟು ಆಸ್ತಿಗಳ ನೋಟಿಫಿಕೇಷನ್ ನಡೆದಿದೆ. ಈವರೆಗೂ ಇಲ್ಲಿನ ಆಸ್ತಿಗಳ ಪಹಣಿಯಲ್ಲಿ 'ಬಿಎಂಐಸಿಪಿಎ' ಹೆಸರು ನಮೂದಾಗಿದೆ. ಹೀಗಾಗಿ ಆಸ್ತಿ ಮಾರಾಟ ಕನ್ವರ್ಷನ್, ಸಾಲ ಸೌಲಭ್ಯ ಸಹ ದೊರೆಯುತ್ತಿಲ್ಲ.


ಬಿಡದಿಯ ಈಗಿನ ನೋಟ

ಮೇಲಿನ ಮೂರು ಯೋಜನೆಗಳಲ್ಲಿಯೂ ಅನೇಕ ವರ್ಷಗಳಿಂದಲೂ ನೋಟಿಫಿಕೇಷನ್‌ನಷ್ಟೇ ನಡೆದಿದೆ. ಆದರೆ ರೈತರಿಗೆ ಭೂ-ಪರಿಹಾರ ಮಾತ್ರ ದೊರೆಯಲಿಲ್ಲ. ನೈಸ್ ರಸ್ತೆಯ ಭೂ ಸ್ವಾಧೀನ ವಿರೋಧಿಸಿ 90ರ ದಶಕದಲ್ಲಿ ಹೆಚ್.ಡಿ. ದೇವೇಗೌಡರು ಹೋರಾಟ ನಡೆಸಿದ್ದರು. ಇಂದು ಬಿಡದಿ ಸ್ಮಾರ್ಟ್ ಸಿಟಿ ಯೋಜನೆಯ ಭೂ ಸ್ವಾಧೀನ ಪ್ರಕ್ರಿಯೆ ವಿರೋಧಿಸಿ ಮತ್ತೆ ದೇವೇಗೌಡರು ಹೋರಾಟ ನಡೆಸುವ ಸಾಧ್ಯತೆಗಳಿವೆ. ಹೀಗಾಗಿ ಸ್ಮಾರ್ಟ್ ಸಿಟಿ ಯೋಜನೆಯೂ ಸಹ ಮತ್ತೊಂದು ನೈಸ್ ರಸ್ತೆ ಇಲ್ಲವೇ ಬಿಎಂಐಸಿಪಿಎ ಯೋಜನೆಯಾಗದಿರಲಿ ಎಂಬುದಷ್ಟೆ ಸಾರ್ವಜನಿಕರ ಆಶಯ.



ಗ್ರೇಟರ್ ಬೆಂಗಳೂರು ಬಿಡದಿ

### ಜೆಡಿಎಸ್ ಹೋರಾಟಕ್ಕೆ ಸಿದ್ಧವಾಗಿದೆ

ಬಿಡದಿ ಸ್ಮಾರ್ಟ್ ಸಿಟಿ ಯೋಜನೆಗೆ ಭೂ ಸ್ವಾಧೀನಪಡಿಸಿಕೊಳ್ಳಲು ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಮುಂದಾಗಿರುವ ಬೆನ್ನಲ್ಲೇ ರೈತರಿಂದ ವಿರೋಧ ವ್ಯಕ್ತವಾಗಿದೆ. ರೈತರ ಜೊತೆಗೆ ಜೆಡಿಎಸ್ ಸಹ ಕೈ ಜೋಡಿಸಿದೆ. ಕೆಲ ದಿನಗಳ ಹಿಂದೆ ಹೊಸೂರು ಗ್ರಾಮದಲ್ಲಿ ಸಭೆ ನಡೆಸಿದ ಮಾಜಿ ಶಾಸಕ ಜೆಡಿಎಸ್ ರಾಮನಗರ ಜಿಲ್ಲಾಧ್ಯಕ್ಷ ಎ. ಮಂಜುನಾಥ್ ಭಾಗಿಯಾಗಿದ್ದರು. ನಮ್ಮ ರಕ್ತ ಕೊಟ್ಟರೂ ಜಮೀನು ಬಿಡುವುದಿಲ್ಲ ಈ ಸಂಬಂಧ ಬಿಡದಿ ಸಮೀಪದ ಬೈರಮಂಗಲ ಗ್ರಾಮದಲ್ಲಿ ಸದ್ಯದಲ್ಲೇ ಪ್ರತಿಭಟನಾ ಸಭೆ ನಡೆಸಲಿದ್ದು



ಸಭೆಗೆ ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರನ್ನು ಕರೆಸುವುದಾಗಿ ಹೇಳಿದ್ದರು. ಬಿಡದಿ ಸ್ಮಾರ್ಟ್ ಸಿಟಿ ಯೋಜನೆಯ ಹಿಂದೆ ರಾಜ್ಯದ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ರವರು ಪ್ರಮುಖ ಪಾತ್ರವಹಿಸಿದ್ದಾರೆ. 2007ರಲ್ಲಿ ಹೆಚ್.ಡಿ. ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿದ್ದಾಗ ರೂಪಿಸಿದ್ದ


ಬಿಡದಿಯ ಸ್ಮಾರ್ಟ್ ಸಿಟಿಯ ಪ್ಲಾನಿಂಗ್

ಯೋಜನೆಯನ್ನು ಅವರು ಕಡೆಗಣಿಸಿದ್ದರು. ನಾನು ಅದನ್ನು ಕೈಗೆತ್ತಿಕೊಂಡು ಪೂರ್ಣಗೊಳಿಸಿದ್ದೇನೆ, ದೊಡ್ಡ ಆಲಹಳ್ಳಿ ಕೆಂಪೇಗೌಡರ ಮಗ ಮಿನಿ ಬೆಂಗಳೂರು ಕಟ್ಟುತ್ತಿದ್ದೇನೆ ಎಂಬ ಹೆಗ್ಗಳಿಕೆ ಪಡೆಯಲು ಡಿ.ಕೆ. ಶಿವಕುಮಾರ್ ಪ್ರಯತ್ನಿಸುತ್ತಿದ್ದಾರೆ ಎಂಬುದು ಗುಟ್ಟಾಗಿ ಉಳಿದಿಲ್ಲ. ಈ ಹಿಂದೆ ಹಲವಾರು ಬಾರಿ ನಾವು ಬೆಂಗಳೂರಿನವರು ಎಂದಿದ್ದರು. ಈ ಯೋಜನೆಗೆ ಸುಮಾರು 9600 ಎಕರೆ ಭೂಮಿ ಸ್ವಾಧೀನವಾಗಲಿದ್ದು, ಇದರಲ್ಲಿ 7600 ಎಕರೆಯಷ್ಟು ಭೂಮಿ ರೈತರದ್ದಾಗಿದೆ. ಇದಕ್ಕೆ ರೈತರು ತೀವ್ರ ವಿರೋಧ ವ್ಯಕ್ತಪಡಿಸುತ್ತಿದ್ದು, ಇದರ ವಿರುದ್ಧ ಹೋರಾಟಕ್ಕೆ ವೇದಿಕೆ ಅಣಿಯಾಗುತ್ತಿದೆ. ಹೋರಾಟದ ಮುಂಚೂಣಿ ಜೆಡಿಎಸ್ ವಹಿಸಲಿದ್ದು, ಜೆಡಿಎಸ್ ನೇತೃತ್ವದಲ್ಲಿ ಹೋರಾಟ ರೂಪುಗೊಂಡಿದ್ದೇ ಆದಲ್ಲಿ ದಳಪತಿಗಳು ಮತ್ತು ಡಿ.ಕೆ. ಶಿವಕುಮಾರ್ ನಡುವಿನ ಮತ್ತೊಂದು ಕಾಳಗಕ್ಕೆ ರಾಮನಗರ ಜಿಲ್ಲೆ ಮತ್ತೊಮ್ಮೆ ಅಖಾಡವಾಗಿ ಪರಿಣಮಿಸಲಿದೆ. ಈ ಇಬ್ಬರ ನಡುವಿನ ಹೋರಾಟದಿಂದಾಗಿ ಭೂಮಿ ಕಳೆದುಕೊಳ್ಳುವ ಅನ್ನದಾತರು ಅತಂತ್ರಗೊಳ್ಳದಿರಲಿ. ಸಾಧಕ-ಬಾಧಕಗಳ ಬಗ್ಗೆ ಮಾತನಾಡಿ ಭೂಸ್ವಾಧೀನ ಸಮಸ್ಯೆಗಳು ಪರಿಹರಿಯಬೇಕಿದೆ. ಜಿಲ್ಲೆಯ ಸಮಗ್ರ ಅಭಿವೃದ್ಧಿಗೆ ಪಕ್ಷಾತೀತವಾಗಿ ಸಹಕಾರ ನೀಡಬೇಕಿದೆ ಎನ್ನುವುದು ಪ್ರಜ್ಞಾವಂತರ ಆಗ್ರಹ. ರಾಮನಗರ ಜಿಲ್ಲೆಯಾಗುವುದಕ್ಕಿಂತ ಮೊದಲಿನಿಂದಲೂ ದಳಪತಿಗಳು ಮತ್ತು ಡಿ.ಕೆ. ಶಿವಕುಮಾರ್ ನಡುವಿನ ರಾಜಕೀಯ ಸಂಘರ್ಷವಿದೆ. 1985ರಲ್ಲಿ ದೇವೇಗೌಡರ ವಿರುದ್ಧ ಡಿ.ಕೆ. ಶಿವಕುಮಾರ್ ಸ್ಪರ್ಧೆ ಮಾಡಿದಾಗಿನಿಂದ ಶುರುವಾದ ಇವರಿಬ್ಬರ ನಡುವಿನ ರಾಜಕೀಯ ಕದನ ಇಂದಿಗೂ ಮುಂದುವರೆದಿದೆ. ಚನ್ನಪಟ್ಟಣದಲ್ಲಿ 2021ರಲ್ಲಿ ನಡೆದ ನೀರಾ ಹೋರಾಟ, ನೈಸ್ ವಿರುದ್ಧದ ಹೋರಾಟ ಸೇರಿದಂತೆ ಹಲವು ಹೋರಾಟಗಳಲ್ಲಿ ದಳಪತಿಗಳು ಡಿ.ಕೆ. ಶಿವಕುಮಾರ್ ವಿರುದ್ಧ ಸೆಟೆದು ನಿಂತಿದ್ದರು. ಇದೀಗ ಬಿಡದಿ ಸ್ಮಾರ್ಟ್ ಸಿಟಿ ಹೋರಾಟ ಈ ಪಟ್ಟಿಗೆ ಸೇರ್ಪಡೆಯಾಗಲಿದೆ ಎಂಬುದಷ್ಟೇ ವಿಶೇಷ. ☯


ಬಿಡದಿ ಸ್ಮಾರ್ಟ್ ಸಿಟಿ ಯೋಜನೆ ಮೂಲಕ ಮತ್ತೊಂದು ಬೆಂಗಳೂರು ನಿರ್ಮಿಸುತ್ತಿದ್ದೇವೆ. ಇದರಿಂದ ರಾಮನಗರ ಜಿಲ್ಲೆ ಸಂಪೂರ್ಣ ಅಭಿವೃದ್ಧಿಗೊಳ್ಳಲಿದೆ. ಎಲ್ಲಾ ಕಾರ್ಖಾನೆಗಳನ್ನು ಇಲ್ಲಿಯೇ ಸ್ಥಾಪಿಸಿ, ಸ್ಥಳೀಯವಾಗಿಯೇ ಉದ್ಯೋಗ ನೀಡುವ ಕೆಲಸ ಮಾಡಲಾಗುವುದು.

**-ಡಿ.ಕೆ. ಶಿವಕುಮಾರ್**, ಉಪಮುಖ್ಯಮಂತ್ರಿ

ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿದ್ದಾಗ ಬಿಡದಿ ಸ್ಮಾರ್ಟ್ ಸಿಟಿ ಯೋಜನೆ ರೂಪುಗೊಂಡಿತ್ತು. ರೈತರಿಗೆ 18 ವರ್ಷಗಳಿಂದ ಆದ ಅನ್ಯಾಯವನ್ನು ಸರಿಪಡಿಸುವ ಕೆಲಸ ಮಾಡುತ್ತಿದ್ದೇವೆ. ಜೆಡಿಎಸ್‌ನ ಪಾಪದ ಕೂಸನ್ನು ನಾವು ಎತ್ತಿಕೊಂಡು ಸರಿ ಮಾಡುತ್ತಿದ್ದೇವೆ.

**-ಹೆಚ್.ಸಿ. ಬಾಲಕೃಷ್ಣ**, ಮಾಗಡಿ ಶಾಸಕ

ರೈತರ ಭೂಮಿ ಕಸಿಯಲು ಸ್ಮಾರ್ಟ್ ಸಿಟಿ ಯೋಜನೆ ಎಂಬ ಹೆಸರು ಇಡಲಾಗಿದೆ. ಯಾವುದೇ ಕಾರಣಕ್ಕೂ ರೈತರ ಭೂಮಿ ಕಸಿದುಕೊಳ್ಳಲು ನಾವು ಅವಕಾಶ ನೀಡುವುದಿಲ್ಲ. ಮುಂದಿನ ಹೋರಾಟಗಳಿಗೆ ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರು ಭಾಗಿಯಾಗಲಿದ್ದಾರೆ.


ಎ ಮಂಜುನಾಥ್
ಜೆಡಿಎಸ್ ಜಿಲ್ಲಾಧ್ಯಕ್ಷ

**-ಎ. ಮಂಜುನಾಥ್**, ಜೆಡಿಎಸ್ ಜಿಲ್ಲಾಧ್ಯಕ್ಷ

# ಹೆಂಡತಿ ಕೊಂದ ಆರೋಪದಡಿ ಜೈಲು ಸೇರಿದ ಗಂಡ
# ಹೆಣವಾದವಳು ಬದುಕಿ ಬಂದಿದ್ದೇಗೆ?



ಸುರೇಶ್

**ಈ ಸ್ಟೋರಿ ಯಾವುದೋ ಸಿನಿಮಾ ಕಥೆಯಂತಿದ್ದರೂ ಕಥೆಯಲ್ಲ, ನೈಜ ಘಟನೆಯ ಕ್ರೈಂ ಸ್ಟೋರಿಯಾಗಿದೆ. ಹೆಂಡತಿಯೊಬ್ಬಳು ತನ್ನ ಮಕ್ಕಳು ಮತ್ತು ಗಂಡನ ಬಿಟ್ಟು ಪ್ರಿಯಕರನ ಜೊತೆ ಎಸ್ಕೇಪ್ ಆಗಿದ್ದಳು. ಈ ಸಂಬಂಧ ಹೆಂಡತಿ ನಾಪತ್ತೆ ಆಗಿದ್ದಾಳೆ ಎಂದು ಗಂಡ ದೂರು ನೀಡಿದರೆ ಎಂಟು ತಿಂಗಳ ಬಳಿಕ ಸಿಕ್ಕ ಯಾವುದೋ ಮಹಿಳೆಯ ಅಸ್ಥಿಪಂಜರವನ್ನು ಮುಂದಿಟ್ಟುಕೊಂಡು ಇದು ನಿನ್ನ ಹೆಂಡತಿಯ ಅಸ್ಥಿಪಂಜರ ನೀನೇ ಕೊಲೆ ಮಾಡಿದ್ದೀಯ ಎಂದು ಪೊಲೀಸರು ಆತನ ಮೇಲೆ ಕೊಲೆ ಪ್ರಕರಣ ದಾಖಲು ಮಾಡಿ ಜೈಲಿಗೆ ತಳ್ಳಿದ್ದರು. ಆದರೆ ಆತ ಎರಡು ವರ್ಷ ಜೈಲು ಶಿಕ್ಷೆ ಅನುಭವಿಸಿ ಜಾಮೀನಿನ ಮೇಲೆ ಬಂದಿದ್ದು ಕೊಲೆ ಆರೋಪವನ್ನು ಎದುರಿಸುತ್ತಿದ್ದನು. ಇಲ್ಲಿ ಪೊಲೀಸರು ಯಾವುದೋ ಕೊಲೆಯನ್ನು ಇನ್ಯಾರದ್ದೋ ತಲೆಗೆ ಕಟ್ಟಿ ಕೈತೊಳೆದುಕೊಂಡಿದ್ದಾರಾ? ಅಥವಾ ಕೈ ಬಿಸಿ ಮಾಡಿಕೊಂಡರಾ? ಗೊತ್ತಿಲ್ಲ. ಆದರೀಗ ಐದು ವರ್ಷಗಳ ಹಿಂದಿನ ಪ್ರಕರಣಕ್ಕೆ ಮರು ಜೀವ ಬಂದಿದೆ ಅದು ಹೇಗೆ ಅಂತಿರಾ.... ಸತ್ತು ಹೋಗಿದ್ದ ಅವನ ಹೆಂಡತಿ ಪ್ರತ್ಯಕ್ಷಳಾಗಿದ್ದಾಳೆ...**

**ಮೈಸೂರು**

✍ಬಿ.ಎಂ. ಲವಕುಮಾರ್

ಇದೊಂದು ಪ್ರಕರಣ ನಿಜಕ್ಕೂ ಅಚ್ಚರಿ ಮೂಡಿಸುತ್ತಿದೆ. ತಾನು ಮಾಡದ ತಪ್ಪಿಗೆ ಅಮಾಯಕನೊಬ್ಬ ಕೊಲೆಗಾರ ಪಟ್ಟ ಕಟ್ಟಿಕೊಂಡಿದ್ದಲ್ಲದೆ, ಪೊಲೀಸರ ಲಾಠಿ ಏಟು ತಿಂದು ಜೈಲ್ ಸೇರಿದ್ದು ಒಂದು ಕಡೆಯಾದರೆ, ಪೊಲೀಸರು ನಾಪತ್ತೆ ದೂರನ್ನು ಗಂಭೀರವಾಗಿ ಪರಿಗಣಿಸದಿರುವುದು ಮತ್ತು ಮಹಿಳೆಯ ಅಸ್ಥಿಪಂಜರ ಸಿಕ್ಕಿದಾಗ ಆ ಮಹಿಳೆ ಯಾರು? ಅವಳನ್ನು ಕೊಲೆ ಮಾಡಿದವರು ಯಾರು ಎಂಬುದರ ತನಿಖೆ ಮಾಡದೆ ಅಮಾಯಕನ ತಲೆಗೆ ಕಟ್ಟಿ ಕೈತೊಳೆದುಕೊಂಡಿದ್ದೇಕೆ? ಯಾರನ್ನೋ ರಕ್ಷಿಸುವ ಸಲುವಾಗಿ ಹೀಗೆ ಮಾಡಿದ್ರಾ, ಪೊಲೀಸರು? ಎಂಬಿತ್ಯಾದಿ ಅನುಮಾನಗಳು ಹುಟ್ಟಿಕೊಳ್ಳುತ್ತಿದ್ದು ಎಲ್ಲ ಪ್ರಶ್ನೆಗಳು ಪ್ರಕರಣ ತನಿಖೆ ಮಾಡಿದ ಪೊಲೀಸ್ ತನಿಖಾಧಿಕಾರಿ ಮತ್ತು ಸಿಬ್ಬಂದಿಯ ಸುತ್ತ ಗಿರಕಿ ಹೊಡೆಯಲಾರಂಭಿಸಿದೆ. ಹಾಗಾದರೆ ಏನಿದು ಪ್ರಕರಣ ಎಂಬ ಕುತೂಹಲ ಕಾಡದಿರದು. ಆ ಬಗ್ಗೆ ಇಲ್ಲಿದೆ ಸಂಪೂರ್ಣ ವಿವರ.

ಅವನು ಸುರೇಶ್ ಕೊಡಗಿನ ಕುಶಾಲನಗರ ಬಸವನಹಳ್ಳಿ ಬಳಿಯ ದಿಡ್ಡಳ್ಳಿ ನಿವಾಸಿ ಗಾಂಧಿ ಎಂಬುವರ ಪುತ್ರ. ಈತ ಸುಮಾರು 23 ವರ್ಷಗಳ ಹಿಂದೆ ಮಲ್ಲಿಗೆ ಎಂಬಾಕೆಯನ್ನು ಮದುವೆಯಾಗಿದ್ದನು. ಆದಿವಾಸಿ ಕುಟುಂಬಕ್ಕೆ ಸೇರಿದ್ದರಿಂದ ಕೂಲಿ ಕೆಲಸ ಮಾಡಿಕೊಂಡು ಜೀವನ ಸಾಗಿಸುತ್ತಿದ್ದರು. ಸುರೇಶ ಕುಡಿತದ ಚಟ ಹೊಂದಿದ್ದನು ಆದರೂ ಸುಮಾರು ಹದಿನೆಂಟು ವರ್ಷಗಳ ಕಾಲ ಸಂಸಾರ ನಡೆಸಿಕೊಂಡು ಬಂದಿದ್ದನು. ಇದರಿಂದ ಸುರೇಶ ಮತ್ತು ಮಲ್ಲಿಗೆಗೆ ಎರಡು ಮಕ್ಕಳಿದ್ದರು. ಈ ನಡುವೆ ಇವರಲ್ಲಿ ಮನಸ್ತಾಪಗಳು ಶುರುವಾಗಿದ್ದವು. ಜಗಳಗಳು ಆರಂಭವಾಗಿದ್ದನು.

ಈ ನಡುವೆ ಮಲ್ಲಿಗೆಗೆ ಕೆಲಸಕ್ಕೆ ಹೋಗುತ್ತಿದ್ದಾಗ



ಸುರೇಶ್ ಹಾಗೂ ಮಲ್ಲಿಗೆ


ಗಣೇಶ್ ಎಂಬಾತನ ಪರಿಚಯವಾಗಿತ್ತು. ಆಕೆಗೆ ಗಂಡನಿಗಿಂತ ಆತನಲ್ಲಿ ಪ್ರೀತಿ ಹೆಚ್ಚಾಗತೊಡಗಿತ್ತು. ಇಬ್ಬರು ಒಬ್ಬರಿಗೊಬ್ಬರು ಹತ್ತಿರವಾಗುತ್ತಾ ಬಂದಿದ್ದರಿಂದ ಗಂಡ ಸುರೇಶನತ್ತ ಪ್ರೀತಿ ಕಡಿಮೆಯಾಗಿ ಗಣೇಶನೇ ಸರ್ವಸ್ವ ಎನ್ನುವಂತಾಗಿತ್ತು. ಹೀಗಾಗಿ ಗಂಡ ಸುರೇಶನ ಜತೆಗೆ ಬದುಕುವುದಕ್ಕಿಂತ ಗಣೇಶನ ಜೊತೆ ಬದುಕುವ ತೀರ್ಮಾನ ಮಾಡಿಬಿಟ್ಟಳು. ಹೀಗಾಗಿ ಕೋವಿಡ್ ಸಮಯ ಅಂದರೆ 2020ರಲ್ಲಿ ಗಂಡ ಸುರೇಶ ಮತ್ತು ಮಕ್ಕಳಿಗೆ ಜೂಟ್ ಹೇಳಿ ಪ್ರಿಯಕರ ಗಣೇಶನ ಜೊತೆ ಎಸ್ಕೇಪ್ ಆಗಿಬಿಟ್ಟಳು.

ಗಂಡ ಸುರೇಶನಿಗೆ ಹೆಂಡತಿಯ ರಂಗಿನಾಟ ಮೊದಲೇ ಗೊತ್ತಾಗಿತ್ತು. ಅಲ್ಲದೆ ಪ್ರಿಯಕರ ಗಣೇಶನ ಜೊತೆಗೆ ಓಡಿ ಹೋಗಿದ್ದಾಳೆ ಎಂಬುದು ಕೂಡ ಗೊತ್ತಾಗಿತ್ತು. ಆಕೆ ತನ್ನ ಬಿಟ್ಟು ಹೋದ ಬಳಿಕವೂ ಸುರೇಶ ಆಕೆಗೆ ಫೋನ್ ಮಾಡಿ ಇಬ್ಬರು ಜಗಳ ಆಡಿಕೊಂಡಿದ್ದರು. ಅವಳು ತನ್ನ ಬಿಟ್ಟು ಹೋದ ಬಳಿಕ ಜನ ಅವನನ್ನು ಹೆಂಡತಿ ಎಲ್ಲಿ ಎಂದು ಕೇಳಲಾರಂಭಿಸಿದ್ದರು. ಆಕೆ ಓಡಿ ಹೋಗಿದ್ದಾಳೆ ಎಂದು ಹೇಗೆ ಹೇಳುವುದು? ಅದೇ ವೇಳೆಗೆ ಅವನಿಗೂ ಅವಳಿಗೂ ಫೋನ್‌ನಲ್ಲಿಯೇ ದೊಡ್ಡದೊಂದು ಜಗಳವಾಗಿತ್ತು. ಹೀಗಾಗಿ ಅವಳಿಗೆ ಬುದ್ಧಿ ಕಲಿಸುವ ಸಲುವಾಗಿ 2020 ನವೆಂಬರ್ 13ರಂದು ಕುಶಾಲನಗರ ಪೊಲೀಸ್ ಠಾಣೆಗೆ ತೆರಳಿ ಸುರೇಶ್ ಹೆಂಡತಿ ಮಲ್ಲಿಗೆ ನಾಪತ್ತೆಯಾಗಿರುವ ಕುರಿತಂತೆ ದೂರು ನೀಡಿದ್ದನು. ಪ್ರಕರಣ ದಾಖಲಿಸಿಕೊಂಡ ಪೊಲೀಸರು ಆ ತಕ್ಷಣಕ್ಕೆ ಹುಡುಕುವ ಪ್ರಯತ್ನ ಮಾಡಿರಲಿಲ್ಲ. ಹೀಗಾಗಿ ಅದು ಹಾಗೆಯೇ ಉಳಿದು ಹೋಯಿತು. ಇತ್ತ ಸುರೇಶನ ಅಪ್ರಾಪ್ತ ಮಕ್ಕಳು ಅಜ್ಜಿಮನೆ(ಮಲ್ಲಿಗೆ ತಾಯಿ) ಗೆ ಸೇರಿದ್ದವು. ಸುರೇಶ ಕೆಲಸ ಮಾಡಿಕೊಂಡು ಜೀವನ ನಡೆಸಿಕೊಂಡು ಹೋಗುತ್ತಿದ್ದನು. ಅದಾಗಲೇ ಒಂಬತ್ತು ತಿಂಗಳು ಕಳೆದು ಹೋಗಿತ್ತು. 2020 ಮುಗಿದು 2021 ಆರಂಭವಾಗಿ ಏಳು ತಿಂಗಳು ಕಳೆದು ಹೋಗಿತ್ತು. ಅದಾಗಲೇ ಸುರೇಶನಿಗೆ ಗ್ರಹಚಾರವೊಂದು ಕಾದಿತ್ತು.

ಈ ನಡುವೆ 2020ರ ನವೆಂಬರ್ 12ರಂದು ಮೈಸೂರು ಜಿಲ್ಲೆಯ ಬೆಟ್ಟದಪುರ ಪೊಲೀಸ್ ಠಾಣಾ ವ್ಯಾಪ್ತಿಯ ಶಾನುಭೋಗನಹಳ್ಳಿಯ ಪೊದೆಯೊಂದರಲ್ಲಿ ಸುಮಾರು 28 ರಿಂದ 30 ವರ್ಷ ವಯಸ್ಸಿನ ಮಹಿಳೆಯ ಅಸ್ಥಿಪಂಜರವೊಂದು ಪತ್ತೆಯಾಗಿತ್ತು. ಅದರ ಮಹಜರು ನಡೆಸಿದ ಪೊಲೀಸರು ಮೊದಲಿಗೆ ಅಸ್ವಾಭಾವಿಕ ಸಾವು ಪ್ರಕರಣ ದಾಖಲಿಸಿಕೊಂಡಿದ್ದರು. ಇದಾದ ನಂತರ ಮರಣೋತ್ತರ ಪರೀಕ್ಷೆಯ ಪ್ರಾಥಮಿಕ ತನಿಖೆಯ ವರದಿ ಬಂದಾಗ ಆ ಮಹಿಳೆ ತಲೆ ಮೇಲೆ ಬಲವಾಗಿ ಆಯುಧದಿಂದ ಹೊಡೆದು ಕೊಲೆ ಮಾಡಲಾಗಿದೆ ಎಂಬುದು ಬೆಳಕಿಗೆ ಬಂದಿತ್ತು. ಆಗ ಪೊಲೀಸರಿಗೆ ಆ ಅಸ್ಥಿಪಂಜರ ಯಾರದ್ದು? ಅದರ ಹಿಂದೆ ಏನಿದೆ? ಆಕೆಯನ್ನು ಯಾರೋ ಕೊಲೆ ಮಾಡಿ ತಂದು ಎಸೆದಿದ್ದು ಯಾರು ಆಕೆ? ಕೊಲೆ ಮಾಡಿದವರು ಯಾರು? ಎಂಬಿತ್ಯಾದಿ ಪ್ರಶ್ನೆಗಳು ಹುಟ್ಟಿಕೊಂಡಿದ್ದು ಇದಕ್ಕೆ ಉತ್ತರ ಸಿಗಬೇಕಾದರೆ ತನಿಖೆ ಮಾಡಲೇ ಬೇಕಾಗಿತ್ತು. ಹೀಗಾಗಿ ಮೊದಲಿಗೆ ಅಸ್ವಾಭಾವಿಕ ಪ್ರಕರಣವೆಂದು ದಾಖಲಿಸಿಕೊಂಡಿದ್ದ ಪೊಲೀಸರು ಅದು ಕೊಲೆ ಪ್ರಕರಣ ಎಂದು ವರದಿ ಬಂದಿದ್ದರಿಂದ ತನಿಖೆ ಮಾಡಲೇ ಬೇಕಾಗಿತ್ತು.

ಅಸ್ಥಿಪಂಜರ ಪ್ರಕರಣ ತನಿಖೆಯ ತನಿಖಾಧಿಕಾರಿಯನ್ನಾಗಿ ಆಗ ಪಿರಿಯಾಪಟ್ಟಣ ಸರ್ಕಲ್ ಇನ್ಸ್‌ಪೆಕ್ಟರ್ ಆಗಿದ್ದ ಬಿ.ಜಿ. ಪ್ರಕಾಶ್ ಅವರಿಗೆ ವಹಿಸಲಾಗಿತ್ತು. ಇವರೊಂದಿಗೆ ಎಎಸ್ಐ ಸೋಮಶೇಖರ, ಸಿಬ್ಬಂದಿಗಳಾದ ಜಿತೇಂದ್ರಕುಮಾರ್, ಎಂ. ಪ್ರಕಾಶ್, ಮಹೇಶ್ ಕುಮಾರ್ ತಂಡದಲ್ಲಿದ್ದು ತನಿಖೆ ಆರಂಭಿಸಿದ್ದರು. ಈ ವೇಳೆ ಪೊಲೀಸ್ ಠಾಣೆಗಳಲ್ಲಿ ಯಾವುದಾದರೂ ಮಹಿಳೆ ನಾಪತ್ತೆಯಾಗಿರುವ ಪ್ರಕರಣ ದಾಖಲಾಗಿದೆಯಾ ಎಂದು ಪರಿಶೀಲನೆ ನಡೆಸಿದಾಗ ಕುಶಾಲನಗರ ಪೊಲೀಸ್ ಠಾಣೆಯಲ್ಲಿ 2020ರ ನವೆಂಬರ್ 12ರಂದು ಸುರೇಶ ಎಂಬಾತ ಪತ್ನಿ ಮಲ್ಲಿಗೆ ನಾಪತ್ತೆಯಾಗಿರುವ ಬಗ್ಗೆ ದೂರು ನೀಡಿರುವುದು ಬೆಳಕಿಗೆ ಬಂದಿತ್ತು.

ಕೂಡಲೇ ತನಿಖಾಧಿಕಾರಿಯಾಗಿದ್ದ ಬಿ.ಜಿ. ಪ್ರಕಾಶ್ ಅವರು ಸಿಬ್ಬಂದಿಯನ್ನು ಕಳುಹಿಸಿ ಕುಶಾಲನಗರ ಬಳಿಯ ದಿಡ್ಡಳ್ಳಿಯ ಸುರೇಶನನ್ನು ಠಾಣೆಗೆ ಕರೆದುಕೊಂಡು ಬಂದಿದ್ದರು. ಆ ನಂತರ ಪೊಲೀಸರು ಅಸ್ಥಿಪಂಜರದ ಸುತ್ತ ಕಥೆಯೊಂದನ್ನು ಸುರೇಶ ಮುಂದಿಟ್ಟುಕೊಂಡು ಹೆಣೆದಿದ್ದರು. ಸುರೇಶ ನಾನು ಕೊಲೆ ಮಾಡಿಲ್ಲ ಎಂದರೂ ನೀನೇ ಕೊಲೆ ಮಾಡಿದ್ದೆಂದು ಒಪ್ಪಿಕೊಳ್ಳುವಂತೆ ಲಾಠಿ ಮೂಲಕವೇ ಹೇಳಿದ್ದಲ್ಲದೆ, ಆತನೇ ಪತ್ನಿಯನ್ನು ಕೊಲೆ ಮಾಡಿ ಪೊದೆಯಲ್ಲಿ ಎಸೆದಿದ್ದಾಗಿ ಪ್ರಕರಣ ದಾಖಲಿಸಿಕೊಂಡರು. ಅದಕ್ಕೆ ಬೇಕಾದ ದೂರನ್ನು ಮಲ್ಲಿಗೆಯ ಮಗ ಅಪ್ರಾಪ್ತ ಬಾಲಕನಿಂದ ಮಲ್ಲಿಗೆ ತಾಯಿ ಗೌರಿಯ ಹೆಸರಿನಲ್ಲಿ ಬರೆಸಿದರಲ್ಲದೆ, ಅದಕ್ಕೆ ಹೆಬ್ಬೆಟ್ಟು ಒತ್ತಿಸಿಕೊಂಡರು. ದೂರಿನಲ್ಲಿ ಸುರೇಶ ಕುಡಿತದ ಚಟ ಹೊಂದಿದ್ದ, ಹೆಂಡತಿ



ಅಸ್ಥಿಪಂಜರ ತಪಾಸಣೆ ಮಾಡುತ್ತಿರುವುದು

## ಅಮಾಯಕನಿಗೆ ನ್ಯಾಯ ಕೊಡಿಸೋರು ಯಾರು?

ಅಸ್ಥಿ ಪಂಜರ ವಿಚಾರದಲ್ಲಿಯೇ ಪೊಲೀಸರು ಸುರೇಶನ ಪತ್ನಿ ಮಲ್ಲಿಗೆ ಅಸ್ಥಿಪಂಜರವೆಂದು ದೋಷಾರೋಪಣ ಪಟ್ಟಿ ಸಲ್ಲಿಸಿ ಸುರೇಶನನ್ನು ಜೈಲಿಗೆ ಕಳಿಸಿದ್ದಾರೆ. ಅದು ಮಲ್ಲಿಗೆಯ ಅಸ್ಥಿಪಂಜರವೆಂದು ದಾಖಲು ಮಾಡಿಕೊಂಡು ಹಂತಕನಾಗಿ ಸುರೇಶನನ್ನು ತೋರಿಸುವ ಮೂಲಕ ಅಸ್ಥಿಪಂಜರದ ಹಿಂದಿನ ಅಸಲಿ ಕಥೆಗೆ ಎಳ್ಳು ನೀರು ಬಿಟ್ಟಿದ್ದರು. ಇದೀಗ ಸತ್ತ ಮಲ್ಲಿಗೆ ಎದ್ದು ಬಂದಿದ್ದಾಳೆ. ಹೀಗಿರುವಾಗ ಆ ಅಸ್ಥಿಪಂಜರ ಯಾರದ್ದಾಗಿರಬಹುದು? ಕೊಲೆಯಾದ ಆ ಮಹಿಳೆ ಯಾರಾಗಿರಬಹುದು? ಇದೀಗ ಪೊಲೀಸರು ಅದರ ತನಿಖೆ ಮಾಡಲೇ ಬೇಕಾಗಿದೆ.

ಇನ್ನು ಈ ಪ್ರಕರಣದಲ್ಲಿ ಪೊಲೀಸರು ಸುಲಭವಾಗಿ ಕೇಸೊಂದನ್ನು ಮುಗಿಸಿ ಬಿಡುವ ಸಲುವಾಗಿ ಇಡೀ ಪ್ರಕರಣವನ್ನು ಅಮಾಯಕನ ತಲೆಗೆ ಕಟ್ಟಿ ತಾವು ಎಸ್ಕೇಪ್ ಆಗಿಬಿಟ್ಟರಾ? ಒಂದು ವೇಳೆ ಮಲ್ಲಿಗೆ ನಾಪತ್ತೆ ಪ್ರಕರಣ ದಾಖಲಾದ ತಕ್ಷಣ ಕುಶಾಲನಗರ ಪೊಲೀಸರು ಮಲ್ಲಿಗೆ ಹಿಂದೆ ಬಿದ್ದಿದ್ದರೆ ಆಕೆಯನ್ನು ಪತ್ತೆ ಮಾಡುವುದು ಕಷ್ಟವೇನು ಆಗಿರಲಿಲ್ಲ. ಏಕೆಂದರೆ ಆಕೆ ಕೊಡಗು ಬಿಟ್ಟು ಹೋಗಿರಲಿಲ್ಲ. ಬಹುಶಃ ಬದುಕಿದ್ದ ಮಲ್ಲಿಗೆಯನ್ನು ಸಾಯಿಸಿದ್ದೇ ತನಿಖೆ ಮಾಡಿದ ಪೊಲೀಸರಿಗೆ ಸಂಕಷ್ಟ ತಂದೊಡ್ಡಿದೆ. ಸದ್ಯ ಜೈಲ್ ಸೇರಿ ಶಿಕ್ಷೆ ಅನುಭವಿಸಿ ಬಂದಿರುವ ಅಮಾಯಕ ಸುರೇಶನಿಗೆ ನ್ಯಾಯ ಕೊಡಿಸುವವರು ಯಾರು? ಆತ ಅನುಭವಿಸಿದ ಮಾನಸಿಕ ಹಿಂಸೆ, ನೋವು, ಹಂತಕ ಪಟ್ಟ ಎಲ್ಲದಕ್ಕೂ ಪರಿಹಾರ ಸಿಗುತ್ತಾ? ತನಿಖೆ ಮಾಡಿ ಜೈಲಿಗೆ ಅಟ್ಟಿದ್ದ ಪೊಲೀಸರೇ ಉತ್ತರ ಹೇಳಬೇಕಿದೆ. ☯

☞ 4

3 ☜ ಮಲ್ಲಿಗೆಗೆ ಆಗಾಗ್ಗೆ ಹೊಡೆದು ದೌರ್ಜನ್ಯ ಎಸಗುತ್ತಿದ್ದುದಲ್ಲದೆ, ವರದಕ್ಷಿಣೆ ತರುವಂತೆ ಒತ್ತಾಯ ಮಾಡುತ್ತಿದ್ದ ಎಂದೆಲ್ಲ ದೂರು ಬರೆಯಿಸಿ ಸಾಕ್ಷಿಗಳ ಸಹಿಯಾಗಿ ಹಲವರಿಂದ ಹೆಬ್ಬೆಟ್ಟು ಒತ್ತಿಸಿಕೊಂಡಿದ್ದರು.

ಇದಾದ ಬಳಿಕ ಸುರೇಶನಿಂದ ಪತ್ನಿಯನ್ನು ಹೇಗೆ ಕೊಂದೆ ಮತ್ತು ಹೆಣವನ್ನು ತಂದು ಪೊದೆಯಲ್ಲಿ ಬಿಸಾಡಿದ್ದರ ಬಗ್ಗೆಯೂ ತಪ್ಪೊಪ್ಪಿಗೆಯನ್ನು ಬರೆಯಿಸಿಕೊಳ್ಳಲಾಗಿತ್ತು. ಜತೆಗೆ ಅಸ್ಥಿಪಂಜರದ ಬಳಿ ಸಿಕ್ಕ ಬಟ್ಟೆಯನ್ನು ಮಲ್ಲಿಗೆಯ ತಾಯಿ ಗೌರಿ ಗುರುತಿಸುವುದರ ಬಗ್ಗೆ ಎಲ್ಲವನ್ನೂ ಸೇರಿಸಿ ಸಮಗ್ರ ಸಾಕ್ಷ್ಯಾಧಾರದ ವರದಿಯನ್ನು ನ್ಯಾಯಾಲಯಕ್ಕೆ


ವಕೀಲ ಪಾಂಡು ಪೂಜಾರಿ

ತನಿಖಾಧಿಕಾರಿ ಬಿ.ಜಿ. ಪ್ರಕಾಶ್ ಸಲ್ಲಿಸಿದ್ದರು. ಹೀಗಾಗಿ ಅವತ್ತು ನ್ಯಾಯಾಲಯಕ್ಕೆ ಬೆಟ್ಟದಪುರ ಬಳಿಯಲ್ಲಿ ಸಿಕ್ಕ ಮಹಿಳೆಯ ಅಸ್ಥಿಪಂಜರ ಸುರೇಶನ ಹೆಂಡತಿ ಮಲ್ಲಿಗೆಯದು ಮತ್ತು ಆಕೆಯನ್ನು ಕೊಲೆ ಮಾಡಿದ್ದು ಗಂಡ ಸುರೇಶ ಎಂಬುದು ಪೊಲೀಸರ ತನಿಖಾ ವರದಿ ಹೇಳಿದ್ದರಿಂದ ಸುರೇಶ ಜೈಲ್ ಸೇರುವಂತಾಗಿತ್ತು.

ಅಲ್ಲಿಗೆ ಪೊಲೀಸರು ನಿರಾಳರಾಗಿದ್ದರು. ಇತ್ತ ಸುರೇಶನಿಗೆ ತಾನು ಕೊಲೆ ಮಾಡಿಲ್ಲ ಎಂಬುದಕ್ಕೆ ಲಾಯರ್ ಇಟ್ಟು ವಾದ ಮಂಡಿಸುವಷ್ಟು ಶಕ್ತಿಯಿರಲಿಲ್ಲ. ಹೀಗಾಗಿ ತಾನು ಮಾಡದ ತಪ್ಪಿಗೆ ಜೈಲ್ ಸೇರಿ ಕಂಬಿ ಎಣಿಸುವಂತಾಯಿತು. ಆದರೆ ಸುರೇಶನ ತಂದೆ ಗಾಂಧಿಗೆ ತನ್ನ ಮಗ ಯಾವುದೇ ತಪ್ಪು ಮಾಡದಿದ್ದರೂ ಜೈಲ್ ಸೇರುವಂತಾಯಿತಲ್ಲ ಎಂದು ಕೊರಗುತ್ತಲೇ ಎರಡು ವರ್ಷ ಕಳೆದಿದ್ದರು. ಈ ನಡುವೆ ಅವರಿಗೆ ಸೊಸೆ ಸತ್ತಿಲ್ಲ, ಆ ಅಸ್ಥಿಪಂಜರ ಸೊಸೆಯದಲ್ಲ, ಆಕೆ ಬೇರೊಬ್ಬನೊಂದಿಗೆ ಹೋಗಿ ಜೀವನ ಕಟ್ಟಿಕೊಂಡಿದ್ದಾಳೆ ಎಂಬುದು ಗೊತ್ತಿತ್ತು. ಆದರೆ ಅದನ್ನು ಹೇಳಿದರೆ ಕೇಳುವವರು ಯಾರೂ ಇರಲಿಲ್ಲ. ಹೀಗಾಗಿ ಅವರದ್ದು ಅರಣ್ಯ ರೋಧನವಾಗಿತ್ತು.

ಹೀಗಿರುವಾಗಲೇ ಕೊಡಗಿನ ಕೆಲವು ಸಾಮಾಜಿಕ ಹೋರಾಟಗಳಲ್ಲಿ ಭಾಗಿಯಾಗುತ್ತಿದ್ದ ಮೈಸೂರಿನ ವಕೀಲ ಸಾಮಾಜಿಕ ಹೋರಾಟಗಾರ ಪಾಂಡು ಪೂಜಾರಿಯ ಅವರನ್ನು ಭೇಟಿಯಾದರೆ ನಿಮ್ಮ ಸಮಸ್ಯೆಗೆ ಪರಿಹಾರ ಸಿಗಬಹುದೆಂದು ಯಾರೋ ಸಲಹೆಯನ್ನು ಸುರೇಶನ ತಂದೆ ಗಾಂಧಿಗೆ ಹೇಳಿದ್ದರು. ಅದರಂತೆ ವಕೀಲ ಪಾಂಡು ಪೂಜಾರಿಯನ್ನು ಭೇಟಿ ಮಾಡಿ ತನ್ನ ಮಗನಿಗಾದ ಅನ್ಯಾಯವನ್ನು ಅವರ ಬಳಿ ಹೇಳಿಕೊಂಡಿದ್ದರು. ಸೊಸೆ ಯಾರೊಂದಿಗೋ ಹೋಗಿದ್ದಾಳೆ. ಆದ್ದರಿಂದ ನನ್ನ ಮಗನನ್ನು ರಕ್ಷಿಸಿ ಅಂಗಲಾಚಿಸಿದ್ದರು. ಪ್ರಕರಣದ ಇಂಚಿಂಚೂ ಮಾಹಿತಿ ಪಡೆದ ವಕೀಲ ಪಾಂಡು ಪೂಜಾರಿ ಅವರು ಪ್ರಕರಣ ಮಾಹಿತಿಯನ್ನು ಕಲೆ ಹಾಕಿದ್ದರು. ಮೊದಲಿಗೆ ಮಲ್ಲಿಗೆಯ ತಾಯಿ ಗೌರಿಯ ರಕ್ತದ ಮಾದರಿ ಸಂಗ್ರಹಿಸಿ ಡಿಎನ್ ಎಗೆ ಕಳುಹಿಸಿದ್ದರೂ ಅದರ ವರದಿ ಬಂದಿರಲಿಲ್ಲ. ಆದರೆ ಡಿಎನ್ಎ ವರದಿ ಬರುವ ಮುನ್ನವೇ ಪೊಲೀಸರು ಸುರೇಶನ ವಿರುದ್ಧ ಆರೋಪ ಪಟ್ಟಿಯನ್ನು ನ್ಯಾಯಾಲಯಕ್ಕೆ ಕಳುಹಿಸಿರುವುದು ಬೆಳಕಿಗೆ ಬಂದಿತ್ತು.

ಇನ್ನು ಸುರೇಶನ ಪೂರ್ವಾಪರದ ಬಗ್ಗೆ ಮಾಹಿತಿ ಕಲೆ ಹಾಕಿದ ವೇಳೆಯೂ ಆತ ಅಮಾಯಕ ಎಂಬುದು ಗೊತ್ತಾಗಿತ್ತು. ಹೀಗಾಗಿ ತಮ್ಮ ಸ್ನೇಹಿತ ಹೈಕೋರ್ಟ್ ವಕೀಲರ ಮೂಲಕ ಎರಡು ವರ್ಷದ ಬಳಿಕ ಸುರೇಶನಿಗೆ ಜಾಮೀನು ಕೊಡಿಸಿದ್ದರು. ಜೈಲಿನಿಂದ ಬಿಡುಗಡೆಯಾಗಿ ಬಂದ ಬಳಿಕವೂ ಸುರೇಶ್ ಮಾತ್ರ ಹೆಂಡತಿ ಮಲ್ಲಿಗೆಯನ್ನು ನಾನು ಕೊಲೆ ಮಾಡಿಲ್ಲ. ಆಕೆ ಯಾವುದೇ ಕಾರಣಕ್ಕೂ ಸತ್ತಿಲ್ಲ ಜೀವಂತವಾಗಿದ್ದಾಳೆ ಎಂದೇ ಹೇಳುತ್ತಿದ್ದನು. ಈ ಸಂಬಂಧ ನ್ಯಾಯಾಲಯದಲ್ಲಿ ಪ್ರಸ್ತಾಪಿಸಿದ್ದರೂ ನ್ಯಾಯಾಲಯ ಒಪ್ಪಿಕೊಳ್ಳುವಂತಿರಲಿಲ್ಲ. ಏಕೆಂದರೆ ಅದಾಗಲೇ ಈ ಪ್ರಕರಣದಲ್ಲಿ 59 ಮಂದಿ ಸಾಕ್ಷಿಗಳಿದ್ದರು.

ಈ ಸಂಬಂಧ ನ್ಯಾಯಾಲಯದಲ್ಲಿ ವಿಚಾರಣೆಗಳು ಆರಂಭವಾಗಿದ್ದವು. ದೂರು ಸಲ್ಲಿಸಿದ್ದ ಮಲ್ಲಿಗೆ ತಾಯಿ ಗೌರಿ ಅಳಿಯ ಸುರೇಶ ಮಗಳ ಮೇಲೆ ದೌರ್ಜನ್ಯ ಮಾಡಿಲ್ಲ. ಅವಳು ಸತ್ತಿಲ್ಲ ಎಂದು ಹೇಳಿದ್ದರು. ಪೊಲೀಸರ ಮಹಜರ್ ನಲ್ಲಿ ಹಾಜರು ಪಡಿಸಿದ್ದ ಬಟ್ಟೆಗಳನ್ನು ನಾನು ಗುರುತಿಸಿಲ್ಲ ಪೊಲೀಸರು ನನ್ನಿಂದ ಹೆಬ್ಬೆಟ್ಟು ಒತ್ತಿಸಿಕೊಂಡರು. ಪೊಲೀಸರು ಅಳಿಯನಿಗೆ ಹೊಡೆಯುತ್ತಿದ್ದರಿಂದ ಹೆದರಿ ಹೆಬ್ಬೆಟ್ಟು ಒತ್ತಿದೆ ಎಂದು ನ್ಯಾಯಾಧೀಶರ ಮುಂದೆ ಹೇಳಿಕೆ ನೀಡಿದ್ದರು. ಇನ್ನೊಂದೆಡೆ ಅಪ್ರಾಪ್ತ ಮಗ ಪೊಲೀಸರು ಹೇಳಿದಂತೆ ನಾನು ಬರೆದಿದ್ದೇನೆ. ನನ್ನ ತಂದೆ ಕುಡಿಯುತ್ತಿರಲಿಲ್ಲ ಎಂದು ಹೇಳಿಕೆ ನೀಡಿದ್ದನು. ಈ ನಡುವೆ ನ್ಯಾಯಾಲಯಕ್ಕೆ ಹಾಜರಾಗಿದ್ದ ಎಂಟು ಜನರು ಕೂಡ ಮಲ್ಲಿಗೆ ಸತ್ತಿಲ್ಲ ಎಂದೇ ಸಾಕ್ಷ್ಯ ಹೇಳಿದ್ದರು. ಈ ಸಂಬಂಧ ಪ್ರಕರಣದ ತನಿಖೆ ನಡೆಸಿದ ತನಿಖಾಧಿಕಾರಿಗಳನ್ನು ನ್ಯಾಯಾಲಯಕ್ಕೆ ಕರೆಯಿಸಿದ ನ್ಯಾಯಾಧೀಶರು ಈ ಬಗ್ಗೆ ಕೇಳಿದಾಗ ತನಿಖಾಧಿಕಾರಿ ಬಿ.ಜಿ. ಪ್ರಕಾಶ್ ಅವರು ತಾವು ಸಲ್ಲಿಸಿರುವ ಆರೋಪ ಪಟ್ಟಿ ಸರಿಯಾಗಿದೆ ಎಂದು ಸಮರ್ಥನೆ ನೀಡಿದ್ದರು.

ಇದೆಲ್ಲವೂ ಕೊಲೆಯಾಗಿ ಹೋದ ಮಹಿಳೆಯ ಅಸ್ಥಿಪಂಜರದ ಸುತ್ತ ಹುಟ್ಟಿಕೊಂಡ ಕಥೆಯಾಗಿದ್ದು, ಸದ್ಯಕ್ಕೆ ಪೊಲೀಸರ ಪ್ರಕಾರ ಆ ಅಸ್ಥಿಪಂಜರ ಸುರೇಶನ ಹೆಂಡತಿ ಮಲ್ಲಿಗೆಯದ್ದಾಗಿದೆ. ಆದರೆ ಮಲ್ಲಿಗೆ ನಿಜವಾಗಿಯೂ ಸತ್ತಿರಲಿಲ್ಲ. ಆಕೆ ಪ್ರಿಯಕರ ಗಣೇಶ ಎಂಬಾತನ ಜತೆ ದಕ್ಷಿಣ ಕೊಡಗಿನ ಪೊನ್ನಂಪೇಟೆ ತಾಲೂಕಿನ ಟಿ.ಶೆಟ್ಟಿಗೇರಿ ಎಂಬಲ್ಲಿ ತೋಟದಲ್ಲಿ ಕೆಲಸ ಮಾಡಿಕೊಂಡು ಆರಾಮಾಗಿದ್ದಳು. ಮಕ್ಕಳು ಗಂಡ, ತಾಯಿ ಸಂಬಂಧಿಕರು ಎಲ್ಲರನ್ನು ಬಿಟ್ಟು ತನಗೇನು ಗೊತ್ತೇ ಇಲ್ಲ ಎಂಬಂತೆ ಜೀವನ ಸಾಗಿಸಿಕೊಂಡು ಹೋಗುತ್ತಿದ್ದಳು.


ಎಸ್ಪಿ ವಿಷ್ಣುವರ್ಧನ

ಇತ್ತ ನ್ಯಾಯಾಲಯದಲ್ಲಿ ಆಕೆ ಸತ್ತಿಲ್ಲ ಬದುಕಿದ್ದಾಳೆ ಎಂಬುದನ್ನು ನಿರೂಪಿಸಲು ಹೋರಾಟ ಆರಂಭವಾಗಿತ್ತು. ಅವತ್ತು ಏಪ್ರಿಲ್ 1 ಮಂಗಳವಾರ ಸಂಜೆ 4.30ರ ಸಮಯ ಮಡಿಕೇರಿ ನಗರದ ಹಳೇ ಬಸ್ ನಿಲ್ದಾಣ ಬಳಿಯ ಹೋಟೆಲ್ ವೊಂದರಲ್ಲಿ ಮಲ್ಲಿಗೆ ತನ್ನ ಪ್ರಿಯಕರ ಗಣೇಶ್ ಜತೆಗೆ ತಿಂಡಿ ತಿನ್ನುತ್ತಾ ಖುಷಿಯಾಗಿದ್ದಳು. ಆಕೆಗೆ ತಾನು ಗಂಡನ ಬಿಟ್ಟು ಹೋದ ಬಳಿಕ ಏನೇನಾಯಿತು ಎಂಬುದು ಗೊತ್ತಿತ್ತೋ ಇಲ್ಲವೋ? ಆದರೆ ಏನೂ ಆಗಿಲ್ಲ ಎಂಬಂತೆ ಆಕೆ ಇದ್ದಳು. ಇದನ್ನು ಸುರೇಶನ ಸಂಬಂಧಿಕರೊಬ್ಬರು ನೋಡಿದ್ದಾರೆ. ತಕ್ಷಣ ಸುರೇಶನಿಗೆ ಮೊಬೈಲ್ ಮೂಲಕ ತಿಳಿಸಿದ್ದಾರೆ. ಆತ ವಕೀಲ ಪಾಂಡು ಪೂಜಾರಿ ಅವರಿಗೆ ತಿಳಿಸಿದ್ದಾರೆ. ಅವರು ನೀಡಿದ ಸೂಚನೆ ಮೇರೆಗೆ ಮಡಿಕೇರಿ ನಗರ ಪೊಲೀಸ್ ಠಾಣೆಗೆ ತೆರಳಿ ಮಾಹಿತಿ ನೀಡುವಂತೆ ಹೇಳಿದ್ದಾರೆ. ಅದರಂತೆ ಠಾಣೆಗೆ ತೆರಳಿದ ಸುರೇಶ್ ನಡೆದ ಘಟನೆ ಬಗ್ಗೆ ವಿವರಿಸಿದ್ದು ಮಲ್ಲಿಗೆ ಮತ್ತು ಗಣೇಶ್ ನನ್ನು ಠಾಣೆಗೆ ಕರೆತಂದಿದ್ದಾರೆ.

ಆ ನಂತರ ರಾತ್ರಿ 10ಗಂಟೆಗೆ ಸುಮಾರಿಗೆ ಮಲ್ಲಿಗೆಯನ್ನು ಬೈಲುಕುಪ್ಪೆ ಪೊಲೀಸ್ ಠಾಣೆಗೆ ಒಪ್ಪಿಸಲಾಗಿದೆ. ಆದರೆ ಅಷ್ಟರಲ್ಲಿಯೇ ಮಲ್ಲಿಗೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಬೇಕಾಗಿರುವುದರಿಂದ ವಕೀಲ ಪಾಂಡು ಪೂಜಾರಿ ಅವರು ಬೈಲುಕುಪ್ಪೆ ಮತ್ತು ಬೆಟ್ಟದಪುರ ಪೊಲೀಸ್ ಠಾಣೆಗೆ ತೆರಳಿದರೆ ಅವರು ನಮಗೆ ಕುಶಾಲನಗರ ಪೊಲೀಸರು ಒಪ್ಪಿಸಿಲ್ಲ ಎಂದು ಹೇಳಿದ್ದಾರೆ. ಅಲ್ಲಿಂದ ಕುಶಾಲನಗರಕ್ಕೆ ತೆರಳಿದರೆ ಅಲ್ಲಿನ ಸಿಬ್ಬಂದಿ ನಮಗೆ ಆಕೆಯ ಬಗ್ಗೆ ಗೊತ್ತಿಲ್ಲವೆಂದು ಹೇಳಿ ತೆಪ್ಪಗಾಗಿದ್ದಾರೆ.



ಪೊಲೀಸರೊಂದಿಗೆ ಮಲ್ಲಿಗೆ

ಈ ವಿಚಾರದಲ್ಲಿ ಸ್ವಲ್ಪ ಎಡವಿದರೂ ಅವತ್ತಿನ ತನಿಖೆ ನಡೆಸಿದ್ದ ಬಿ.ಜಿ.ಪ್ರಕಾಶ್ ಅವರು ಈಗ ಕುಶಾಲನಗರ ಟೌನ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವುದರಿಂದ ಎಡವಟ್ಟಾಗಬಹುದೆಂದು ತಿಳಿದ ವಕೀಲ ಪಾಂಡು ಪೂಜಾರಿ ಅವರು ಈ ಸಂಬಂಧ ಕೊಡಗು ಎಸ್ಪಿ ರಾಮರಾಜನ್ ಅವರನ್ನು ಮೊಬೈಲ್ ನಲ್ಲಿ ಸಂಪರ್ಕಿಸಿ ಮಾತನಾಡಿದಾಗ ಅವರು ಮಡಿಕೇರಿ ಠಾಣೆಯಿಂದ ಕುಶಾಲನಗರ ಠಾಣೆಗೆ ಮಲ್ಲಿಗೆಯನ್ನು ಕರೆದೊಯ್ದ ಬಗ್ಗೆ ತಿಳಿಸಿದ್ದಲ್ಲದೆ ನಾಪತ್ತೆಯ ಪ್ರಕರಣವನ್ನು ಕ್ಲೋಸ್ ಮಾಡಲಾಗಿದೆ. ಅದನ್ನು ರೀಓಪನ್ ಮಾಡಿ ಮಲ್ಲಿಗೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸುವ ಭರವಸೆ ನೀಡಿದ್ದಾರೆ. ಅಷ್ಟರಲ್ಲಿಯೇ ಏಪ್ರಿಲ್ 2 ಮಧ್ಯಾಹ್ನವಾಗಿತ್ತು. ಆದರೆ ಪೊಲೀಸರು ಮಲ್ಲಿಗೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸುವುದು ಅನುಮಾನ ಎಂದರಿತ ವಕೀಲ ಪಾಂಡು ಪೂಜಾರಿ ಅವರು ಮೈಸೂರಿನ ಹಿರಿಯ ವಕೀಲ ಬಿ.ಜಿ. ರಾಘವೇಂದ್ರ ಅವರನ್ನು ಸಂಪರ್ಕಿಸಿ ಮಾಹಿತಿ ನೀಡಿದ್ದಾರೆ. ಅವರು ಮೈಸೂರಿನ 5ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿ ಕೊಲೆಯಾಗಿದ್ದಾಳೆ ಎನ್ನಲಾದ ಮಹಿಳೆ ಜೀವಂತವಾಗಿ ಸಿಕ್ಕಿದ್ದಾಳೆ ಎಂದು ತಿಳಿಸಿದ್ದಲ್ಲದೆ ಏನೆಲ್ಲ ನಡೆಯಿತು ಎನ್ನುವ ವಿದ್ಯಮಾನವನ್ನು ವಿವರಿಸಿದ್ದಾರೆ. ಇದನ್ನು ಪರಿಗಣಿಸಿದ ನ್ಯಾಯಾಧೀಶರು ಪತ್ತೆಯಾಗಿರುವ ಮಲ್ಲಿಗೆಯನ್ನು ತಮ್ಮ ಮುಂದೆ ಹಾಜರುಪಡಿಸುವಂತೆ ಬೆಟ್ಟದಪುರ ಪೊಲೀಸರಿಗೆ ಆದೇಶ ಮಾಡಿದ್ದಾರೆ.

ನ್ಯಾಯಾಲಯದ ಆದೇಶದಂತೆ ಪೊಲೀಸರು ಮಲ್ಲಿಗೆಯನ್ನು ನ್ಯಾಯಾಧೀಶರ ಮುಂದೆ ಹಾಜರುಪಡಿಸಿದಾಗ ಆಕೆ ತನ್ನ ಪತಿ, ತಾಯಿ. ಮಕ್ಕಳು ಸಂಬಂಧಿಕರನ್ನು ಗುರುತಿಸಿದ್ದಾಳೆ. ಅಲ್ಲದೆ ಗಂಡನ ತೊರೆದು ಗಣೇಶನೊಂದಿಗೆ ಸಂಸಾರ ನಡೆಸುತ್ತಿರುವ ಬಗ್ಗೆಯೂ ತಿಳಿಸಿದ್ದಾಳೆ. ಅಲ್ಲದೆ ಮಹಜರು ವೇಳೆ ಸಿಕ್ಕಿರುವ ಬಟ್ಟೆಯನ್ನು ಪೊಲೀಸರು ನ್ಯಾಯಾಲಯಕ್ಕೆ ಹಾಜರುಪಡಿಸಿದಾಗ ಅದು ನನ್ನದಲ್ಲ ಎಂದು ಹೇಳಿದ್ದಾಳೆ. ಗಂಡನಿಂದಲೇ ಮಲ್ಲಿಗೆ ಹತ್ಯೆಯಾಗಿದ್ದಾಳೆ ಎಂದು ಪೊಲೀಸರು ಆರೋಪಪಟ್ಟಿಯಲ್ಲಿ ಉಲ್ಲೇಖಿಸಿದ್ದ ಮಲ್ಲಿಗೆ ಸತ್ತಿಲ್ಲ, ಬದುಕಿದ್ದಾಳೆ ಆಕೆಯ ಗಂಡ ಅಮಾಯಕನಾಗಿದ್ದು, ವಿನಾ ಕಾರಣ ಎರಡು ವರ್ಷ ಜೈಲ್ ಶಿಕ್ಷೆ ಅನುಭವಿಸಿ ಬಂದಿದ್ದಾನೆ ಈಗಲೂ ಕೊಲೆ ಪ್ರಕರಣದ ಆರೋಪಿಯಾಗಿ ವಿಚಾರಣೆ ಎದುರಿಸುತ್ತಿದ್ದಾನೆ ಎಂಬುದನ್ನು ಮನವರಿಕೆ ಮಾಡಿಕೊಂಡ ನ್ಯಾಯಾಧೀಶರು ತಕ್ಷಣವೇ ಜಿಲ್ಲಾ ಎಸ್ಪಿಗೆ ಸುರೇಶನ ವಿರುದ್ಧ ಆರೋಪ ಪಟ್ಟಿ ಸಲ್ಲಿಸಿದ್ದ ತನಿಖಾಧಿಕಾರಿ ಸರ್ಕಲ್ ಇನ್ಸ್‌ಪೆಕ್ಟರ್ ಬಿ.ಜಿ. ಪ್ರಕಾಶ್, ಎಎಸ್ಐ ಸೋಮಶೇಖರ್ ಸಿಬ್ಬಂದಿಗಳಾದ ಜಿತೇಂದ್ರ, ಕುಮಾರ್, ಎಂ. ಪ್ರಕಾಶ್, ಮಹೇಶ್‌ಕುಮಾರ್ ಅವರು ಯಾವುದೇ ಸಬೂಬು ಹೇಳದೆ ನ್ಯಾಯಾಲಯದ ಮುಂದೆ ಹಾಜರಾಗಬೇಕೆಂದು ಸೂಚಿಸಿದ್ದಾರೆ ಅದರಂತೆ ಏಪ್ರಿಲ್ 3ರಂದು ಮೈಸೂರು ಎಸ್ಪಿ ವಿಷ್ಣುವರ್ಧನ್, ಸರ್ಕಲ್ ಇನ್ಸ್‌ಪೆಕ್ಟರ್ ಬಿ.ಜಿ.ಪ್ರಕಾಶ್ ಸೇರಿದಂತೆ ತನಿಖೆ ನಡೆಸಿದ ತಂಡ ನ್ಯಾಯಾಲಯದ ಮುಂದೆ ಹಾಜರಾಗಿದೆ. ನ್ಯಾಯಾಧೀಶರು ಅವರಿಗೆ ಮಲ್ಲಿಗೆಯನ್ನು ತೋರಿಸಿ ಆರೋಪ ಪಟ್ಟಿಯ ಬಗ್ಗೆ ಕೇಳಿದಾಗ ಮೌನಕ್ಕೆ ಜಾರಿದ್ದಲ್ಲದೆ, ತಲೆಬಾಗಿ ನಿಂತಿದ್ದಾರೆ.

ಆ ನಂತರ ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪ ಪಟ್ಟಿ ನ್ಯಾಯಾಲಯಕ್ಕೆ ಸಲ್ಲಿಕೆಯಾಗಿದ್ದು ಹೇಗೆ? ನ್ಯಾಯ ರೀತಿಯ ಪ್ರಕರಣದ ಇತ್ಯರ್ಥಕ್ಕೆ ಮಾರ್ಗೋಪಾಯ ವೇನು? ಮೊದಲಾದ ವಿಚಾರಕ್ಕೆ ಸಂಬಂಧಿಸಿದಂತೆ ಸಮಗ್ರ ವರದಿಯನ್ನು 15ದಿನದೊಳಗೆ ನೀಡುವಂತೆ ಆದೇಶಿಸಿದ್ದಲ್ಲದೆ, ಪ್ರಕರಣದ ವಿಚಾರಣೆಯನ್ನು ಏ.17ಕ್ಕೆ ಮುಂದೂಡಿದ್ದಾರೆ.


ಈ ನಡುವೆ ನ್ಯಾಯಾಲಯಕ್ಕೆ ಸುಳ್ಳು ದೋಷಾರೋಪಣ ಪಟ್ಟಿ ಸಲ್ಲಿಸಿ, ಅಮಾಯಕನಿಗೆ ಶಿಕ್ಷೆಗೀಡು ಮಾಡಿದ ಪೊಲೀಸ್ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ಸರ್ಕಾರಕ್ಕೆ ಆದೇಶಿಸಬಹುದು. ನ್ಯಾಯಾಲಯದ ಸೂಚನೆಯಂತೆ ಸರ್ಕಾರ ತನಿಖಾಧಿಕಾರಿಗಳ ವಿರುದ್ಧ ಇಲಾಖೆ ವಿಚಾರಣೆ ನಡೆಸಿ ಕ್ರಮ ಕೈಗೊಳ್ಳಲಿದೆ. ಇದರ ಹೊರತಾಗಿ ನ್ಯಾಯಾಲಯ ಪ್ರಕರಣದ ಆರೋಪಿ ಸುರೇಶ್ ಅವರು ಅನಗತ್ಯವಾಗಿ ಜೈಲು ಶಿಕ್ಷೆ ಅನುಭವಿಸಿದ್ದಕ್ಕಾಗಿ ಪರಿಹಾರವನ್ನೂ ಕೊಡಿಸಬಹುದು ಎಂದು ಆರೋಪಿ ಪರ ವಕೀಲ ಬಿ.ಎಸ್.ಪಾಂಡು ಪೂಜಾರಿ ತಿಳಿಸಿದ್ದಾರಲ್ಲದೆ, ಪ್ರಕರಣ ಸಂಬಂಧ ಮಾನವ ಹಕ್ಕು ಆಯೋಗಕ್ಕೆ ದೂರು ನೀಡುವುದಲ್ಲದೇ, ಕಕ್ಷಿದಾರನಿಗೆ ಪರಿಹಾರ ನೀಡುವಂತೆ ಹಾಗೂ ತಪ್ಪು ಎಸಗಿರುವ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ಹೈಕೋರ್ಟ್ ಮೆಟ್ಟಿಲೇರುವುದಾಗಿ ತಿಳಿಸಿದ್ದಾರೆ. ಒಟ್ಟಾರೆ ಈ ಪ್ರಕರಣ ಭಾರೀ ಸದ್ದು ಮಾಡುವ ಸಾಧ್ಯತೆಯಿದ್ದು, ತನಿಖಾಧಿಕಾರಿಗಳ ತಲೆದಂಡವಾಗುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ. ☯



# ಹೆಂಡತಿಯನ್ನು ಕೊಂದು ಪೀಸ್ ಪೀಸ್ ಮಾಡಿ ಸೂಟ್‌ಕೇಸ್‌ನಲ್ಲಿ ತುಂಬಿದ್ದೇಕೆ?


ಕೊಲೆಯಾದ ಗೌರಿ

**ಬೆಂಗಳೂರಿನ ಹುಳಿಮಾವು ಸಮೀಪದಲ್ಲಿ ನಡೆದ ಗೌರಿ ಹತ್ಯೆ ಪ್ರಕರಣ ರಾಜ್ಯವನ್ನೇ ಬೆಚ್ಚಿಬೀಳಿಸಿದೆ. ಪ್ರಕರಣದ ತನಿಖೆಯನ್ನು ಬೆಂಗಳೂರು ಪೊಲೀಸರು ನಡೆಸುತ್ತಿದ್ದಾರೆ. ತನಿಖೆ ವೇಳೆ ಪೊಲೀಸರಿಗೆ ಹಲವು ವಿಚಾರಗಳು ತಿಳಿದಿವೆ. ಗೌರಿ ಮತ್ತು ರಾಕೇಶ್ ಪ್ರೀತಿಸಿ ಮದುವೆಯಾಗಿದ್ದಾರೆ. ಕುಟುಂಬದ ವಿರೋಧದ ನಡುವೆಯೋ ಗೌರಿ ಮತ್ತು ರಾಕೇಶ್ ಮದುವೆಯಾದರೂ, ಅವರ ಮಧ್ಯೆ ಗಲಾಟೆಯಾಗಿದ್ದು ಏಕೆ? ಇಲ್ಲಿದೆ ವಿವರ...**


ಆರೋಪಿ ರಾಕೇಶ್‌ನೊಂದಿಗೆ ಗೌರಿ

ಬೆಂಗಳೂರಿನ ಹುಳಿಮಾವು ಸಮೀಪದ ದೊಡ್ಡಕಮ್ಮನಹಳ್ಳಿಯ ಗೌರಿ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರ ತನಿಖೆ ವೇಳೆ ಹಲವು ವಿಚಾರಗಳು ಬಹಿರಂಗಗೊಂಡಿವೆ. ಮೃತ ಗೌರಿ ಮೂಲತಃ ಬೆಳಗಾವಿದವರು. ಗೌರಿ ಪತಿ, ಆರೋಪಿ ರಾಕೇಶ್ ಮುಂಬೈ ಮೂಲದವನು. ಗೌರಿ ಐದು ವರ್ಷದ ಮಗುವಿದ್ದಾಗ ತಂದೆ ಮೃತಪಟ್ಟಿದ್ದಾರೆ. ಗೌರಿ ತಾಯಿಯ ಆಶ್ರಯದಲ್ಲಿ ಬೆಳದಿದ್ದರು. ಆರೋಪಿ ರಾಕೇಶ್ ಮೃತ ಗೌರಿಯ ತಾಯಿಯ ಅಣ್ಣನ ಮಗನಾಗಿದ್ದಾನೆ. ಅಂದ್ರೆ, ವರಸೆಯಲ್ಲಿ ಗೌರಿಗೆ ರಾಕೇಶ್ ಸೋದರಮಾವನ ಮಗನಾಗುತ್ತಾನೆ. ಗೌರಿ ಮತ್ತು ರಾಕೇಶ್ ಪ್ರೀತಿಸಿ ಮದುವೆಯಾಗಿದ್ದಾರೆ. ಇವರ ಮದುವೆಗೆ ಗೌರಿ ತಾಯಿ ಮತ್ತು ಸಹೋದರ ಗಣೇಶ ವಿರೋಧ ವ್ಯಕ್ತಪಡಿಸಿದ್ದರು. ವಿರೋಧದ ನಡುವೆಯೂ ಗೌರಿ ಮತ್ತು ಗಣೇಶ ವಿವಾಹವಾಗಿದ್ದರು.

ಮದುವೆಯ ನಂತರ ಗಂಡನ ಮನೆಯವರಿಗೂ ಗೌರಿಗೂ ಹೊಂದಾಣಿಕೆಯಾಗಿರಲಿಲ್ಲ, ಆಗ, ನಾವಿಬ್ಬರೂ ಬೇರೆ ಹೋಗಿ ಜೀವನ ಮಾಡುತ್ತೇವೆ ಎಂದು ಗೌರಿ ಹಾಗೂ ರಾಕೇಶ್ ಹೇಳಿದ್ದಾರೆ. ಮೃತ ಗೌರಿ ಮಾಸ್ ಕಮ್ಯೂನಿಕೇಷನ್ ಪದವಿಧರೆಯಾಗಿದ್ದರು. ಆರೋಪಿ ರಾಕೇಶ್ ಬಿಕಾಂ ಪದವಿಧರನಾಗಿದ್ದಾನೆ.

**ಕೆಲಸದ ವಿಚಾರಕ್ಕೆ ಗಲಾಟೆ, ಕೊಲೆಯಲ್ಲಿ ಅಂತ್ಯ**

ರಾಕೇಶ್ ಹಾಗೂ ಗೌರಿ ದಂಪತಿ ಒಂದು ತಿಂಗಳ ಹಿಂದೆ ಬೆಂಗಳೂರಿಗೆ ಬಂದು ವಾಸವಾಗಿದ್ದರು. ರಾಕೇಶ್‌ಗೆ ಇತ್ತೀಚೆಗೆ ಖಾಸಗಿ ಕಂಪನಿಯಲ್ಲಿ ಪ್ರಾಜೆಕ್ಟ್ ಮ್ಯಾನೇಜರ್ ಆಗಿ ಕೆಲಸ ಸಿಕ್ಕಿತ್ತು. ರಾಕೇಶ್ ವರ್ಕ್ ಫ್ರಮ್ ಹೋಮ್ ಮಾಡುತ್ತಿದ್ದನು. ಮೃತ ಗೌರಿ ಸಹ ಈ ಹಿಂದೆ ಖಾಸಗಿ


ಶವವನ್ನು ಸಾಗಿಸುತ್ತಿರುವುದು

ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು. ಆದರೆ, ಇತ್ತೀಚೆಗೆ ಗೌರಿ ಕೆಲಸ ಬಿಟ್ಟಿದ್ದರು. ಗೌರಿ ಹೊಸದಾಗಿ ಕೆಲಸ ಹುಡುಕುತಿದ್ದರು.

**ಪತ್ನಿ ಎಸೆದ ಚಾಕುವಿನಿಂದ ಕೊಲೆ**

ಇದೇ ಕೆಲಸ ಹುಡುಕುವ ವಿಚಾರಕ್ಕೆ ಇಬ್ಬರ ನಡುವೆ ಮಾರ್ಚ್ 26 ರಂದು ಗಲಾಟೆ ನಡೆದಿತ್ತು. ಕೋಪದಲ್ಲಿ ಗೌರಿ ಅಡುಗೆ ಮನೆಯಲ್ಲಿನ ಚಾಕುವನ್ನು ರಾಕೇಶ್ ಮೇಲೆ ಎಸೆದಿದ್ದಾರೆ. ಚಾಕು ರಾಕೇಶ್ ಕೈಗೆ ತಗುಲಿ ಗಾಯವಾಗಿತ್ತು. ಆಗ ರೊಚ್ಚಿಗೆದ್ದ ಪತಿ ರಾಕೇಶ್, ಪತ್ನಿ ಎಸೆದ ಚಾಕುವಿನಿಂದಲೇ ಗೌರಿಯ ಕುತ್ತಿಗೆಗೆ ಚಾಕು ಇರಿದು ಹತ್ಯೆಗೈದಿದ್ದಾನೆ.

ಹತ್ಯೆ ಮಾಡಿದ ಬಳಿಕ ರಾಕೇಶ್, ಪತ್ನಿ ಗೌರಿಯ ದೇಹವನ್ನು ಟ್ರ್ಯಾಲಿ ಬ್ಯಾಗ್ ರೀತಿಯ ಸೂಟ್‌ಕೇಸ್‌ಗೆ ತುಂಬಿದ್ದಾನೆ. ಸೂಟ್‌ಕೇಸ್‌ಗೆ ತುಂಬುವ ವೇಳೆ ಪತ್ನಿಯ ಮೃತದೇಹದ ಕಾಲುಗಳನ್ನು ಮುರಿದಿದ್ದಾನೆ. ಮೃತದೇಹದವನ್ನು ಸೂಟ್‌ಕೇಸ್ ಕೊಂಡೊಯ್ಯುವ ವೇಳೆ ಸೂಟ್‌ಕೇಸ್ ಹ್ಯಾಂಡಲ್ ಕಟ್ ಆಗಿದೆ. ಆಗ, ಸೂಟ್‌ಕೇಸ್ ಅನ್ನು ಮನೆಯಲ್ಲಿ ಬಿಟ್ಟು, ಕಾರಿನಲ್ಲಿ ಪರಾರಿಯಾಗಿದ್ದಾನೆ.

ಹತ್ಯೆ ಮಾಡಿದ ಮರುದಿನ ಮಾರ್ಚ್ 27 ರ ಮಧ್ಯಾಹ್ನ ರಾಕೇಶ್, ಗೌರಿ ಅಣ್ಣನಿಗೆ ಕರೆ ಮಾಡಿ, ನಿನ್ನ ತಂಗಿಯನ್ನು ಹತ್ಯೆ ಮಾಡಿದ್ದೇನೆ. ನಂತರ ಮನೆಯ ನೆಲಮಹಡಿಯಲ್ಲಿ ವಾಸವಿರುವವರಿಗೆ ಕರೆ ಮಾಡಿ, ನನ್ನ ಪತ್ನಿ ಮನೆಯಲ್ಲಿ ನೇಣಿಗೆ ಶರಣಾಗಿದ್ದಾಳೆ ಮನೆ ಮಾಲೀಕರಿಗೆ ತಿಳಿಸಿ


ಕೃತ್ಯ ನಡೆದ ಸ್ಥಳದಲ್ಲಿ ಪೊಲೀಸರು

ಎಂದಿದ್ದಾನೆ. ನಂತರ ರಾಕೇಶ್, ತನ್ನ ಮೊಬೈಲ್ ಸ್ವಿಚ್ ಆಫ್ ಮಾಡಿದ್ದಾನೆ. ಬಳಿಕ, ಮನೆ ಮಾಲೀಕರು ಪೊಲೀಸರಿಗೆ ವಿಚಾರ ತಿಳಿಸಿದ್ದಾರೆ.

**ಪುಣೆಗೆ ಹೊರಟ್ಟಿದ್ದವ ಆತ್ಮಹತ್ಯೆಗೆ ಯತ್ನ**

ರಾಕೇಶ್ ಕಾರಿನಲ್ಲಿ ಮುಂಬಯಿಗೆ ಹೋಗುತ್ತಿದ್ದನು. ದಾರಿ ಮಧ್ಯೆ ರಾಕೇಶ್, ಪುಣೆಯ ಶಿರವಾರ ಪೋಲಿಸ್ ಠಾಣೆಗೆ ಜಿರಳೆ ಔಷಧಿ ಸೇವಿಸಿ ತೆರಳಿದ್ದಾನೆ. ಠಾಣೆಯಲ್ಲಿ ಕೊಲೆ ಮಾಡಿರುವ ವಿಚಾರ ತಿಳಿಸಿದ್ದಾನೆ. ಬಳಿಕ, ಆರೋಪಿ ರಾಕೇಶ್‌ನನ್ನು ಸತಾರದ ಸ್ಥಳೀಯ ಆಸ್ಪತ್ರೆಗೆ ದಾಖಲಿಸಿದ್ದಾರೆ. ತಡರಾತ್ರಿ ಪುಣೆಯ ಸಸೂನ್ ಆಸ್ಪತ್ರೆಗೆ ರವಾನೆ ಮಾಡಿದ್ದಾರೆ. ಸಸೂನ್ ಆಸ್ಪತ್ರೆಗೆ ಹುಳಿಮಾವು ಪೊಲೀಸರ ತಂಡ ಭೇಟಿ ನೀಡಿ, ಆರೋಪಿ ರಾಕೇಶ್‌ನನ್ನು ಬಂಧಿಸಿ, ಬೆಂಗಳೂರಿಗೆ ಕರೆ ತಂದಿದ್ದಾರೆ. ☯

# ನೆಟ್ ಫ್ಲಿಕ್ಸ್ ಸಿರೀಸ್ ನೋಡಿ ಬ್ಯಾಂಕಿನ ಲಾಕರನ್ನೇ ದರೋಡೆಗೈದ ಖದೀಮರು!

ಉದ್ಯಮಿ ವಿಸ್ತರಿಸಲು ಸಾಲ ನೀಡಲಿಲ್ಲವೆಂದು ಸಿಟ್ಟಿನಲ್ಲಿ ಯುವಕನೊಬ್ಬ ಎಸ್‌ಬಿಐ ಬ್ಯಾಂಕ್ ಕಚೇರಿಯನ್ನೇ ಲೂಟಿಗೈಯಲು ಸಂಚು ಹೂಡಿದ್ದಲ್ಲದೆ, ನೆಟ್ ಫ್ಲಿಕ್ಸ್ ಸರಣಿಗಳನ್ನು ನೋಡಿ ತಂಡ ಕಟ್ಟಿಕೊಂಡು ಸದ್ದಿಲ್ಲದೆ ದರೋಡೆ ಕೃತ್ಯ ನಡೆಸಿದ ಪ್ರಕರಣವನ್ನು ಆರು ತಿಂಗಳ ಬಳಿಕ ಪೊಲೀಸರು ಪತ್ತೆಹಚ್ಚಿದ ಘಟನೆ ದಾವಣಗೆರೆಯಲ್ಲಿ ನಡೆದಿದ್ದು ಪೊಲೀಸರನ್ನೇ ಬೆಚ್ಚಿಬೀಳಿಸಿದೆ.

ನೆಟ್‌ಫ್ಲಿಕ್ಸ್‌ನಲ್ಲಿ ದರೋಡೆ ಕೃತ್ಯದ ವೆಬ್ ಸೀರಿಸ್ ನೋಡಿ ಕಳ್ಳತನಕ್ಕೆ ಪ್ಲಾನ್ ಹಾಕಿದ್ದ ಆರು ಆರೋಪಿಗಲನ್ನು ದಾವಣಗೆರೆ ಪೊಲೀಸರು ಬಂಧಿಸಿದ್ದಾರೆ. ಅಲ್ಲದೆ ತಮಿಳುನಾಡಿನ ಬಾವಿಯೊಂದರಲ್ಲಿ ಹಾಕಿಟ್ಟಿದ್ದ 13 ಕೋಟಿ ಮೌಲ್ಯದ 17 ಕೆಜಿ ಚಿನ್ನವನ್ನು ವಶಕ್ಕೆ ಪಡೆಯಲಾಗಿದೆ.

2024ರ ಅಕ್ಟೋಬರ್ 28ರಂದು ದಾವಣಗೆರೆ ಜಿಲ್ಲೆಯ ನ್ಯಾಮತಿ ಪಟ್ಟಣದಲ್ಲಿ ಎಸ್‌ಬಿಐ ಬ್ಯಾಂಕ್ ಕಚೇರಿಯಲ್ಲಿ ದರೋಡೆ ಪ್ರಕರಣ ನಡೆದಿತ್ತು . ಆರೋಪಿಗಳ ಪತ್ತೆಗೆ ಪೊಲೀಸರು ಐದಾರು ತಂಡ ಕಟ್ಟಿಕೊಂಡು ಅಲೆದಾಡಿದ್ದರೂ ಸುಳಿವು ಸಿಕ್ಕಿರಲಿಲ್ಲ. ಆರು ತಿಂಗಳ ಬಳಿಕ ಪೊಲೀಸರು ಪ್ರಕರಣ ಭೇದಿಸಿದ್ದು ತಮಿಳುನಾಡು ಮೂಲದ ವಿಜಯಕುಮಾರ್ (30), ಅಜಯ್‌ಕುಮಾರ್ (28), ಪರಮಾನಂದ (30), ನ್ಯಾಮತಿ ನಿವಾಸಿ ಅಭಿಷೇಕ್ (23), ಆತನ ಸ್ನೇಹಿತ ಚಂದ್ರು (23) ಹಾಗೂ ಮಂಜುನಾಥ್ (32) ಬಂಧಿತರು.

☞15


ಬಂಧಿತ ಆರೋಪಿಗಳು

ಕ್ರೈಂ ಪ್ರಪಂಚ

# ಕ್ರೈಂ ಥ್ರಿಲ್ಲಿಂಗ್...!

ಮಗಳು ಒಂದು ದಿನಪೂರ್ತಿ ಮನೆಯಲ್ಲಿ ಇರಲಿಲ್ಲ. ಅವಳು ಮನೆಯಿಂದ ಹೋಗಿದ್ದು ಗುರುವಾರ ಮಧ್ಯಾಹ್ನ.

ಬಂದಿದ್ದು ಯಾವಾಗ? ಶುಕ್ರವಾರ ರಾತ್ರಿ ಹತ್ತು ಗಂಟೆ ಆಗಿತ್ತು.

ಆಟೋದಲ್ಲಿ ಬಂದ ಕೂಡಲೇ ಮನೆಯ ಗೇಟಿನ ಹತ್ತಿರ ಇಳಿದು ''ಡ್ರೈವರ್... ಮನೆಗೆ ಹೋಗಿ ಹಣ ತಗೊಂಡು ಬರ್ತೀನಿ ಅಂತ ಹೇಳಿದಾಗ ಆಟೋ ಡ್ರೈವರ್‌ಗೆ ಆಶ್ಚರ್ಯ ಉಂಟಾಗಿತ್ತು ಎಂದು ಹೇಳಬಹುದು.

ಅವಳ ತಲೆಕೂದಲು ಕೆದರಿತ್ತು.

ಮುಖ ವ್ಯಗ್ರವಾಗಿತ್ತು.

ತುಂಬಾ ಟೆನ್ಷನ್‌ಗೆ ಒಳಗಾಗಿದ್ದಳು.

ಅವಳು ಯಾವುದೋ ಸರ್ಕಲ್ ಹತ್ತಿರ ಬಂದು, ಕಾಲಿ ಬರುತ್ತಿದ್ದ ಆಟೋ ಹತ್ತಿ 'ಬೇಗ ಹೊರಡಿ ಡ್ರೈವರ್' ಎಂದಿದ್ದಳು.

''ಎಲ್ಲಿಗೆ ಮೇಡಂ.''

''ಸರಸ್ವತಿಪುರಂಗೆ.''

''ಮೀಟರ್ ಮೇಲೆ ಡಬ್ಬಲ್ ಚಾರ್ಜ್ ಆಗುತ್ತೆ. ಅಂದರೆ ಈಗ ರಾತ್ರಿ ಹತ್ತು ಗಂಟೆ ಆಗಿದೆ.''

''ಎಷ್ಟಾದರೂ ಕೊಡ್ತೀನಿ. ಈಗ ಬೇಗ ಹೊರಡಪ್ಪ'' ಎಂದು ಆತುರ, ಉದ್ವೇಗದಿಂದ ಹೇಳಿದ್ದಳು.

ಮನೆಯೊಳಗೆ ದಿಢೀರನೆ ಬಂದ ಮಗಳನ್ನು ಕಂಡು ತಂದೆ-ತಾಯಿ ಮತ್ತು ತಮ್ಮ, ಅಣ್ಣ ಎಲ್ಲರೂ ಆನಂದ-ಆಶ್ಚರ್ಯಗೊಂಡಿದ್ದರು. ಅವಳಿರುವ ಸ್ಥಿತಿಯನ್ನು ಕಂಡು ಗಾಬರಿಯಾಗಿ ಪ್ರಶ್ನೆಗಳನ್ನು ಕೇಳಲು ಬಾಯಿ ತೆರೆದಾಗ ಅವಳು ರೇಗುತ್ತಾ ''ಬೇಗ ಯಾರಾದರೂ ಐನೂರು ರೂಪಾಯಿ ಕೊಡಿ'' ಎಂದಳು.

ಅಣ್ಣ ಕೂಡಲೇ ಹಣ ತೆಗೆದುಕೊಡುತ್ತಾ ಅವಳ ಜೊತೆ ಹೊರಗೆ ಬಂದನು.

ಆಟೋ ಚಾರ್ಜ್‌ಗಿಂತ ನೂರು ರೂಪಾಯಿ ಜಾಸ್ತಿ ಕೊಟ್ಟಳು.

ಅವಳು ಪದ್ಮಿನಿ ಪಾರಿಜಾತ! ಪ್ರಾಯ ಇಪ್ಪತ್ತೆರಡು. ಫೈನಲ್ ಈಯರ್ ಡಿಗ್ರಿ ಪರೀಕ್ಷೆ ಬರೆದು ಈಗ ಫಲಿತಾಂಶಕ್ಕಾಗಿ ಕಾಯುತ್ತಿದ್ದಾಳೆ.

ಅವಳ ತಂದೆ - ದಾಮೋದರ ರಾವ್, ತಾಯಿ - ನೇತ್ರಾವತಿ, ಅಣ್ಣ - ಶ್ರೀಕಾಂತ, ತಮ್ಮ - ಚಂದ್ರಕಾಂತ, ತಂಗಿ - ಪಲ್ಲವಿ ಇವರುಗಳ ಒಡನಾಟದಲ್ಲಿ ಬೆಳೆದಿದ್ದಾಳೆ ಈ ಪದ್ಮಿನಿ ಪಾರಿಜಾತ.

ಅವಳು ಮಂಕಾಗಿ ಕುಳಿತಿದ್ದಾಳೆ. ತಾಯಿ ನೇತ್ರಾವತಿ ಅವಳಿಗೆ ಕುಡಿಯಲು ಬಿಸಿ ಬಾದಾಮಿ ಹಾಲು ಕೊಟ್ಟರು. ಜೊತೆಗೆ ಬಿಸ್ಕತ್ ಮತ್ತು ಬಾಳೆಯ ಹಣ್ಣನ್ನು ಕೊಟ್ಟರು.

ಅವಳಲ್ಲಿ ಚೈತನ್ಯ ಬಂದಿದೆ.

ತಂದೆ ದಾಮೋದರ ಅವರು ಮಗಳ ತಲೆ ಸವರುತ್ತಾ ''ಪದ್ಮಿನಿ.... ಗುರುವಾರ ಮಧ್ಯಾಹ್ನದಿಂದ ಶುಕ್ರವಾರ ರಾತ್ರಿಯತನಕ ಎಲ್ಲಿಗಮ್ಮಾ ಹೋಗಿದ್ದೆ?''

ಅವಳು ಎಲ್ಲರ ಮುಖ ನೋಡಿದ ನಂತರ ತುಂಬಾ ಮೆಲ್ಲಗೆ ''ನಾನಾಗಿಯೇ ಹೋಗಿರಲಿಲ್ಲ'' ಎಂದಳು.

''ಬೇರೆ ಯಾರಾದರೂ ಕರೆದುಕೊಂಡು ಹೋಗಿದ್ರಾ?''

ಅವಳು ತಲೆಯಾಡಿಸಿದಳು.

''ಫೋನ್ ಯಾಕೆ ಮಾಡಲಿಲ್ಲ?''

ಅವಳಿಂದ ಉತ್ತರ ಬರಲಿಲ್ಲ.

ಅಣ್ಣ ಶ್ರೀಕಾಂತ ''ನಾವು ಫೋನ್ ಮಾಡಿದಾಗ ನೀನು ಅಟೆಂಡ್ ಮಾಡಲಿಲ್ಲ'' ಎಂದನು.

ತಂಗಿ ಪಲ್ಲವಿ ''ಆಮೇಲೆ ನಿನ್ನ ಮೊಬೈಲ್ ಫೋನ್ ಸ್ವಿಚ್ ಆಫ್ ಆಗಿತ್ತು'' ಎಂದಳು.

ತಾಯಿ ನೇತ್ರಾವತಿ ಆತಂಕದಿಂದ ''ನಿನ್ನನ್ನು ಯಾರೋ ಕರೆದುಕೊಂಡು ಹೋಗಿದ್ರು ಅಂತ ಹೇಳ್ದೆ. ಯಾರಮ್ಮ ಅವರು?''

ತಮ್ಮ ಚಂದ್ರಕಾಂತ 'ನಿನಗೆ ಗರ್ಲ್ ಫ್ರೆಂಡ್ ತುಂಬಾ ಇದ್ದಾರೆ. ಅವರೆಲ್ಲಾ ತುಂಬಾ ತರ್ಲೆ ಆಟ ಆಡ್ತಾರೆ' ಎಂದನು.

''ಗರ್ಲ್ ಫ್ರೆಂಡ್ಸ್ ಅಲ್ಲ.''

''ನಿನಗ್ಯಾರು ಬಾಯ್ ಫ್ರೆಂಡ್ಸ್ ಇಲ್ಲವಲ್ಲ.''

''ಇಲ್ಲ... ಯಾರೂ ಇಲ್ಲ.''

ತಂದೆ ದಾಮೋದರ ಅವರು ಬೇಸರ, ಅಸಹನೆಯಿಂದ ''ಹಾಗಾದರೆ ನಿನ್ನನ್ನು ಕರ್ಕೊಂಡು ಹೋಗಿದ್ರು ಯಾರು ಅಂತ ನೇರವಾಗಿ ಹೇಳಮ್ಮ. ನಮ್ಮ ಟೆನ್‌,ನ್ ಜಾಸ್ತಿ ಮಾಡ್ಬೇಡ.'

''ಚಂದನ್ ರೆಡ್ಡಿ...!''

ಈ ಹೆಸರನ್ನು ಕೇಳಿದ ಕೂಡಲೇ ಮನೆಯವರೆಲ್ಲಾ ಬೆಚ್ಚಿಬಿದ್ದರು.

ಚಂದನ್‌ರೆಡ್ಡಿ...!

●●●

ಮೈಸೂರಿನ ಹೊರವಲಯದ ಪ್ರಾಂತ್ಯ ಅಂದರೆ, ನಂಜನಗೂಡಿಗೆ ಹೋಗುವ ಮಾರ್ಗದಲ್ಲಿದೆ 'ಗೆಜ್ಜಗಳ್ಳಿ' ಎಂಬ ಗ್ರಾಮ.

ಅಲ್ಲೊಂದು ಒಂಟಿ ಮನೆ ಇದೆ.

ಆ ಮನೆಯಲ್ಲಿ ದೀಪ ಬೆಳಗುತ್ತಿದೆ ಮತ್ತು ಫ್ರಂಟ್ ಡೋರ್ ಓರೆಯಾಗಿ ತೆರೆದುಕೊಂಡಿದೆ. ಅದು ಮುಖ್ಯರಸ್ತೆ ಆಗಿರೋದ್ರಿಂದ ವಾಹನಗಳ ಸಂಚಾರ ರಾತ್ರಿ ವೇಳೆ ಸಹ ಇರುತ್ತದೆ.

ನಾಯಿಯೊಂದು ಬೊಗಳುತ್ತಿದೆ. ಆ ನಾಯಿ ಬಂದಿತು. ಆ ಮನೆಯ ಬಾಗಿಲು ಓರೆಯಾಗಿ ತೆರೆದುಕೊಂಡಿದ್ದರಿಂದ ಒಳಗೆ ಹೋಯಿತು. ಎರಡು ನಿಮಿಷಗಳಾಯಿತು. ನಾಯಿ ಹೊರಗೆ ಬಂದಿತು. ಅದರ ಮೂತಿ ರಕ್ತಮಯವಾಗಿದೆ. ರಕ್ತ ಅಂಟಿಕೊಂಡಿದೆ. ನಾಲಿಗೆಯಿಂದ ಆ ರಕ್ತ ನೆಕ್ಕುತ್ತಾ ಹೊರಟು ಹೋಯಿತು.

ಆ ಮನೆಯಲ್ಲಿ ನಿಶ್ಯಬ್ದತೆ ಆವರಿಸಿದೆ. ಅಲ್ಲಿ ಯಾರೂ ಇರಲಿಲ್ಲ ಅಂತ ಹೇಳಬಹುದು. ಯಾರಾದರೂ ಇದ್ದಿದ್ದರೆ ಈ ರೀತಿ ಬಾಗಿಲು ತೆರೆದು, ಲೈಟ್ ಆಫ್ ಮಾಡುತ್ತಿರಲಿಲ್ಲವೆ?

ಪ್ರಶ್ನೆ ಶೇಷವಾಗಿದೆ.

ಆ ನಾಯಿ ಮನೆಯೊಳಗಿಂದ ಬಂದಾಗ ಅದರ ಮೂತಿಗೆ ರಕ್ತ ಅಂಟಿಕೊಂಡಿತ್ತು....!

ಈ ಪ್ರಶ್ನೆಗೆ ಉತ್ತರ ಹೇಳಲು ಅಲ್ಲಿ ಯಾರೂ ಇರಲಿಲ್ಲ.

●●●

ಪದ್ಮಿನಿ ಪಾರಿಜಾತ! ಆ ವರ್ಷ ಕಾಲೇಜಿನಲ್ಲಿ ನಡೆದಿದ್ದಂತಹ ಸೌಂದರ್ಯ ಸ್ಪರ್ಧೆಯಲ್ಲಿ ವಿಜೇತಳಾಗಿದ್ದಳು.

ಕ್ವೀನ್ ಆಫ್ ಕಾಲೇಜ್. ಬ್ಯುಟಿ ಡಾಲ್! ಈ ರೀತಿಯಾಗಿ ಅವಳ ಸೌಂದರ್ಯವನ್ನು ಆ ಕಾಲೇಜಿನ ಯುವಕರು ಮಾತ್ರವಲ್ಲ. ಲೆಕ್ಚರರ್‌ಗಳು ಸಹ ಆರಾಧಿಸುತ್ತಿದ್ದರು.

ಪಡ್ಡೆಯುವಕರಂತು ಇವಳ ನಗುವಿನ ಕೃಪೆಗಾಗಿ ಸರ್ಕಸ್ ಮಾಡುತ್ತಿದ್ದರು. ಅವಳ ಪ್ರೀತಿಗಾಗಿ ಹಂಬಲಿಸಿದ್ದರು.

ಪದ್ಮಿನಿ ಪಾರಿಜಾತ ಪ್ರತಿಕ್ರಿಯೆ ನೀಡುತ್ತಿರಲಿಲ್ಲ. ಯಾವ ಯುವಕರನ್ನೂ ಪ್ರಚೋದಿಸುತ್ತಿರಲಿಲ್ಲ. ಮುಖ್ಯವಾಗಿ ಕಾಲೇಜಿನ ಯುವಕರ ಜೊತೆ 'ಹಲೋ' ಹೇಳಿ ತಲೆ ತಗ್ಗಿಸಿಕೊಂಡು ಹೋಗುತ್ತಿದ್ದಳು.

ಚೆಲ್ಲಾಟ ಯುವತಿ ಅಲ್ಲ. ಪ್ರತಿಭಾವಂತ ವಿದ್ಯಾರ್ಥಿನಿ. ಚರ್ಚಾಸ್ಪರ್ಧೆ, ಹಾಡುಗಾರಿಕೆ, ಭರತನಾಟ್ಯ ಎಲ್ಲಾ ಕಲಿತಿದ್ದಳು ಮತ್ತು ಕಾಲೇಜಿನ ಕಾರ್ಯಕ್ರಮಗಳಲ್ಲಿ ಸ್ಪರ್ಧಿಸಿ ಬಹುಮಾನ ಪಡೆದಿದ್ದಳು.

ಅವಳು ಆಲ್ ಇನ್ ವೆನ್! ಪ್ರತಿಭಾವಂತೆ... ಬುದ್ಧಿವಂತೆ. ಮುಖ್ಯವಾಗಿ ಗುಣವಂತೆ.

ಇವಳ ಜೊತೆಗಿನ ಗೆಳತಿಯರು ಚೆಲ್ಲು, ಚೆಲ್ಲಾಗಿ ಆಡುತ್ತಾ, ಪಡ್ಡೆ ಯುವಕರನ್ನು ರೇಗಿಸುತ್ತಿದ್ದರೆ ಇವಳು ಸೈಲೆಂಟ್ ಆಗಿ ಇರುತ್ತಿದ್ದಳು ಮತ್ತು ಅವರಿಂದ ದೂರ ಇರುತ್ತಿದ್ದಳು.

ಇದೇ ಅವಳ ವಿಶೇಷತೆ!

ರಾತ್ರಿ ಹನ್ನೊಂದೂವರೆ ಆಗಿದೆ.

ಅವಳು ಮಲಗಿದ್ದಾಳೆ.

ಆದರೆ ನಿದ್ದೆ ಬಂದಿಲ್ಲ.

ಆಗ ಅವಳ ತಂದೆ-ತಾಯಿ, ಅಣ್ಣ, ತಮ್ಮ ಮತ್ತು ತಂಗಿ ಎಲ್ಲಾ ಬಂದರು. ಇವಳು ಎಲ್ಲರ ಕಡೆ ಒಂದು ಸಲ ನೋಡಿದಳು.

''ನಮಗೆ ಸತ್ಯ ಹೇಳಮ್ಮ.''

ತಾಯಿ ಗೋಗರೆಯುವ ರೀತಿಯಲ್ಲಿ ಅವಳನ್ನು ಕೇಳಿದರು.

ತಂದೆ 'ಚಂದನ್‌ರೆಡ್ಡಿ ನಿನಗೆ ಎಲ್ಲಿ ಸಿಕ್ಕಿದ್ದ? ನೀನ್ಯಾಕೆ ಅವನ ಜೊತೆ ಹೋದೆ'' ಎಂದು ಕೇಳಿದರು.

''ನಾನಾಗಿಯೇ ಹೋಗಲಿಲ್ಲ.'

ಅಣ್ಣ ''ಅಂದರೆ ನಿನ್ನನ್ನು ಹೆದರಿಸಿ ಕಿಡ್ನಾಪ್ ಮಾಡಿ ಕರ್ಕೊಂಡು ಹೋದ್ನ?''

ಅವಳು ಮೆಲ್ಲಗೆ ''ಇಲ್ಲ'' ಎಂದಳು.

ತಂಗಿ ಪಲ್ಲವಿ ''ಹಾಗಾದರೆ ನಿಜವಾಗಿ ನಡೆದದ್ದು ಏನು'' ಎಂದು ಕೇಳಿದಳು.

ಪದ್ಮಿನಿ ಪಾರಿಜಾತ ಹೇಳುತ್ತಿದ್ದಾಳೆ.

ಫ್ಲ್ಯಾಶ್‌ಬ್ಯಾಕ್ ಘಟನೆ.

★★★

ಗುರುವಾರ ಮಧ್ಯಾಹ್ನ!

ಪದ್ಮಿನಿ ಆಗ ತಾನೇ ಊಟ ಮಾಡಿ ತನ್ನ ರೂಮಿಗೆ ಬಂದಿದ್ದಳು.

ಫೋನ್ ಕಾಲ್ ಬಂದಿತು.

ಗೆಳತಿ ಪ್ರಿಯಾಂಕ ಮಾಡಿದ್ದಾಳೆ.

''ಹಲೋ ಪದ್ಮಿನಿ... ನೀನು ಈಗಲೇ ಸರ್ಕಲ್ ಹತ್ತಿರ ಬರ್ತೀಯ?''

''ಈಗ ಯಾಕೆ?''

''ನನ್ನನ್ನು ಮದುವೆ ಆಗಲಿರುವ ಹುಡುಗ ಬಂದಿದ್ದಾನೆ. ಅವನು ನನಗೆ ಸ್ಪೆಷಲ್ ಬರ್ತ್‌ಡೇ ಗಿಫ್ಟ್ ಕೊಡ್ತಾನಂತೆ.''

''ತುಂಬಾ ಸಂತೋಷ. ಆದರೆ ನಾನ್ಯಾಕೆ ಸರ್ಕಲ್‌ಗೆ ಬರಬೇಕು.''

''ಏ... ನನ್ನ ವುಡ್‌ಬೀ ನಿಂಗೆ ಪರಿಚಯ ಮಾಡಿಕೊಡ್ತೀನಿ. ಅವನು ಶ್ರೀಮಂತ ಕುಪಟುಂಬದವನು. ನನಗೆ ತುಂಬಾ ಬೆಲೆಬಾಳುವ ಗಿಫ್ಟ್ ಕೊಡಿಸುತ್ತಾನಂತೆ. ಅವರ ಸೆಲೆಕ್ಷನ್‌ಗೆ ನೀನು ಬರಲೇಬೇಕು.''

ಅವಳು ಚಡಪಡಿಸಿದಳು.

''ಪ್ಲೀಸ್ ಪದ್ಮಿನಿ... ಪ್ಲೀಸ್...''

''ಓಕೆ ಬರ್ತೀನಿ. ಆದರೆ ನಾನು ಸಂಜೆ ಐದು ಗಂಟೆ ಒಳಗೆ ವಾಪಸ್ ಬರ್ಬೇಕು. ಇವತ್ತು ಭರತನಾಟ್ಯದ ಕ್ಲಾಸ್ ಇದೆ.''

''ಆಗಲಿ ಬೇಗ ಬಂದು ಬಿಡೋಣ ನನ್ನ ವುಡ್‌ಬೀ ಇನೋವಾ ಕಾರಲ್ಲಿ ಸರ್ಕಲ್‌ನಲ್ಲಿ ಕಾಯುತ್ತಿದ್ದಾರೆ.''

''ಸಮವ ವಾಟ್ ಅನ್ ನ್ಯಾಚುರಲ್. ಯಾಕೆ ಅವರು ನಿನ್ನ ಮನೆಗೆ ಬಂದು ಕರ್ಕೊಂಡು ಹೋಗಲ್ವ?''

''ಅವರು ಬಿಜಿನೆಸ್‌ಗಾಗಿ ಬೆಂಗಳೂರಿಗೆ ಬಂದಿದ್ದಾರೆ. ಮನೆಗೆ ಬರಲು ಟೈಂ ಇಲ್ಲ. ಅದಕ್ಕೆ ಸರ್ಕಲ್‌ಗೆ ಬರ್ತಾರೆ.''

ಪದ್ಮಿನಿ ಪಾರಿಜಾತ ರೆಡಿಯಾಗಿ ರೂಮಿನಿಂದ ಹೊರಗೆ ಬಂದಳು.

ತಂದೆ, ಅಣ್ಣ, ತಮ್ಮ, ತಂಗಿ ಯಾರೂ ಸಹ ಇರಲಿಲ್ಲ. ತಾಯಿ ರೂಮಿಗೆ ಹೋಗಿ ''ಮಮ್ಮಿ... ಫ್ರೆಂಡ್ ಮನೆಗೆ ಹೋಗ್ತಾ ಇದೀನಿ'' ಎಂದಾಗ ತಾಯಿ ನೇತ್ರಾವತಿ ''ಏ... ಇವತ್ತು ಡ್ಯಾನ್ಸ್ ಕ್ಲಾಸ್ ಇದೆ.''

''ಐದು ಗಂಟೆ ಒಳಗೆ ಬರ್ತೀನಿ.''

ರಾಮಸ್ವಾಮಿ ಸರ್ಕಲ್.

ಸ್ಥಳ - ಮೈಸೂರು.

ಈಗ ಪದ್ಮಿನಿ ಪಾರಿಜಾತ ಅಲ್ಲಿಗೆ ಬಂದಿದ್ದಾಳೆ. ಎಲ್ಲಾ ಕಡೆ ನೋಡುತ್ತಿದ್ದಾಳೆ.

ಗೆಳತಿ ಕಂಡು ಬರಲಿಲ್ಲ. ಪ್ರಿಯಾಂಕ ಎಲ್ಲಿ? ಅವಳ್ಯಾಕೆ ಬಂದಿಲ್ಲ? ಆಗ ಇನೋವಾ ಕಾರು ತುಂಬಾ ವೇಗವಾಗಿ ಬಂದು ಇವಳ ಸಮೀಪದಲ್ಲೇ ನಿಂತಾಗ ಗಾಬರಿಯಿಂದ ದೂರ ಸರಿದಳು.

ಪ್ರಿಯಾಂಕ ವಿಂಡೋ ಮೂಲಕ ತಲೆ ತೂರಿಸಿ ಕೈ ಆಡಿಸುತ್ತಾ ''ಏ ಪದ್ಮಿನಿ ಬಾರೇ'' ಎಂದು ಕೂಗಿದಳು.

ಪದ್ಮಿನಿ ಪಾರಿಜಾತ ಈಗ ಕಾರಿನ ಬ್ಯಾಕ್ ಡೋರ್ ತೆಗೆದಳು.

ಅಲ್ಲಿ ಪದ್ಮಿನಿ ಕುಳಿತಿದ್ದಾಳೆ. ಇವಳ ಪ್ರಿಯತಮ ಡ್ರೈವಿಂಗ್ ಸೀಟಲ್ಲಿ ಕುಳಿತಿದ್ದಾನೆ. ಅವನ ಕಡೆ ನೋಡಿದಳು. ಇದ್ಯಾಕೆ ಹೀಗಿದ್ದಾನೆ? ಕೂಲಿಂಗ್ ಗ್ಲಾಸ್ ಹಾಕಿದ್ದಾನೆ. ಮಂಕಿ ಕ್ಯಾಪ್ ಧರಿಸಿದ್ದಾನೆ.

ಲಾಂಗ್ ಕೋಟ್ ಶರೀರ ಆವರಿಸಿದೆ. ಅವಳು ಚಡಪಡಿಸಿದಳು.

ಕಾರು ಚಲಿಸಿತು. ಗೆಳತಿಯ ವುಡ್‌ಬೀ ಇವಳ ಕಡೆ ತಿರುಗಿ ನೋಡಲಿಲ್ಲ. ಹಲೋ ಹೇಳಲಿಲ್ಲ. ಇಷ್ಟೇ ಅಲ್ಲ. ಆ ಗೆಳತಿ ಪ್ರಿಯಾಂಕ ಸಹ ಅವನ ಪರಿಚಯ ಮಾಡಿಸಲಿಲ್ಲ.

ಕಾರು ಚಲಿಸುತ್ತಿದೆ. ಯಾರೊಬ್ಬರೂ ಮಾತಾಡುತ್ತಿಲ್ಲ. ಆ ಕ್ಷಣಗಳಲ್ಲಿ ಪ್ರಿಯಾಂಕ ''ಏ ಪದ್ಮಿನಿ... ಈ ಕಡೆ ನೋಡು'' ಎಂದಳು.

ಪದ್ಮಿನಿ ತಿರುಗಿದಳು.

ಪ್ರಿಯಾಂಕ ಸರ್ರನೆ ಅವಳತ್ತ ಬಾಗಿ ತಲೆ ಹಿಡಿದುಕೊಂಡು, ಮತ್ತೊಂದು ಕೈಯಿಂದ ದಪ್ಪಗಾತ್ರದ ಹತ್ತಿ ಉಂಡೆಯನ್ನು ಮೂಗಿನ ಹತ್ತಿರ ಒತ್ತಿ ಹಿಡಿದಳು.

ಕೆಟ್ಟ ರಾಸಾಯನಿಕ ವಾಸನೆ!

ಉಸಿರಿನ ಜೊತೆ ಸೇರಿತು.

ಆ ಕ್ಷಣಗಳಲ್ಲಿ ಬದಲಾವಣೆ ಆಯಿತು.

ಅವಳು ಕುಳಿತಲ್ಲೇ ತೇಲುಗಣ್ಣು ಮಾಡುತ್ತಾ ತೂರಾಡುತ್ತಿರುವ ರೀತಿ ಅಲ್ಲಾಡುತ್ತಾ ಗೆಳತಿಯ ಮೇಲೆ ವಾಲಿಕೊಂಡಳು.

ಎಚ್ಚರವಾಗಿದ್ದು ಯಾವಾಗ?

ಸಮಯ ಗೊತ್ತಿಲ್ಲ.

ಮುಖದ ಮೇಲೆ ನೀರಿನ ಹನಿಗಳ ಸ್ಪರ್ಶ ಆಗಿದ್ದರಿಂದ ಮತ್ತು ಜೋರಾಗಿ ಗಾಳಿ ಬೀಸುತ್ತಿರುವುದರಿಂದ ಎಚ್ಚರಗೊಂಡಳು.

ಅವಳು ಮಂಕಾಗಿದ್ದಾಳೆ.

ತಿರುಗುತ್ತಿರುವ ಫ್ಯಾನ್ ನೋಡುತ್ತಿದ್ದಾಳೆ.

ಅವಳಿಗೆ ವಾಸ್ತವಿಕತೆ ಬಂದಿಲ್ಲ.

ತುಂಬಾ ಹೊತ್ತಿನ ನಂತರ ಸಹಜ ಸ್ಥಿತಿಗೆ ಬಂದು ಗಾಬರಿಯಿಂದ ಎದ್ದು ಕುಳಿತದಳು.

ಆಗ ಆ ದೃಶ್ಯ ಕಂಡಿತು.

ಸ್ವಲ್ಪ ದೂರದಲ್ಲಿ ರಿವಾಲ್ವಿಂಗ್ ಚೇರ್‌ನಲ್ಲಿ ಯಾರೋ ಕುಳಿತಿದ್ದಾರೆ.

ಬೆನ್ನು ಮಾತ್ರ ಕಾಣುತ್ತಿದೆ.

ಅವಳಿಗೆ ಗಾಬರಿಯಾಯಿತು.

ನಿಧಾನವಾಗಿ ಎಲ್ಲಾ ನೆನಪಾಗುತ್ತಿದೆ.

ಅವಳು ಎದ್ದು ನಿಲ್ಲಲು ಪ್ರಯತ್ನಿಸುತ್ತಾ ''ಯಾರು... ಯಾರದು? ನನ್ನನ್ನು ಇಲ್ಲಿಗೆ ಯಾಕೆ ಕರ್ಕೊಂಡ್ ಬಂದಿದ್ದೀರ? ಎಲ್ಲಿ... ಎಲ್ಲಿ ಆ ಪ್ರಿಯಾಂಕ ಎಲ್ಲಿ?''

ಗಡುಸು ಧ್ವನಿಯಲ್ಲಿ ''ಪ್ರಿಯಾಂಕ ತನ್ನ ಮನೇಲಿ ಇದ್ದಾಳೆ'' ಎಂದನು.

ಆ ಧ್ವನಿ ಗುರುತಿಸಿದಳು. ದೃಶ್ಯ ಬದಲಾಯಿತು. ವೀಲ್ ಚೇರ್ ಈಗ ರಿವ್ವನೆ ತಿರುಗಿತು. ಆಗ ಅವಳಿಗೆ ಮುಖ ಕಂಡಿತು.

ಚಂದನ್ ರೆಡ್ಡಿ....!

●●●

ಬೆಡ್‌ರೂಮಿನಲ್ಲಿ ಇವಳ ಸುತ್ತಲು ಕುಳಿತಿದ್ದವರು

☞ 10

# ಸೌತ್ ಇಂಡಿಯಾದ ಮೋಸ್ಟ್ ವಾಂಟೆಡ್ ನಟೋರಿಯಸ್ ಕ್ರಿಮಿನಲ್ ಬಾಂಬೆ ಸಲೀಂ ಅರೆಸ್ಟ್!


ಆರೋಪಿ ಬಾಂಬೆ ಸಲೀಂ

**ಕರ್ನಾಟಕ, ಆಂಧ್ರಪ್ರದೇಶ, ಮಹಾರಾಷ್ಟ್ರ, ತಮಿಳುನಾಡು ಮತ್ತು ಕೇರಳ ರಾಜ್ಯಗಳಲ್ಲಿ ಕೊಲೆ, ಸುಲಿಗೆ, ಡಕಾಯಿತಿ, ಕನ್ನ, ಕಳುವು, ಕಿಡ್ನಾಪ್ ಕೇಸುಗಳಲ್ಲಿ ಪೊಲೀಸರಿಗೆ ಬೇಕಾದ ಸೌತ್ ಇಂಡಿಯಾದಲ್ಲಿಯೇ ದಿ ಮೋಸ್ಟ್ ವಾಂಟೆಡ್ ನಟೋರಿಯಸ್ ಕ್ರಿಮಿನಲ್ ಬಾಂಬೆ ಸಲೀಂ ಯಾರ ಕೈಗೂ ಸಿಗದೆ ಕೇರಳದಲ್ಲಿ ತಲೆಮರೆಸಿಕೊಂಡಿದ್ದವನನ್ನು ಕಿಡ್ನಾಪ್ ಕೇಸೊಂದರಲ್ಲಿ ಅವರ ಏಳು ಜನ ಸಹಚರರೊಂದಿಗೆ ಬಾಂಬೆ ಸಲೀಂನನ್ನು ಬಾಗೇಪಲ್ಲಿ ಪೊಲೀಸರು ಬಂಧಿಸಿ ಅವರಿಂದ 5.15 ಲಕ್ಷ ರೂ. ಹಣ ಹಾಗೂ 30 ಲಕ್ಷ ಬೆಲೆಬಾಳುವ ಇನೋವಾ ಕಾರನ್ನು ವಶಕ್ಕೆ ಪಡೆದು, ಆರೋಪಿಗಳನ್ನು ಜೈಲಿಗೆ ಕಳುಹಿಸುವಲ್ಲಿ ಯಶಸ್ವಿಯಾಗಿದ್ದಾರೆ.**

**ಚಿಕ್ಕಬಳ್ಳಾಪುರ**
✍ ಕೋ.ನಾ. ಪ್ರಭಾಕರ್

ಚಿಕ್ಕಬಳ್ಳಾಪುರ ಜಿಲ್ಲೆ, ಗುಡಿಬಂಡೆ ತಾಲ್ಲೂಕಿನ ಗಂಗಾನಹಳ್ಳಿಯ ವಾಸಿ ಕೃಷಿಕ ಅಶ್ವತ್ಥನಾರಾಯಣಸ್ವಾಮಿ ರವರು ಕಳೆದ 2024 ಡಿಸೆಂಬರ್ 20ರಂದು ತನಗೆ ಸೇರಿದ ಸ್ವಲ್ಪ ಜಮೀನನ್ನು ಮಾರಾಟ ಮಾಡಿದ್ದು, ಕೈ ಬದಲಿಗೆ ತನ್ನ ಸ್ನೇಹಿತನಿಂದ ತೆಗೆದುಕೊಂಡಿದ್ದ 16 ಲಕ್ಷ ಹಣವನ್ನು ವಾಪಸ್ಸು ಕೊಡಲು ಬಾಗೇಪಲ್ಲಿ ತಾಲ್ಲೂಕಿನ ರಾಷ್ಟ್ರೀಯ ಹೆದ್ದಾರಿಯಲ್ಲಿರುವ ಆದಿಗಾನಹಳ್ಳಿಯ ಬಳಿ ಬರುವಂತೆ ಹೇಳಿದ ಅಶ್ವತ್ಥನಾರಾಯಣಸ್ವಾಮಿರವರು ತಮ್ಮ ಸ್ವಿಫ್ಟ್ ಕಾರಿನಲ್ಲಿ ಹೈವೇಯಲ್ಲಿ ಹೋಗುತ್ತಿದ್ದಾಗ ಇನೋವಾ ಕಾರಿನಲ್ಲಿ ಬಂದ ಗುಂಪೊಂದು ಅಶ್ವತ್ಥ ನಾರಾಯಣಸ್ವಾಮಿರವರು ಪ್ರಯಾಣ ಮಾಡುತ್ತಿದ್ದ ಕಾರಿಗೆ


ಎಸ್ಪಿ ಕುಶಾಲ್ ಚೌಕ್ಸಿ


ಎಎಸ್ಪಿ ರಾಜಾ ಖಾಸಿಂಖಾನ್

ಅಡ್ಡಗಟ್ಟಿದ ಮುಸುಕುಧಾರಿ ಗ್ಯಾಂಗ್ ದಾಳಿ ಮಾಡಿ ಅವರನ್ನು ಕಿಡ್ನಾಪ್ ಮಾಡಿಕೊಂಡು ನಿರ್ಜನ ಪ್ರದೇಶಕ್ಕೆ ಹೋಗಿ ಅಶ್ವತ್ಥನಾರಾಯಣಸ್ವಾಮಿ ರವರ ಬಳಿ ಇದ್ದ 16 ಲಕ್ಷ ರೂ. ಹಣವನ್ನು ದೋಚಿಕೊಂಡು ಇನ್ನು ಹೆಚ್ಚಿನ ಹಣಕ್ಕಾಗಿ ಅವರ ಹೆಂಡತಿಗೆ ಫೋನ್ ಮಾಡಿ ಜಮೀನು ಮಾರಾಟ ಮಾಡಿರುವ ಹಣದಲ್ಲಿ ಇನ್ನು 50 ಲಕ್ಷ ರೂ. ಹಣವನ್ನು ನಾವು ಹೇಳಿದ ಕಡೆಗೆ ತಂದು ಕೊಡಬೇಕು. ಹಣ ಕೊಡದೆ ಪೊಲೀಸರ ಬಳಿಗೆ ಹೋದರೆ ನಿನ್ನ ಗಂಡನನ್ನು ಕೊಲೆ ಮಾಡಿ ಚಿತ್ರಾವತಿ ನದಿಗೆ ಎಸೆಯಬೇಕಾಗುವುದೆಂದು ಬೆದರಿಕೆ ಹಾಕಿದರು. ಸ್ನೇಹಿತನಿಂದ ತೆಗೆದುಕೊಂಡಿದ್ದ ಹಣವನ್ನು ವಾಪಸ್ಸು ಕೊಡಲು ಹೋದ ಗಂಡ ಕಿಡ್ನಾಪ್ ಆಗಿ ಅಪರಿಚಿತ ಕಿಡ್ನಾಪರ್ಸ್ 50 ಲಕ್ಷ ರೂ. ಹಣಕ್ಕಾಗಿ ಬೇಡಿಕೆ ಇಟ್ಟಿರುವುದಲ್ಲದೆ, ಹಣ ಕೊಡದಿದ್ದರೆ ಗಂಡನನ್ನು ಕೊಲೆ ಮಾಡುವುದಾಗಿ ಬೆದರಿಕೆ ಹಾಕಿರುವ ವಿಷಯದಿಂದ ಭಯಭೀತಳಾದ ಅಶ್ವತ್ಥನಾರಾಯಣಸ್ವಾಮಿರವರ ಪತ್ನಿಯು ಸಂಬಂಧಿಕರೊಂದಿಗೆ ಬಾಗೇಪಲ್ಲಿ ಪೊಲೀಸ್ ಠಾಣೆಗೆ ಹಾಜರಾಗಿ ನಡೆದ ಘಟನೆ ಬಗ್ಗೆ ವಿವರಿಸಿ ದೂರು ನೀಡಿದರು.

ಅಶ್ವತ್ಥನಾರಾಯಣಸ್ವಾಮಿರವರ ಪತ್ನಿ ನೀಡಿದ ದೂರಿನ ಅನ್ವಯ ಪಿಎಸ್ಐ ನಾಗಮ್ಮ ನವರು ದೂರು ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿರುತ್ತಾರೆ. ಅಶ್ವತ್ಥನಾರಾಯಣಸ್ವಾಮಿರವರನ್ನು ಅಪರಿಚಿತ ವ್ಯಕ್ತಿಗಳು ಕಿಡ್ನಾಪ್ ಮಾಡಿ 50 ಲಕ್ಷ ಹಣಕ್ಕೆ ಬೇಡಿಕೆ ಇಟ್ಟಿರುವ ಬಗ್ಗೆ ಬಾಗೇಪಲ್ಲಿ ಪೊಲೀಸ್ ಠಾಣೆಯ ಪಿಐ ಪ್ರಶಾಂತ್ ಆರ್. ವರ್ಣಿರವರು ಹಿರಿಯ ಅಧಿಕಾರಿಗಳಿಗೆ ವರದಿಯನ್ನು ನೀಡಿ ಮುಂದಿನ ಕ್ರಮ ಕೈಗೊಳ್ಳಲು ಆದೇಶಿಸುವಂತೆ ವಿನಂತಿಸಿಕೊಂಡರು. ಅದರಂತೆ ಎಸ್ಪಿ ಕುಶಾಲ್ ಚೌಕ್ಸಿ, ಎಎಸ್ಪಿ ರಾಜಾ ಖಾಸಿಂಖಾನ್, ಡಿವೈಎಸ್ಪಿ ಶಿವಕುಮಾರ್‌ರವರ ಮಾರ್ಗ ದರ್ಶನದಲ್ಲಿ ಬಾಗೇಪಲ್ಲಿ ಪೊಲೀಸ್ ಠಾಣೆಯ ಪಿಐ ಪ್ರಶಾಂತ್ ಆರ್. ವರ್ಣಿ, ಗುಡಿಬಂಡೆ ಪೊಲೀಸ್ ಠಾಣೆಯ ಪಿಐ ನಯಾಜ್‌ಬೇಗ್‌ರವರ ನೇತೃತ್ವದಲ್ಲಿ ಪಿಎಸ್ಐಗಳಾದ ನಾಗಮ್ಮ, ಮುನಿರತ್ನಂ, ಸಿಬ್ಬಂದಿ ವರ್ಗದವರಾದ ಸುರೇಶ್, ವೆಂಕಟರಮಣ, ಶ್ರೀನಾಥ್, ಶ್ರೀಪತಿ, ಧನಂಜಯ್, ಮೋಹನ್‌ಕುಮಾರ್, ಸಾಗರ್, ವೆಂಕಟಶಿವ, ಖದೀರ್ ಅಹಮದ್, ನೂರ್‌ಪಾಷ, ಮುಂತಾದವರ ತಂಡವನ್ನು ರಚಿಸಲಾಯಿತು. ಮೊದಲಿಗೆ ಕ್ರೈಂ ತಂಡವು ಕಿಡ್ನಾಪ್ ಆಗಿರುವ ಅಶ್ವತ್ಥನಾರಾಯಣಸ್ವಾಮಿರವರ ಮೊಬೈಲ್ ಫೋನ್‌ನಿಂದ ಅವರ ಪತ್ನಿಗೆ ಕಿಡ್ನಾಪರ್ಸ್ ಫೋನ್ ಮಾಡಿದ್ದು, ಅದರ ಆಧಾರದ ಮೇಲೆ ಮೊಬೈಲ್ ಟವರ್ ಲೊಕೇಷನ್ನು ಗುರುತು ಪತ್ತೆಹಚ್ಚಲು ಕ್ರಮ ಕೈಗೊಂಡರು. ನಂತರ ಅಶ್ವತ್ಥನಾರಾಯಣಸ್ವಾಮಿಗೆ ಹಣ ಕೊಟ್ಟಿದ್ದ ಸ್ನೇಹಿತನ ಕೈವಾಡವು ಈ ಕಿಡ್ನಾಪ್‌ನಲ್ಲಿ ಇರಬಹುದೇ ಎನ್ನುವುದರ ಬಗ್ಗೆ ಅನುಮಾನದಿಂದ ಅವರನ್ನು ಠಾಣೆಗೆ ಕರೆಸಿ ವಿಚಾರಣೆ ಮಾಡಲಾಗಿ ಯಾವುದೇ ಮಾಹಿತಿ ಸಿಗಲಿಲ್ಲ. ಅಶ್ವತ್ಥನಾರಾಯಣ ಸ್ವಾಮಿರವರನ್ನು ಕಿಡ್ನಾಪ್ ಮಾಡಿದ್ದು ಹೈವೇ ರಸ್ತೆಯ ಮೂಲಕ ಅವರು ಇಲ್ಲಿಂದ ಯಾವ ಕಡೆ ಹೋಗಿದ್ದಾರೆ ಎನ್ನುವುದರ ಬಗ್ಗೆ ಹಾವೇ ರಸ್ತೆ ಅಕ್ಕಪಕ್ಕದಲ್ಲಿ ಅಳವಡಿಸಿ ರುವ ಸಿಸಿ ಕ್ಯಾಮರಾಗಳ ಪರಿಶೀಲನೆ ಮಾಡಲಾಗಿ ಇನೋವಾ ಕಾರಿನಲ್ಲಿ ಕಿಡ್ನಾಪ್ ಮಾಡಿರುವುದು ತಿಳಿಯಿತು. ಕಿಡ್ನಾಪರ್ಸ್ ಸ್ಥಳೀಯರಿರಬಹುದೇ ಎನ್ನುವ ಗುಮಾನಿ ಯಿಂದ ಪೊಲೀಸರು ಗುಡಿಬಂಡೆ ಮತ್ತು ಬಾಗೇಪಲ್ಲಿನ ಕೆಲವು ರೌಡಿಶೀಟರ್ ಕರೆಸಿ ವಿಚಾರಣೆ ಮಾಡಲಾಗಿ ಕೃಷಿಕ ಅಶ್ವತ್ಥನಾರಾಯಣಸ್ವಾಮಿ ಕಿಡ್ನಾಪ್ ಹಿಂದೆ ಇರುವ ಮಾಸ್ಟರ್ ಮೈಂಡ್ ಯಾರು ಎನ್ನುವುದರ ಬಗ್ಗೆ ಸುಳಿವು ನೀಡಿದರು.


ಡಿವೈಎಸ್ಪಿ ಶಿವಕುಮಾರ್


ಪಿಐ ಪ್ರಶಾಂತ್ ಆರ್. ವರ್ಣಿ




ಬ್ಯಾಂಕ್ ಬಳಿ ಕಳುವಾಗಿದ್ದ ಹಣವನ್ನು ಹಿಂದಿರುಗಿಸುತ್ತಿರುವುದು


ಪೊಲೀಸರಿಗೆ ಆತ್ಮೀಯ ಅಭಿನಂದನೆ

## 12ನೇ ವಯಸ್ಸಿಗೆ ಕೊಲೆಗಾರನಾದ ಸಲೀಂ

ಕಿಡ್ನಾಪ್ ಹಿಂದೆ ಇರುವ ಬಾಂಬೆ ವ್ಯಕ್ತಿ ಯಾರೆಂದು ಮಹಾರಾಷ್ಟ್ರ ಪೊಲೀಸ್ ಇಲಾಖೆಯಿಂದ ಪಡೆದ ಮಾಹಿತಿಯಲ್ಲಿ ಕರ್ನಾಟಕ, ಆಂಧ್ರ ಪ್ರದೇಶ, ಮಹಾ ರಾಷ್ಟ್ರ, ತಮಿಳುನಾಡು ಮತ್ತು ಕೊಲೆ, ಸುಲಿಗೆ, ಡಕಾಯಿತಿ, ಕನ್ನ, ಕಳುವು, ಕಿಡ್ನಾಪ್ ಹಾಗೂ ಇನ್ನಿತರ ಕೇಸುಗಳಲ್ಲಿ ಪೊಲೀಸರಿಗೆ ಬೇಕಾದ ಸೌತ್ ಇಂಡಿಯಾದಲ್ಲಿಯೇ ದಿ ಮೋಸ್ಟ್ ವಾಂಟೆಡ್ ನಟೋರಿಯಸ್ ಕ್ರಿಮಿನಲ್ ಮಹಾರಾಷ್ಟ್ರ ರಾಜ್ಯದ ಮುಂಬಾಯಿ ನಗರ ವಾಸಿ ಲೇಟ್ ಮಹಮದ್ ಕರೀಮ್‌ವುಲ್ಲಾರವರ ಮಗ ಮಹಮದ್ ಖಲೀಂವುಲ್ಲಾ ಅಲಿಯಾಸ್ ಬಾಂಬೆ ಸಲೀಂ (40) 12 ವರ್ಷದ ಅಪ್ರಾಪ್ತ ಬಾಲಕನಾಗಿರುವಾಗಲೇ ಪಾತಕ ಲೋಕಕ್ಕೆ ಎಂಟ್ರಿ ಕೊಟ್ಟ ಸಲೀಂ ತಾನು ಕೆಲಸ ಮಾಡುತ್ತಿದ್ದ ಅಂಗಡಿ ಮಾಲೀಕನನ್ನು ಕೊಲೆ ಮಾಡಿ ಬಾಲ ಅಪರಾಧಿ ಕೋರ್ಟ್‌ನಲ್ಲಿ ಶಿಕ್ಷೆಗೆ ಗುರಿಯಾಗಿ ಜೈಲುವಾಸ ಅನುಭವಿಸಿರುವ ಖೈದಿ ಯಾಗಿದ್ದು ವಯಸ್ಕನಾಗುತ್ತಿದ್ದಂತೆ ಕ್ರಿಮಿನಲ್ ಕೆಲಸಗಳಲ್ಲಿ ಭಾಗಿಯಾಗಿ ಹಲವು ಜೈಲುಗಳ ಬಂದಿರುವ ಸಲೀಂ ಜೈಲಿಗೆ ಹೋಗುವುದು, ಬರುವುದು ಮತ್ತು ಅಪರಾಧ ಮಾಡುವುದನ್ನೆ ಕಾಯಕ ಮಾಡಿಕೊಂಡಿದ್ದನು. ಒಂಟಿ ಸಲಗದಂತೆ ಇದ್ದ ಸಲೀಂ ಬಾಂಬೆಯಲ್ಲಿ ಕೆಲವು ಯುವಕ ರನ್ನು ಜೊತೆಗೆ ಸೇರಿಸಿಕೊಂಡು ಮಹಾರಾಷ್ಟ್ರವಲ್ಲದೆ ಆಂಧ್ರ, ಕರ್ನಾಟಕ ರಾಜ್ಯದ ಗಡಿಭಾಗಗಳಲ್ಲಿನ ಜಿಲ್ಲೆಗಳಲ್ಲಿ ಕಳ್ಳತನ, ಸುಲಿಗೆ, ಕಿಡ್ನಾಪ್‌ಗಳನ್ನು ಮಾಡುತ್ತಾ ಇದ್ದ ಡಕಾಯಿತ ಸಲೀಂ ಇದೀಗ ಅಂತರರಾಜ್ಯ ಮಟ್ಟದಲ್ಲಿ ಬಾಂಬೆ ಸಲೀಂನಾಗಿ ದಕ್ಷಿಣ ಭಾರತದ ನಾಲ್ಕು ರಾಜ್ಯಗಳ ವಿವಿಧ ಪೊಲೀಸ್ ಠಾಣೆಗಳಿಗೆ ಬೇಕಾದ ವ್ಯಕ್ತಿಯಾಗಿದ್ದು ಈಗಾಗಲೇ 5 ಕೊಲೆ ಪ್ರಕರಣ, 4 ಡಕಾಯಿತಿ ಪ್ರಕರಣ, 2 ಸುಲಿಗೆ ಪ್ರಕರಣ ಹಾಗೂ ಹಲವು ಕಳುವು ಪ್ರಕರಣಗಳು ಸೇರಿ 20ಕ್ಕೂ ಹೆಚ್ಚು ಪ್ರಕರಣಗಳಲ್ಲಿ ಭಾಗಿಯಾಗಿದ್ದು,


ಬಾಂಬೆ ಸಲೀಂ ಸಹಚರರು

☞12



ಶಿವಕುಮಾರ್ ಬದುಕಿದ್ದಾಗ

**ರೌಡಿಶೀಟರ್‌ರೊಬ್ಬ ಅಪ್ರಾಪ್ತ ಬಾಲಕಿಯನ್ನು ಪ್ರೀತಿಸುತ್ತಿದ್ದು, ಎರಡು ಮನೆಯವರ ಒಪ್ಪಿಗೆಯಂತೆ ಬಾಲಕಿಗೆ 18 ವರ್ಷವಾದ ನಂತರ ಮದುವೆ ಮಾಡಲು ನಿಶ್ಚಯಿಸಿದರು. ಆದರೆ ಐದು ವರ್ಷಗಳಿಂದ ಭಾವಿ ಪತಿಯೊಂದಿಗೆ ಸುತ್ತಾಡಿಕೊಂಡಿದ್ದ ಬಾಲಕಿಗೆ ತನ್ನ ಕಾಲೇಜಿನ ಸಹಪಾಠಿ 17 ವರ್ಷದ ಯುವಕನ ನಡುವೆ ಪರಸ್ಪರ ಆಕರ್ಷಣೆ ಉಂಟಾಗಿ ಪ್ರೀತಿಯ ಬಲೆಗೆ ಬಿದ್ದರು. 30 ವರ್ಷದ ಭಾವಿ ಪತಿಯೊಂದಿಗೆ ಇನ್ನೆರಡು ತಿಂಗಳಲ್ಲಿ ಮದುವೆಯಾಗಲು ಇಷ್ಟವಿಲ್ಲದ ಕಾರಣ ತನ್ನ ದಾರಿಗೆ ಅಡ್ಡವಾಗಿರುವ ರೌಡಿಶೀಟರ್ ಭಾವಿ ಪತಿಗೊಂದು ಗತಿಕಾಣಿಸಬೇಕೆಂದು ಪ್ಲಾನ್ ಮಾಡಿಕೊಂಡು ಭಾವಿ ಪತಿಯನ್ನು ನಂಬಿಸಿ ಜಾಲಿ ರೈಡ್ ಹೋಗೋಣವೆಂದು ಅರಣ್ಯ ಪ್ರದೇಶದ ಕಡೆ ಕರೆದುಕೊಂಡು ಹೋಗಿ ತನ್ನ ಕಾಲೇಜಿನ ಸಹಪಾಠಿಗಳ ಜೊತೆ ಸೇರಿ ಹತ್ಯೆ ಮಾಡಿಸಿ ಘಟನೆ ಬಗ್ಗೆ ಕಥೆ ಕಟ್ಟಿದ ಬಾಲಕಿಯ ನಾಟಕ ಬಯಲಾಗಿ ಮೂವರು ಸಹಪಾಠಿಗಳೊಂದಿಗೆ ಭಾವಿ ಪತ್ನಿಯು ಜೈಲು ಸೇರಿರುವ ಘಟನೆ ಕೆಜಿಎಫ್‌ನ ಆಂಡ್ರಸನ್‌ಪೇಟೆ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.**



ಶಿವಕುಮಾರನಿಗೆ ಖೆಡ್ಡಾ ತೋಡಿದ ಪ್ರೇಯಸಿ

# ಜಾಲಿ ರೈಡ್‌ಗೆ ಕರೆದುಕೊಂಡು ಹೋಗಿ ಭಾವಿ ಪತಿಗೆ ಖೆಡ್ಡಾ ತೋಡಿದ ಪ್ರೇಯಸಿ!



ಸಿಸಿಟಿವಿಯಲ್ಲಿನ ದೃಶ್ಯದಲ್ಲಿ ಮೂರು ಜನ ಅಪ್ರಾಪ್ತರು ಬೈಕ್‌ನಲ್ಲಿ ಹಿಂಬಾಲಿಸುತ್ತಿರುವುದು

**ಕೋಲಾರ**

✍ ಕೋಲಾರ ಮಂಜು

ಕೋಲಾರ ಜಿಲ್ಲೆ, ಕೆಜಿಎಫ್ ನಗರದ ಮಾರಿಕುಪ್ಪಂನ ಅಡಿಷನಲ್ ರಿವಿಟರ್ಸ್ ಲೈನ್‌ನ ವಾಸಿ ಶಿವಕುಮಾರ್ ಅಲಿಯಾಸ್ ತೇನ್ (30) ಚಿಕ್ಕ ವಯಸ್ಸಿನಲ್ಲಿಯೇ ತನ್ನ ಏರಿಯಾದ ಹುಡುಗರ ಜೊತೆ ಸೇರಿ ಸಣ್ಣಪುಟ್ಟ ಕಳ್ಳತನ, ಸುಲಿಗೆ ಮಾಡಿಕೊಂಡು ಬೆಳೆದವನು ದೊಡ್ಡವನಾದ ಮೇಲೆ ರೌಡಿಯಾದನು. 2017-18ರಲ್ಲಿ ಮೂರು ಕೊಲೆ ಪ್ರಯತ್ನದ ಪ್ರಕರಣಗಳು ಹಾಗೂ 2023ರಲ್ಲಿ ವ್ಯಕ್ತಿಯೊಬ್ಬನ ಮೇಲೆ ಹಲ್ಲೆ ಮತ್ತು ಸುಲಿಗೆ ಪ್ರಕರಣಗಳು ದಾಖಲಾಗಿರುವ ಹಿನ್ನೆಲೆಯಲ್ಲಿ ಶಿವಕುಮಾರ್ ಮೇಲೆ ರೌಡಿಶೀಟ್ ತೆರೆಯಲಾಗಿತ್ತು. ಕಳೆದ ಐದು ವರ್ಷದ ಹಿಂದೆ ಇದೇ ಮಾರಿಕುಪ್ಪಂ ಪ್ರದೇಶದ 4ನೇ ಕ್ರಾಸ್‌ನಲ್ಲಿ ವಾಸವಿರುವ ಜಲ್ಲುರವರ ಮಗಳು ಸಲಂಗವಲ್ಲಿ ಎಸ್‌ಎಸ್‌ಎಲ್‌ಸಿಯಲ್ಲಿ ವ್ಯಾಸಂಗ ಮಾಡುತ್ತಿರುವಾಗ 25 ವರ್ಷದ ಚಿರಯುವಕ ಶಿವಕುಮಾರ್‌ಗೆ ಪರಿಚಯವಾಗಿ ಇಬ್ಬರು ಸ್ನೇಹಿತರಾಗಿ ಕೊನೆಗೆ ಪರಸ್ಪರ ಪ್ರೀತಿಸಲು ಪ್ರಾರಂಭಿಸುತ್ತಾರೆ. ಕೆಲವು ವರ್ಷಗಳ ನಂತರ ಇವರಿಬ್ಬರ ಪ್ರೇಮ ವಿಚಾರ ಮನೆಯವರಿಗೆ ಗೊತ್ತಾಗಿ ಬಾಲಕಿ ಸಲಂಗವಲ್ಲಿಯು ಇನ್ನು ಅಪ್ರಾಪ್ತಳಾಗಿರುವುದರಿಂದ ಬಾಲಕಿಗೆ 18 ವರ್ಷವಾದ ನಂತರ ಎರಡು ಮನೆಯವರು ಮಾತುಕತೆ ನಡೆಸಿ ಶಿವಕುಮಾರ್‌ನೊಂದಿಗೆ ಸಲಂಗವಲ್ಲಿಯ ಮದುವೆ ಮಾಡೋಣವೆಂದು ನಿಶ್ಚಯಿಸುತ್ತಾರೆ. ರೌಡಿ ಶಿವಕುಮಾರ್ ಬಾಳಿನಲ್ಲಿ ಬಾಲಕಿಯು ಎಂಟ್ರಿಯಾದ ನಂತರ ಯಾವ ಅಪರಾಧ ಪ್ರಕರಣಗಳಲ್ಲಿ ಭಾಗಿಯಾಗದೆ, ಯಾವ ಜೊತೆಗಾರರ ಸಹವಾಸಕ್ಕೂ ಹೋಗದೆ ಒಂದು ಒಳ್ಳೆಯ ಜೀವನ ನಡೆಸೋಣವೆಂದು ಶಿವಕುಮಾರ್ ಎಲ್ಲಾ ಅಪರಾಧ ಚಟುವಟಿಕೆಗಳನ್ನು ಬಿಟ್ಟು ನ್ಯಾಯವಾಗಿ ಕೆಲಸ ಮಾಡಿಕೊಂಡು ತನ್ನ ಕುಟುಂಬವನ್ನು ಚೆನ್ನಾಗಿ ನೋಡಿಕೊಳ್ಳಬೇಕೆಂದು ನಿರ್ಧರಿಸಿದನು. ಅದರಂತೆ ಕೆಜಿಎಫ್‌ನಲ್ಲಿ ಸಣ್ಣ ಕೆಲಸವೊಂದಕ್ಕೆ ಸೇರಿ ಬರುವ ಹಣದಲ್ಲಿ ಮನೆಗೂ ಕೊಟ್ಟು ಉಳಿದ ಹಣದಲ್ಲಿ ಪ್ರೇಯಸಿಯೊಂದಿಗೆ ಜಾಲಿಯಾಗಿ ಸುತ್ತಾಡಿಕೊಂಡಿದ್ದನು.



ಬರ್ಬರವಾಗಿ ಕೊಲೆಯಾಗಿರುವ ಶಿವಕುಮಾರ್


ಇವನು ಒಳ್ಳೆಯವನಾಗುತ್ತಿರುವುದನ್ನು ನೋಡಿ ಅಪರಾಧ ಚಟುವಟಿಕೆಗೆ ಬರುವಂತೆ ಪುಸಲಾಯಿಸುತ್ತಾ ಕಷ್ಟ ಪಡದೆ ಸುಲಭವಾಗಿ ಹಣ ಮಾಡುವುದನ್ನು ಬಿಟ್ಟು ಕಷ್ಟಪಡಲು ಯಾಕೆ ಹೋಗುತ್ತಿಯಾ ಎಂದು ತನ್ನ ಗುಂಪಿನ ಕೆಲವರು ಅನ್ಯಮಾರ್ಗದ ಕಡೆಗೆ ಎಳೆಯಲು ನೋಡಿದರು. ಇವನು ಯಾರ ಮಾತಿಗೂ ಸೊಪ್ಪು ಹಾಕದೆ ತನ್ನ ಪಾಡಿಗೆ ತಾನು ಕೆಲಸ ಮಾಡಿಕೊಂಡು ಇದ್ದನು. ಕೆಜಿಎಫ್‌ನಲ್ಲಿ ತನ್ನ ಗ್ಯಾಂಗ್‌ನ ಹುಡುಗರ ಮಧ್ಯೆ ಕೆಲಸ ಮಾಡುವುದಕ್ಕಿಂತ ಬೇರೆ ಊರಿಗೆ ಹೋಗಿ ಕೆಲಸ ಮಾಡಿಕೊಂಡು ಬಂದು ನೆಮ್ಮದಿಯಾಗಿ ಮನೆಯವರು ಮತ್ತು ಪ್ರೇಯಸಿಯೊಂದಿಗೆ ಇರಬಹುದೆಂದು ತನಗೆ ಗೊತ್ತಿರುವವರ ಮೂಲಕ ಮಾಲೂರಿನ ಹೊಸೂರು ರಸ್ತೆಯಲ್ಲಿರುವ ಗ್ಲಾಸ್ ಅಂಡ್ ಪ್ಲೈವುಡ್ ಅಂಗಡಿಯಲ್ಲಿ ಕೆಲಸಕ್ಕೆ ಸೇರಿ ಕೆಜಿಎಫ್‌ನಿಂದ ರೈಲಿನಲ್ಲಿ ಹೋಗಿ ಕೆಲಸ ಮುಗಿಸಿಕೊಂಡು ಮತ್ತೆ ರೈಲಿನಲ್ಲಿ ವಾಪಸ್ಸು ಬರುತ್ತಿದ್ದನು. ಶಿವಕುಮಾರ್ ತಾನಾಯ್ತು ತನ್ನ ಕೆಲಸವಾಯ್ತು ಎಂದು ಮನೆಯವರು ಮತ್ತು ಪ್ರೇಯಸಿಯೊಂದಿಗೆ ಸಂತೋಷವಾಗಿ ಕಾಲ ಕಳೆಯುತ್ತಿದ್ದನು. ಪ್ರೇಯಸಿಯು ರಾಬರ್ಟ್‌ಸನ್‌ಪೇಟೆ ಯಲ್ಲಿರುವ ಖಾಸಗಿ ಕಾಲೇಜಿನಲ್ಲಿ ಲ್ಯಾಬ್ ಟೆಕ್ನಿಷಿಯನ್ ಕೋರ್ಸ್ ಮಾಡುತ್ತಿದ್ದು, ಅಪ್ರಾಪ್ತಳಾದ ಸಲಂಗವಲ್ಲಿಯು ಇನ್ನು ಕೆಲವು ತಿಂಗಳಲ್ಲಿ 18 ವರ್ಷದವಳಾಗುವುದನ್ನೆ ಕಾಯುತ್ತಿದ್ದ ಶಿವಕುಮಾರ್ ಪ್ರೀತಿಸಿದವಳನ್ನು ಎಷ್ಟು ಬೇಗನೇ ಮದುವೆಯಾಗುತ್ತೇನೆಂಬ ಕನಸು ಕಾಣುತ್ತಿದ್ದನು.



ಎಸ್ಪಿ ಕೆ.ಎಂ. ಶಾಂತರಾಜು



ಡಿವೈಎಸ್ಪಿ ಪಾಂಡುರಂಗ



ಪಿಐ ಎಸ್.ಟಿ. ಮಾರ್ಕೊಂಡಯ್ಯ

### ಪ್ರೇಯಸಿ ಮುಂದೆ ಕೊಲೆಗೆ ಯತ್ನ

ಶಿವಕುಮಾರ್ ಮಾಲೂರಿಗೆ ಕೆಲಸಕ್ಕೆ ಹೋದ ನಂತರ ಪ್ರೇಯಸಿಯನ್ನು ಖುದ್ದಾಗಿ ಭೇಟಿ ಮಾಡಲಾಗದೆ ಕ್ಷೇಮ ಸಮಾಚಾರವನ್ನು ಫೋನ್ ಮೂಲಕ ವಿಚಾರಿಸಿಕೊಳ್ಳುತ್ತಿದ್ದನು. ಅಂಗಡಿಗೆ ವಾರದ ರಜಾ ಭಾನುವಾರ ಇರುವುದರಿಂದ ಶಿವಕುಮಾರ್ ಪ್ರೇಯಸಿಯನ್ನು ಭಾನುವಾರ ಕರೆದುಕೊಂಡು ಹೋಟೆಲ್, ಸಿನಿಮಾ, ಪಾರ್ಕ್ ಎಂದು ಜಾಲಿಯಾಗಿ ಜೋಡಿಹಕ್ಕಿಗಳಂತೆ ಸುತ್ತಾಡಿಕೊಂಡಿದ್ದರು. ಆದರೆ ಇವರಿಬ್ಬರು ಭೇಟಿಯಾಗುವುದು ಕಡಿಮೆಯಾಗುತ್ತಿದ್ದಂತೆ ಶಿವಕುಮಾರ್ ಮತ್ತು ಪ್ರೇಯಸಿ ನಡುವಿನ ಅಂತರವು ಕಡಿಮೆಯಾಗುತ್ತಾ ಹೋಯಿತು. ಕಳೆದ ಮಾರ್ಚ್ 23ರಂದು ಭಾನುವಾರ ಬೆಳಿಗ್ಗೆ ಶಿವಕುಮಾರ್ ಪ್ರೇಯಸಿಗೆ ಫೋನ್ ಮಾಡಿಕೊಂಡು ಬಾ, ಎಲ್ಲಿಯಾದರು ಬೆಟ್ಟ, ಗುಡ್ಡಗಳ ಕಡೆಗೆ ಹೋಗಿ ತಿಂಡಿ ತಿಂದು ಸ್ವಲ್ಪ ಹೊತ್ತು ಸುತ್ತಾಡಿಕೊಂಡು ಬರೋಣವೆಂದು ಹೇಳಿದನು. ಅದರಂತೆ ಪ್ರೇಯಸಿ ಸಂಗವಲ್ಲಿಯು ಬೆಳಿಗ್ಗೆ 10 ಗಂಟೆಗೆ ಪೂರಿ ಪಲ್ಯವನ್ನು ಬಾಕ್ಸ್‌ಗೆ ಹಾಕಿಕೊಂಡು ಪ್ರಿಯಕರ ಶಿವಕುಮಾರ್‌ಗೆ ಫೋನ್ ಮಾಡಿ ಕರೆದಳು. ಅದರಂತೆ ಶಿವಕುಮಾರ್ ಪ್ರೇಯಸಿಯ ಮನೆಗೆ ಬಂದು ಬೈಕ್‌ನಲ್ಲಿ ಕುರಿಸಿಕೊಂಡು ಸೈನೆಡ್ ಗುಡ್ಡದ ಕಡೆ ಹೋಗುತ್ತಿರುವಾಗ ಪ್ರೇಯಸಿಯು ರೀ ಕಾಮಸಮುದ್ರಂನಲ್ಲಿ ಮೀನಿನ ಹೋಟೆಲ್‌ವೊಂದು ಇದ್ದು ಅಲ್ಲಿ ಚೆನ್ನೈ ಸಮುದ್ರದಿಂದ ಮೀನನ್ನು ತರಿಸಿ ಮೀನಿನ ಸಾರು ಮತ್ತು ಮೀನಿನ ಫ್ರೈ ಮಾಡಿಕೊಡುತ್ತಾರಂತೆ ನನಗೆ ಕಾಲೇಜಿನ ಸಹಪಾಠಿಗಳು ಹೇಳಿದರು. ನನಗೆ ಮೀನಿನ ಊಟ ತಿನ್ನಬೇಕೆಂಬ ಆಸೆಯಾಗುತ್ತಿದೆ ಕರೆದು



ಶಿವಕುಮಾರ್‌ನ ಕೈ ಬೆರಳು ಕಟ್ಟಾಗಿರುವುದು



ಶಿವಕುಮಾರ್ ಮತ್ತು ಪ್ರೇಯಸಿ ಈ ಬೈಕ್‌ನಲ್ಲಿಯೇ ಜಾಲಿ ರೈಡ್ ಹೋಗಿದ್ದು



ಕೊಂಡು ಹೋಗುತ್ತೀರ ಎಂದು ತನ್ನ ಬಯಕೆಯನ್ನು ಹೇಳಿಕೊಂಡಳು. ಆಗ ಶಿವಕುಮಾರ್ ಅಷ್ಟೇ ತಾನೇ ಕಾಮಸಮುದ್ರಂಗೆ ಹೋಗಿಬರೋಣವೆಂದು ಹೇಳಿ ಮಾರಿಕುಪ್ಪಂನಿಂದ ಕಾಮಸಮುದ್ರಂ ರಸ್ತೆಯ ಮಾರ್ಗವಾಗಿ ಹೋಗುತ್ತಿರುವಾಗ ನನಗೆ ಹೊಟ್ಟೆ ತುಂಬಾ ಹಸಿಯುತ್ತಿದೆ ಮುಂದೆ ಬೈಕ್ ನಿಲ್ಲಿಸುತ್ತೇನೆ ತಿಂಡಿ ತಿನ್ನೋಣ ಎಂದು ಹೇಳಿದಕ್ಕೆ ಪ್ರೇಯಸಿಯು ನಾನು ತಿಂಡಿ ತಿಂದಿದ್ದೇನೆ ನೀವು ಮಾತ್ರ ತಿನ್ನಬೇಕು. ಬೈಕ್‌ನಲ್ಲಿ ಹೋಗುತ್ತಿರುವಂತೆ ತಿಂಡಿಯನ್ನು ತಿನ್ನಿಸುತ್ತೇನೆಂದು ಹೇಳಿದ ಪ್ರೇಯಸಿಯು ಶಿವಕುಮಾರ್ ಹಿಂದೆ ಕುಳಿತಲ್ಲಿಂದಲ್ಲೇ ಪೂರಿ ಪಲ್ಯವನ್ನು ತಿನ್ನಿಸುತ್ತಾ ಮುಂದೆ ಸಾಗುತ್ತಿದ್ದರು.


ಕಾಮಸಮುದ್ರಂ ರಸ್ತೆ ವಿರುಪಾಕ್ಷಿ ಗ್ರಾಮದ ಕ್ರಾಸ್ ಬಳಿ ಬೈಕ್‌ನಲ್ಲಿ ಹೋಗುತ್ತಿರುವಾಗ ಬೈಕ್‌ನಲ್ಲಿ ಬಂದ ಮೂವರು ಅಪರಿಚಿತ ಮುಸುಕುದಾರಿ ವ್ಯಕ್ತಿಗಳು ಇವರ ಬೈಕ್‌ನ ಮುಂದೆ, ಹಿಂದೆ ಬರುತ್ತಾ ಚಮಕ್ ಕೊಡುತ್ತಾ ಏಕಾಏಕಿ ಶಿವಕುಮಾರ್ ಮೇಲೆ ಲಾಂಗ್ ಬೀಸಿದರು. ಕತ್ತಿಗೆ ಗಾಯವಾಗಿ ಬೈಕನ್ನು ನಿಲ್ಲಿಸಲು ಪ್ರಯತ್ನಿಸುತ್ತಿರುವಾಗ ಬೈಕ್ ಅಡ್ಡಗಟ್ಟಿದ ದುಷ್ಕರ್ಮಿಗಳು ಶಿವಕುಮಾರ್ ಮತ್ತು ಪ್ರೆಯಸಿಯ ಮೇಲೆ ಹಲ್ಲೆ ಮಾಡಲು ಮುಂದಾದರು. ಆಗ ಶಿವಕುಮಾರ್ ಬೈಕ್ ಬಿಟ್ಟು ಪ್ರೇಯಸಿಯೊಂದಿಗೆ ಸ್ಥಳದಿಂದ ಪರಾರಿಯಾಗಲು ಪ್ರಯತ್ನಿಸಿದರು. ಆಗ ಪ್ರೇಯಸಿಯನ್ನು ಹಿಡಿದುಕೊಂಡು ಕೊಲೆ ಮಾಡುವ ಬೆದರಿಕೆ ಹಾಕಿದರು. ಆಗ ಶಿವಕುಮಾರ್ ಓಡಿ ಹೋಗುತ್ತಿದ್ದವನು ವಾಪಸ್ಸು ಬಂದು ದಯವಿಟ್ಟು ಆಕೆಯನ್ನು ಬಿಟ್ಟು ಬಿಡಿ ಎಂದು ಗೋಗರೆದು ಬೇಡಿಕೊಂಡನು. ಪ್ರೇಯಸಿಯನ್ನು ಬಿಟ್ಟು ಬಿಟ್ಟರು. ನೀನು ಇಲ್ಲಿಂದ ಮನೆಗೆ ಹೋಗು ಎಂದು ಹೇಳಿ ಕಳುಹಿಸಿಬಿಟ್ಟನು. ಅವಳು ಅಲ್ಲಿಂದ ಬೈಕನ್ನು ತೆಗೆದುಕೊಂಡು ಹೋಗುತ್ತಿದ್ದಂತೆ ಶಿವಕುಮಾರ್ ಅರಣ್ಯದೊಳಕ್ಕೆ ಓಡಿ ಹೋದನು. ಇವನ ಹಿಂದೆಯೇ ಅವರು ಓದರು. ರಸ್ತೆಯಲ್ಲಿ ದುಷ್ಕರ್ಮಿಗಳು ತಮ್ಮ ಅಟ್ಟಹಾಸವನ್ನು ತೋರುತ್ತಿರುವ ವೇಳೆ ದೂರದಿಂದ ಆಟೋ ಚಾಲಕನೊಬ್ಬ ಮೊಬೈಲ್‌ನಲ್ಲಿ ವಿಡಿಯೋ ಮಾಡಿಕೊಂಡು ಅದನ್ನು ಆಂಡ್ರಸನ್‌ಪೇಟೆ ಪೊಲೀಸ್ ಠಾಣೆಗೆ ಬಂದು ಮಾಹಿತಿ ನೀಡಿದ್ದಾನೆ ಹಾಗೂ ದುಷ್ಕರ್ಮಿಗಳು ಶಿವಕುಮಾರ್ ಮತ್ತು ಸಲಂಗವಲ್ಲಿ ಮೇಲೆ ಹಲ್ಲೆ ಮಾಡುತ್ತಿರುವಾಗ ಅದೇ ರಸ್ತೆಯಲ್ಲಿ ಬಂದ ಕಾರು ಚಾಲಕನೊಬ್ಬ ಅವರ ಸಾಯಕ್ಕೆ ಹೋದಾಗ ಅವನನ್ನು ಕೊಲೆ ಮಾಡುವ ಬೆದರಿಕೆ ಹಾಕಿ ಅಲ್ಲಿಂದ ಓಡಿಸಿದ್ದಾರೆ. ಕಾರು ಚಾಲಕ ಸಹ ಠಾಣೆಗೆ ಬಂದು ನಡೆಯುತ್ತಿದ್ದ ವಿಚಾರವನ್ನು ತಿಳಿಸಿ ಶಿವಕುಮಾರ್ ಮನೆಯವರೊಂದಿಗೆ ಪೊಲೀಸ್ ಠಾಣೆಗೆ ಹೋಗಿ ನಡೆದ ಘಟನೆಯ ಬಗ್ಗೆ ತಿಳಿಸಿದಳು. ರೌಡಿಶೀಟರ್ ದುಷ್ಕರ್ಮಿಗಳ ಕೈಯಲ್ಲಿ ಸಿಕ್ಕಿಹಾಕಿಕೊಂಡಿರುವ ವಿಚಾರ ತಿಳಿಯುತ್ತಿದ್ದಂತೆ ಪೊಲೀಸರು ಹಾಗೂ ಶಿವಕುಮಾರ್ ಸಂಬಂಧಿಗಳು, ಸ್ನೇಹಿತರು ಅರಣ್ಯಕ್ಕೆ ಬಂದು ಹುಡುಕಾಡಿದಾಗ ರಸ್ತೆಯಿಂದ ಒಂದು ಕಿಲೋ ಮೀಟರ್ ದೂರದಲ್ಲಿನ ಅರಣ್ಯ ಪ್ರದೇಶದಲ್ಲಿ ಶಿವಕುಮಾರ್ ಬರ್ಬರವಾಗಿ ಕೊಲೆಯಾಗಿ ಸತ್ತು ಬಿದ್ದಿರುವುದು ಕಾಣಿಸಿತ್ತು. ಕೂಡಲೇ ಆಂಡ್ರಸನ್ ಪೇಟೆ ಪೊಲೀಸ್ ಠಾಣೆಯ ಪಿಎಸ್‌ಐ ಮಂಜುನಾತ್‌ರವರು ನಡೆದಿರುವ ಕೃತ್ಯದ ಬಗ್ಗೆ ಹಿರಿಯ ಅಧಿಕಾರಿಗಳಿಗೆ ತಿಳಿಸಿದರು. ಸ್ಥಳಕ್ಕೆ ಎಸ್ಪಿ ಕೆ.ಎಂ. ಶಾಂತರಾಜು, ಡಿವೈಎಸ್ಪಿ ಪಾಂಡುರಂಗ, ಸಿಬ್ಬಂದಿ ವರ್ಗ ಮತ್ತು ಬೆರಳಚ್ಚು ತಜ್ಞರು, ಶ್ವಾನದಳದೊಂದಿಗೆ ಹಾಜರಾಗಿ ಪರಿಶೀಲಿಸಿದ ನಂತರ ಪಂಚರ ಸಮಕ್ಷಮದಲ್ಲಿ ಶಿವಕುಮಾರ್ ಶವದ ಮಹಜರ್ ನಡೆಸಿದ ಮೇಲೆ ಮೃತದೇಹವನ್ನು ಕೋಲಾರ ಜಿಲ್ಲಾ ಆಸ್ಪತ್ರೆಯ ಶವಗಾರಕ್ಕೆ ಸಾಗಿಸಿದ್ದು, ಅಲ್ಲಿ ಮರುದಿನ ಬೆಳಿಗ್ಗೆ ವಾರಸುದಾರರ ಸಮಕ್ಷಮದಲ್ಲಿ ಪಂಚನಾಮೆ ನಡೆಸಿದ ಮೇಲೆ ಜಿಲ್ಲಾ ವೈದ್ಯಾಧಿಕಾರಿಗಳಿಂದ ಶವಪರೀಕ್ಷೆ ನಡೆಸಿದ ನಂತರ ಮೃತದೇಹವನ್ನು ವಾರಸುದಾರರಿಗೆ ನೀಡಲಾಯಿತು. ರೌಡಿಶೀಟರ್ ಶಿವಕುಮಾರ್ ಕೊಲೆ ವಿಚಾರ ಕೆಜಿಎಫ್ ನಗರದಲ್ಲಿ ಹರಡುತ್ತಿದ್ದಂತೆ ಸಂಬಂಧಿಕರು, ಸ್ನೇಹಿತರು ಹಾಗೂ ಸಾರ್ವಜನಿಕರು ಕೆಜಿಎಫ್‌ನ ಸಿವಿಲ್ ಆಸ್ಪತ್ರೆ ಮುಂದೆ ಜಮಾಯಿಸಿದ್ದರು.



ಕೊಲೆ ನಡೆದ ಸ್ಥಳವನ್ನು ಪರಿಶೀಲಿಸುತ್ತಿರುವ ಅಧಿಕಾರಿಗಳು



ಪಿಎಸ್‌ಐ ಕಿರಣ್‌ಕುಮಾರ್



ಪಿಎಸ್‌ಐ ಬಿ. ಮಂಜುನಾಥ್

### ಕಥೆ ಕಟ್ಟಿದ ಪ್ರೇಯಸಿ

ರೌಡಿಶೀಟರ್ ಶಿವಕುಮಾರ್ ತನ್ನ ಪ್ರೇಯಸಿಯೊಂದಿಗೆ ಜಾಲಿ ರೈಡ್‌ಗೆಂದು ಹೋಗುತ್ತಿರುವಾಗ ಅವರನ್ನು ಸುತ್ತುವರೆದ ದುಷ್ಕರ್ಮಿಗಳು ಪ್ರೇಯಸಿಯ ಎದುರಲ್ಲೇ ಲಾಂಗ್‌ನಿಂದ ಕೊಚ್ಚಿ ಅಟ್ಟಾಡಿಸಿಕೊಂಡು ಹೋಗಿ ಅರಣ್ಯ ಪ್ರದೇಶದಲ್ಲಿ ಬರ್ಬರವಾಗಿ ಕೊಲೆ ಮಾಡಿ ಪರಾರಿಯಾಗಿರುವ ಆರೋಪಿಗಳ ಪತ್ತೆಗಾಗಿ ಎಸ್ಪಿ ಕೆ.ಎಂ. ಶಾಂತರಾಜು ಮತ್ತು ಡಿವೈಎಸ್ಪಿ ಪಾಂಡುರಂಗರವರ ಮಾರ್ಗದರ್ಶದನಲ್ಲಿ ಉರಿಗಾಂ ಪೊಲೀಸ್ ಠಾಣೆಯ ಪಿಐ ಮಾರ್ಕೊಂಡಯ್ಯರವರ ನೇತೃತ್ವದಲ್ಲಿ ಆಂಡ್ರಸನ್‌ಪೇಟೆ ಪೊಲೀಸ್ ಠಾಣೆಯ ಪಿಎಸ್‌ಐ ಬಿ. ಮಂಜುನಾಥ್, ಕಾಮಸಮುದ್ರಂ ಪೊಲೀಸ್ ಠಾಣೆಯ ಪಿಎಸ್‌ಐ ಕಿರಣ್‌ಕುಮಾರ್, ಎಎಸವಐಗಳಾದ ರಮೇಶ್, ಶಂಕರ್, ಸಿಬ್ಬಂದಿ ವರ್ಗದವರಾದ ಜಬೀರ್‌ಪಾಷ, ರಮೇಶ್ ಜಂಬಗಿ, ಮಂಜುನಾಥ್ ಉಳ್ಳಾಗಡ್ಡಿ, ಸುನೀಲ್‌ಕುಮಾರ್, ಗೋಪಿ, ವೆಂಕಟೇಶ್, ಲೋಕೇಶ್, ಮಂಜುನಾಥ ರೆಡ್ಡಿ, ಅನಿಲ್‌ಕುಮಾರ್, ಮುನಾವರ್ ಪಾಷ, ರಾಮಕೃಷ್ಣರೆಡ್ಡಿ, ಮಂಜುನಾತ್, ಲಕ್ಷ್ಮಣ ತೇಲಿ ಮುಂತಾದವರು ಸೇರಿದಂತೆ ಮೂರು ಪ್ರತ್ಯೇಕ ತಂಡಗಳನ್ನಾಗಿ ರಚಿಸಲಾಯಿತು. ಶಿವಕುಮಾರ್‌ನನ್ನು ಕೊಲೆ ಮಾಡಿದ ಆರೋಪಿಗಳು ಯಾರು, ಕೊಲೆಗೆ ಕಾರಣ ಏನಿರಬೇಕು ಎನ್ನುವುದರ ಬಗ್ಗೆ ತಿಳಿಯಲು ಮೊದಲಿಗೆ ಮೃತ ಶಿವಕುಮಾರ್‌ನ ಪ್ರೇಯಸಿಯನ್ನು ವಿಚಾರಣೆ ಮಾಡಲಾಗಿ ನನಗೆ ಮೀನು ತಿನ್ನುವ ಬಯಕೆಯಾಗಿದೆ ಎಂದು ಕಾಮಸಮುದ್ರಂಗೆ ಕರೆದುಕೊಂಡು ಬೈಕ್‌ನಲ್ಲಿ ಹೋಗುತ್ತಿರುವಾಗ ಮೂರು ಜನ ಅಪರಿಚಿತ ಮುಸುಕುಧಾರಿಗಳು ನಮ್ಮ ಗಾಡಿ ಹಿಂದೆಯೇ ಬಂದು ಲಾಂಗ್‌ನಿಂದ ಶಿವಕುಮಾರ್ ಕತ್ತಿಗೆ ಹೊಡೆದರು. ಆಗ ಬೈಕ್‌ನಿಂದ ಕೆಳಗೆ ಬಿದ್ದು ಅಲ್ಲಿಂದ ಇಬ್ಬರು ಪರಾರಿಯಾಗಲು ಯತ್ನಿಸಿದ್ದಾಗ ಒಬ್ಬ ನನ್ನನ್ನು ಹಿಡಿದುಕೊಂಡು ಬೆನ್ನಿಗೆ ಎರಡು ಏಟು ಕೊಟ್ಟು ಕೊಲೆ ಮಾಡುವುದಾಗಿ ಬೆದರಿಕೆ ಹಾಕಿದರು. ತಕ್ಷಣ ಶಿವಕುಮಾರ್ ನನ್ನ ಪ್ರೇಯಸಿಯನ್ನು ಬಿಟ್ಟುಬಿಡಿ, ನಾನು ಏನು ತಪ್ಪು ಮಾಡಿದ್ದೇನೆಂದು ಈ ರೀತಿ ನಡೆದುಕೊಳ್ಳುತ್ತಿದ್ದೀರಿ. ರೌಡಿಸಂ ಬಿಟ್ಟು ನ್ಯಾಯವಾಗಿ ಕೆಲಸ ಮಾಡಿಕೊಂಡು ಬದುಕುತ್ತಿದ್ದೇನೆಂದು ಹೇಳಿದಕ್ಕೆ ಅವರು ನಿನ್ನನ್ನು ಸಾಯಿಸುವಂತೆ ಹೇಳಿದ್ದಾರೆ. ಸಾಯಲು ಸಿದ್ದನಾಗು ಎಂದರು. ಅದಕ್ಕೆ ಶಿವಕುಮಾರ್ ನನ್ನನ್ನು ಬಿಟ್ಟುಬಿಡಿ ನನಗೆ ತಾಯಿ ಇದ್ದಾರೆ. ಅವರನ್ನು ನೋಡಿಕೊಳ್ಳಬೇಕೆಂದು ಹೇಳುತ್ತಿದ್ದಂತೆ ಒಬ್ಬ ಮಚ್ಚಿನಿಂದ ಕೈಗೆ ಹೊಡೆದನು. ಶಿವಕುಮಾರ್ ಕೈ ಬೆರಳು ತುಂಡಾಯಿತು. ನೋವಿನಿಂದ ಶಿವಕುಮಾರ್, ವಲ್ಲಿ ಬೇಗ ಇಲ್ಲಿಂದ ಹೋಗಿ ಮನೆಯವರನ್ನು ಇಲ್ಲಿಗೆ ಕರೆದುಕೊಂಡು ಬರುವಂತೆ ಹೇಳಿ ಅವರಿಂದ ತಪ್ಪಿಸಿಕೊಂಡು ಅರಣ್ಯದ ಕಡೆ ಓಡಿ ಹೋಗುತ್ತಿದ್ದಂತೆ ಅವರ ಹಿಂದೆಯೇ ಈ ಮೂರು ಜನರು ಜನರು ಲಾಂಗು, ಮಚ್ಚು, ಕತ್ತಿಗಳನ್ನು ಬೀಸುತ್ತಾ ಹಿಂದೆಯೇ ಅರಣ್ಯದೊಳಕ್ಕೆ ಹೋಗಿ ಮರೆಯಾದರು. ನಂತರ ನಾನು ಮನೆಗೆ ಬಂದು ನಡೆದ ವಿಚಾರವನ್ನು ನಮ್ಮ ನೆ ಹಾಗೂ ಶಿವಕುಮಾರ್ ಮನೆಯವರಿಗೆ ತಿಳಿಸಿರುವುದಾಗಿ ಹೇಳಿದಳು.

ಪ್ರೇಯಸಿಯು ಹೇಳಿದ ಕಥೆಯನ್ನು ಕೇಳಿಕೊಂಡ ಪೊಲೀಸರು ಕೆಜಿಎಫ್‌ನಿಂದ ಕಾಮಸಮುದ್ರಂಗೆ ಹೋಗುವ ರಸ್ತೆಯ ಅಕ್ಕಪಕ್ಕದಲ್ಲಿನ ಸಿಸಿಟಿವಿ ದೃಶ್ಯಾವಳಿಗಳನ್ನು ಸಂಗ್ರಹಿಸಿ ಅದನ್ನು ಪರಿಶೀಲಿಸಲಾಗಿ ಮೂರು ಜನ ಅಪ್ರಾಪ್ತ ಬಾಲಕರು ಬೈಕ್‌ನಲ್ಲಿ ಕಾಮಸಮುದ್ರಂ ಕಡೆ ಹೋಗುತ್ತಿರುವ ಅವರ ಮೇಲೆ ಅನುಮಾನ ಬಂದು ಅವರ ಚಲನವಲನಗಳ ಬಗ್ಗೆ ಹಾಗೂ ಬೈಕ್ ನಂಬರ್ ಆಧಾರದ ಮೇಲೆ ಪೊಲೀಸ್ ಬಾತ್ಮೀದಾರರು ನೀಡಿದ ಸುಳಿವಿನ ಮೇರೆಗೆ ರಾಬರ್ಟ್‌ಸನ್‌ಪೇಟೆಯ ಖಾಸಗಿ ಕಾಲೇಜೊಂದರಲ್ಲಿ ಲ್ಯಾಬ್ ಟೆಕ್ನಿಷಿಯನ್ ಕೋರ್ಸ್‌ಗಳನ್ನು ಮಾಡುತ್ತಿರುವ ಅಪ್ರಾಪ್ತ ಬಾಲಕರಾದ (ಹೆಸರುಗಳನ್ನು ಬದಲಿಸಲಾಗಿದೆ) ಆಕಾಶ್ (17), ಮೋಹನ್‌ರಾಜ್ (17), ದೀಪಕ್ (19)ರವರನ್ನು ವಶಕ್ಕೆ ಪಡೆದು ಪೊಲೀಸ್ ಠಾಣೆಗೆ ಕರೆದುಕೊಂಡು ಬಂದು ವಿಚಾರಣೆಗೆ ಒಳಪಡಿಸಲಾಗಿ ಹತ್ಯೆಯ ಸೂತ್ರಧಾರಿ ರೌಡಿಶೀಟರ್ ಶಿವಕುಮಾರ್‌ನ ಭಾವಿ ಪತ್ನಿ ಸಲಂಗವಲ್ಲಿ ಎಂದು ಬಾಯಿಬಿಟ್ಟಿದ್ದಾರೆ. ಮೀನಿನ ರುಚಿ ತೋರಿಸುತ್ತೀನಿ ಎಂದು ಹೇಳಿ ತನ್ನ ಭಾವಿ ಪತಿಗೆ ಖೆಡ್ಡಾ ತೋಡಿದ ಕಿರಾತಕಿಯನ್ನು ಪೊಲೀಸರು ಬಂಧಿಸಿ ವಿಚಾರಣೆಗೆ ಒಳಪಡಿಸಲಾಗಿ ಐದು ವರ್ಷದಿಂದ ನಾನು ಮತ್ತು ಶಿವಕುಮಾರ್ ಪ್ರೀತಿಸುತ್ತಿದ್ದೆವು. ಅಪ್ರಾಪ್ತಳಾಗಿದ್ದರಿಂದ 18 ವರ್ಷವಾದ ನಂತರ ಮದುವೆ ಮಾಡುವ ನಿರ್ಧಾರವನ್ನು ಎರಡು ಮನೆಯವರು ತೆಗೆದುಕೊಂಡಿದ್ದರು. ನಾನು ಇನ್ನು ಎರಡು ತಿಂಗಳಲ್ಲಿ 18 ವರ್ಷಕ್ಕೆ ಕಾಲಿಡುತ್ತಿದ್ದು, ಇದೀಗ ನನಗೆ 17 ವರ್ಷ, ಶಿವಕುಮಾರ್‌ಗೆ 30 ವರ್ಷ ತುಂಬಿ 31 ವರ್ಷಕ್ಕೆ ಬೀಳುತ್ತಿದೆ. 14 ವರ್ಷದ ದೊಡ್ಡವನನ್ನು ಮದುವೆಯಾಗಲು ನನಗೆ ಇಷ್ಟವಿರಲಿಲ್ಲ. ಈ ವಿಚಾರವನ್ನು ಮನೆಯವರಿಗೆ ಹೇಳಿದರೆ ಕೇಳುತ್ತಿಲ್ಲ. ಇನ್ನೆರಡು ತಿಂಗಳಲ್ಲಿ ನಮ್ಮಿಬ್ಬರ

☞ 12



ಅರಣ್ಯ ಪ್ರದೇಶದಿಂದ ಶವವನ್ನು ಸಾಗಿಸುತ್ತಿರುವುದು



ಶಿವಕುಮಾರ್ ಬದುಕಿರುವನೇ ಎಂದು ಪರೀಕ್ಷಿಸುತ್ತಿರುವ ಅವನ ಸ್ನೇಹಿತರು



ಆಟೋ ಡ್ರೈವರ್ ತನ್ನ ಮೊಬೈಲ್‌ನಲ್ಲಿ ಹಲ್ಲೆ ಮಾಡುತ್ತಿರುವ ದೃಶ್ಯವನ್ನು ಸೆರೆ ಹಿಡಿದಿರುವುದು



ಕೊಲೆ ನಡೆದ ಸ್ಥಳದಲ್ಲಿ ಜಮಾಯಿಸಿರುವ ಜನರು



ಕೆಜಿಎಫ್ ಸಿವಿಲ್ ಆಸ್ಪತ್ರೆ ಶವಗಾರದ ಮುಂದೆ ಸೇರಿರುವ ಸಂಬಂಧಿಕರು



ಮೃತನ ಮನೆ ಇರುವ ಬೀದಿಯಲ್ಲಿ ಸೇರಿರುವ ಕಾಲೋನಿಯವರು

6

ಗಾಬರಿಯಿಂದ ''ಚಂದನ್ ರೆಡ್ಡಿನಾ... ಒಂದು ದಿನಕ್ಕಿಂತ ಜಾಸ್ತಿ ಸಮಯ ಅವನ ಬಂಧನದಲ್ಲಿ ಇದ್ದೆ ನಿಜ ತಾನೆ?''

ಪದ್ಮಿನಿ ತಲೆಯಾಡಿಸಿದಳು.

''ಅಂದರೆ... ಅಂದರೆ... ಅವನು ನಿನ್ನ ಮೇಲೆ ಅತ್ಯಾಚಾರ ಮಾಡಿದ್ದಾನೆ ಅಲ್ವ?

ಅಣ್ಣಶ್ರೀಕಾಂತ ''ತುಂಬಾ ದಿನಗಳಿಂದ ಅವನಿಗೆ ನಿನ್ನ ಮೇಲೆ ಆಸೆ ಇತ್ತು. ಅಂದ ಮೇಲೆ ನಿನ್ನನ್ನು... ಛೇ... ಛೇ...' ಎಂದು ಕೋಪದಿಂದ ಚಡಪಡಿಸಿದನು.

ಅವಳು ಗಡುಸಾಗಿ ''ಅವನು ಅತ್ಯಾಚಾರ ಮಾಡಲಿಲ್ಲ. ನಾನಿನ್ನೂ ಶೀಲವತಿಯಾಗಿದ್ದೇನೆ'' ಎಂದಳು.

ತಂದೆ ನೇತ್ರಾವತಿ ''ಹೇಗಮ್ಮ ನಂಬಲು ಸಾಧ್ಯ ? ಆರು ತಿಂಗಳಿನಿಂದ ನಿನಗಾಗಿ ಹಂಬಲಸುತ್ತಿದ್ದವನು ಈ ಅವಕಾಶ ಬಿಡಲು ಹೇಗೆ ಸಾಧ್ಯ ?''

ತಂಗಿ ಪಲ್ಲವಿ ''ನಿಜ ಹೇಳು ಅಕ್ಕ...'' ಕೂಡಲೇ ಪದ್ಮಿನಿ ಪಾರಿಜಾತ, ಸೀರೆ ಸೆರಗು ಸರಿಸಿ, ಮರೆಯಾಗಿದ್ದ ಅದನ್ನು ತೆಗೆದು ಅವರ ಮುಂದೆ ಹಿಡಿದಳು. ಎಲ್ಲರೂ ಬೆಚ್ಚಿಬಿದ್ದರು. ಅದು ಮಾಂಗಲ್ಯ...!

ತಾಯಿ ನೇತ್ರಾವತಿ ಗಾಬರಿಯಿಂದ ''ಅಂದರೆ... ಅವನು ನಿನ್ನನ್ನು ಮದುವೆ ಮಾಡಿಕೊಂಡ್ನ?''

ಅವಳು ಕೋಪ, ಆಕ್ರೋಶದಿಂದ ''ಆ ಹುಚ್ಚ ಆರು ತಿಂಗಳಿನಿಂದ ನನ್ನನ್ನು ಪ್ರೀತಿಸುತ್ತಿದ್ದ ವಿಷಯ ನಿಮಗೆ ಗೊತ್ತಿದೆ. ನನ್ನನ್ನು ಲವ್ ಮಾಡು, ನಾವಿಬ್ಬರು ಮದುವೆ ಆಗೋಣ. ನೀನು ಒಪ್ಪಲೇಬೇಕು ಅಂತ ಕಾಡಿಸುತ್ತಿದ್ದ. ನಾನು ಇದನ್ನ ಹಲವಾರು ಸಲ ನಿಮಗೆ ಹೇಳಿದ್ದೆ. ಆದರೆ ನೀವು ಪೊಲೀಸರಿಗೆ ಹೇಳಲಿಲ್ಲ ಅಥವಾ ಅವನನ್ನು ಎದುರಿಸಿ ಮಾತಾಡಲಿಲ್ಲ. ಅವನೊಬ್ಬ ಮಹಾನ್ ರೌಡಿ ಅಂತ ಹೆದರಿಬಿಟ್ರಿ. ಅವನು ನನ್ನನ್ನು ಮದುವೆ ಮಾಡಿಕೊಂಡ. ಆ ಆಸೆ ತೀರಿಸಿಕೊಂಡ'' ಎಂದಳು.

ಅವಳು ಅಳುತ್ತಿದ್ದಾಳೆ. ಕಂಬನಿ ಜಾರುತ್ತಿದೆ. ಕಂಬನಿ ಕಣ್ಣುಗಳನ್ನು ಆಕ್ರೋಶ ಇದೆ. ತಮ್ಮ ಚಂದ್ರಕಾಂತ ಮದುವೆ ಮಾಡಿಕೊಂಡ ಮೇಲೆ ನಿನ್ನ ಜೊತೆ ಮೊದಲ ರಾತ್ರಿ ಅಂತ...'' ಎಂದು ರಾಗ ಎಳೆದನು.

ಅವಳು ಕೋಪದಿಂದ ''ನಾನು ಶೀಲ ಕಳೆದುಕೊಂಡಿದ್ದೇನೆ ಅಂತ ಅನುಮಾನ ಅಲ್ವ? ಆ ಹುಚ್ಚ ಮದುವೆ ಮಾಡಿಕೊಂಡ ಮೇಲೆ ಬೇಡಿಕೊಂಡ. ಅವನ ಆಸೆ ಏನು ಗೊತ್ತೆ? ನಾನು ಹೆಂಡತಿಯಂತೆ ಸಂತೋಷದಿಂದ ಸಹಕರಿಸುತ್ತಾ ಸುಖ ಕೊಡಬೇಕು ಅಂತ ಅವನು ಬೇಡಿಕೊಂಡ. ನಾನು ಅತ್ತು ರಂಪ ಮಾಡಿ ಜಗಳ ಆಡಿದೆ. ಅವನು ಬೇಡಿಕೊಳ್ಳುತ್ತಿದ್ದನೇ ವಿನಹ ಅತ್ಯಾಚಾರ ಮಾಡಲಿಲ್ಲ.''

ಆಶ್ಚರ್ಯ... ಪರಮಾಶ್ಚರ್ಯ... ನಂಬಿಕೆ ಬರುತ್ತಿಲ್ಲ. ಇಂತಹ ಹುಚ್ಚರು ಇರುತ್ತಾರ?

ತಂಗಿ ಪಲ್ಲವಿ ''ಅದು ಸರಿ ಅಕ್ಕ... ನೀನು ಅಲ್ಲಿಂದ ಹೇಗೆ ಕಲ್ಪಿಸಿಕೊಂಡು ಬಂದೆ?''

ಅವಳು ನಿಟ್ಟುಸಿರುಬಿಡುತ್ತಾ ''ಮಾಂಗಲ್ಯ ಕಟ್ಟಿದ ಮೇಲೆ ಹಲವಾರು ಗಂಟೆಗಳ ಕಾಲ ಸತಿಯಾಗಿರುವ ನೀನು ರತಿಯಾಗಿ ಸಂತೋಷದಿಂದ ಸಹಕರಿಸು ಎಂದು ಬೇಡಿಕೊಳ್ಳುತ್ತಿದ್ದ. ಅವನು ಆಗಾಗ ಕುಡಿಯುತ್ತಿದ್ದ. ಅವನಿಗೆ ಕುಡಿತದ ಅಮಲು ಜಾಸ್ತಿ ಆಗಿತ್ತು. ಅವನು ಎದ್ದು ನಿಂತು ತೂರಾಡುತ್ತಾ ಹತ್ತಿರ ಬಂದಾಗ ಅವನನ್ನು ಬಲವಾಗಿ ತಳ್ಳಿ ಅಲ್ಲಿಂದ ತಪ್ಪಿಸಿಕೊಂಡೆ'' ಎಂದು ಹೇಳಿ ಕತ್ತಿನಲ್ಲಿದ್ದ ಆ ರೌಡಿ ಕಟ್ಟಿದ್ದ ಮಾಂಗಲ್ಯವನ್ನು ಕಿತ್ತು ಎಸೆದಳು. ತಾಯಿ ಅದನ್ನು ಬೇರೆಯವರಿಗೆ ಕಾಣದ ರೀತಿ ಸಾಗಿಸಿದಳು.

ಅಣ್ಣ 'ನಿನಗೆ ಕಾರಲ್ಲಿ ಪ್ರಜ್ಞೆತಪ್ಪಿಸಿದವರು ಯಾರು?'' ಎಂದು ಕೇಳಿದನು.

ಪದ್ಮಿನಿ ಮುಖ ಬಿರುಸಾಯಿತು.

ಹಲ್ಲು ಕಡಿಯುತ್ತಿದ್ದಾಳೆ.

''ಅವಳೇ... ಅವಳೇ ಆ ನಂಬಿಕೆ ದ್ರೋಹಿ, ವಂಚಕಿ ಗೆಳತಿ ಪ್ರಿಯಾಂಕ'' ಎಂದು ಆ ಪ್ರಕರಣದ ಬಗ್ಗೆ ಹೇಳಿದ ನಂತರ ''ಚಂದನ್ ರೌಡಿಗೆ ಹೆದರಿ ಅಥವಾ ಅವನು ಕೊಟ್ಟಿದ್ದ ಹಣದ ಆಸೆಯಿಂದ ಈ ಕೆಲಸ ಮಾಡಿರಬಹುದು'' ಎಂದಳು.

ತಮ್ಮ ಚಂದ್ರಕಾಂತ ಕೋಪದಿಂದ ಅಬ್ಬರಿಸುತ್ತಾ 'ಬೆಳಗಾದ ಕೂಡಲೇ ಅವಳ ಮನೆಗೆ ಹೋಗಿ ಕೆನ್ನೆ ಹೊಡೆದು ಬುದ್ಧಿ ಕಲಿಸುತ್ತೀನಿ'' ಎಂದು ಕೂಗಾಡಿದನು.

ಪದ್ಮಿನಿ ಪಾರಿಜಾತ ''ಏ... ಚಂದ್ರ... ನೀನು ರಂಪ ಮಾಡಿ ಗುಟ್ಟಾಗಿರೋದನ್ನ ಬಹಿರಂಗ ಮಾಡ್ಬೇಡ. ಅವಳಿಗೆ ಸೈಲೆಂಟ್ ಆಗಿ ಯಾವ ರೀತಿ ಟಾರ್ಚರ್ ಕೊಡಬೇಕು ಅಂತ ನನಗೆ ಗೊತ್ತಿದೆ. ಈ ವಿಷಯ ನಮ್ಮ ಸಂಬಂಧಿಕರಿಗೆ ತಿಳಿಯಬಾರದು.''

ತಂದೆ ''ಈಗ ಬೇರೊಂದು ಸಮಸ್ಯೆ ಎದುರಾಗಲಿದೆ'' ಎಂದರು.

ಎಲ್ಲರೂ ಗಾಬರಿಯಾದರು.

''ಏನು... ಏನದು?''

''ಬೆಳಗಾದ ಕೂಡಲೇ ಆ ರೌಡಿ ಮನೆಯ ಹತ್ತಿರ ಬಂದು ಪದ್ಮಿನಿ ನನ್ನ ಹೆಂಡತಿ ಅಂತ ರಂಪ ಮಾಡಿದರೇನು ಗತಿ?''

ತಂಗಿ ಪಲ್ಲವಿ ''ಅಕ್ಕ... ನಿನಗೆ ಮಾಂಗಲ್ಯ ಕಟ್ಟುತ್ತಿರೋದಿಕ್ಕೆ ಸಾಕ್ಷಿ ಇರುವುದೆ? ಅಂದರೆ ವೀಡಿಯೋ ಕವರೇಜ್ ಅಥವಾ ಫೋಟೋಗಳ ಸಾಕ್ಷಿ ಇರುವುದೆ?'' ಎಂದಳು.

''ಇಲ್ಲ... ಅದೆಲ್ಲಾ ಏನೂ ಇಲ್ಲ.''

''ನಿನಗೆ ಖಚಿತವಾಗಿ ಗೊತ್ತಿದೆ ತಾನೆ?''

''ಶ್ಯೂರ್... ನನಗೆ ಚೆನ್ನಾಗಿ ಗೊತ್ತಿದೆ.''

ಅಣ್ಣಮತ್ತುತಮ್ಮ ''ಆ ರೌಡಿ ನಾಳೆ ಬಂದು ಏನಾದರೂ ಗಲಾಟೆ ಮಾಡಿದರೆ ಪೊಲೀಸರಿಗೆ ಕಂಪ್ಲೆಂಟ್ ಕೊಡೋಣ'' ಎಂದರು.

ಆ ರಾತ್ರಿ ಕಳೆಯಿತು.

●●●

ಬೆಳಗಿನ ಎಂಟು ಗಂಟೆ.

ಎಲ್ಲರೂ ಎದ್ದು ನಿತ್ಯಕರ್ಮಗಳನ್ನು ಮಾಡುತ್ತಿದ್ದಾರೆ. ಆಗ ಕೇಳಿ ಬಂದಿತು ಪೊಲೀಸ್ ಸೈರನ್! ಈಗ ಆ ಜೀಪು ಇವರ ಮನೆಯ ಮುಂದೆ ಬಂದು ನಿಂತುಕೊಂಡಿತು.

ನೆರೆಹೊರೆಯ ಜನಗಳು.

ರಸ್ತೆಯಲ್ಲಿ ತಿರುಗುತ್ತಿರುವವರು.

ಆ ಬೀದಿಯ ವ್ಯಾಪಾರಿಗಳು ಈಗ ಕುತೂಹಲದಿಂದ ಈ ಮನೆ ಕಡೆ ಬರುತ್ತಿದ್ದಾರೆ. ಪೊಲೀಸರು ವಾಹನದಿಂದ ಇಳಿದು ಈಗ ಇವಳ ಮನೆಯ ಒಳಗೆ ಪ್ರವೇಶಿಸುತ್ತಿರುವಾಗಲೇ ಜನಗಳು ಗುಂಪುಗೂಡಿದರು. ಎಲ್ಲರೂ ಗಾಬರಿಯಾದರು!

ಚಂದನ್‌ರೆಡ್ಡಿ ಬಂದಿಲ್ಲ. ಅವನು ಪೊಲೀಸರಿಗೆ ಕಂಪ್ಲೆಂಟ್ ಕೊಟ್ಟಿದ್ದಾನೆ. ಮದುವೆ ಆಗಿರೋದಿಕ್ಕೆ ಸಾಕ್ಷಿ, ಆಧಾರ ಇಲ್ಲ. ಹಾಗಾಗಿ ಭಯ ಪಡುವ ಅಗತ್ಯ ಇಲ್ಲ ಎಂದುಕೊಂಡರು.

ಪೊಲೀಸ್ ಅಧಿಕಾರಿ ಶ್ರೀಶೈಲನ್ ಹತ್ತಿರ ಬಂದು ಗಡುಸಾಗಿ ''ಪದ್ಮಿನಿ ಪಾರಿಜಾತ ಎಲ್ಲಿ'' ಎಂದು ಕೇಳಿದರು.

ಅವಳು ಆಗ ತಾನೇ ಸ್ನಾನ ಮುಗಿಸಿ ರೂಮಿನಿಂದ ಹೊರಗೆ ಬಂದಳು.

ಅಣ್ಣ ಗಾಬರಿಯಿಂದ ''ಸಾರ್... ನಾವೇ ಕಂಪ್ಲೆಂಟ್ ಕೊಡಬೇಕು ಅಂತ ಅಂದುಕೊಂಡಿದ್ದೆವು'' ಎಂದನು.

''ಕಂಪ್ಲೆಂಟ್ ಯಾರ ಬಗ್ಗೆ?''

''ಚಂದನ್ ರೆಡ್ಡಿ ಬಗ್ಗೆ.''

ಪೊಲೀಸ್ ಅಧಿಕಾರಿ ಕೋಪದಿಂದ ''ಎಲ್ಲಾ ಸೇರಿ ಪೊಲೀಸರನ್ನ ಕಂಡ ಕೂಡಲೇ ನಾಟಕ ಆಡುತ್ತಿದ್ದೀರ? ಸತ್ತಿರುವ ವ್ಯಕ್ತಿಯ ಬಗ್ಗೆ ಕಂಪ್ಲೆಂಟ್ ಕೊಡ್ತೀರ?''

ಎಲ್ಲರೂ ಬೆಚ್ಚಿಬಿದ್ದರು.

ಪದ್ಮಿನಿ ನಡುಗಿಬಿಟ್ಟಳು.

ಮುಖ ಭಯದಿಂದ ಬಿಳುಚಿಕೊಂಡಿದೆ. ಪೊಲೀಸ್ ಅಧಿಕಾರಿ ಪದ್ಮಿನಿಯ ಹತ್ತಿರ ಬಂದು ''ಚಂದನ್‌ರೆಡ್ಡಿಯ ಕೊಲೆ ಮಾಡಿದ್ದೀಯ ಅನ್ನೋದಿಕ್ಕೆ ಸಾಕ್ಷಿ, ಆಧಾರ ಇದೆ. ಯೂ ಆರ್ ಅಂಡರ್ ಅರೆಸ್ಟ್'' ಎಂದು ಲೇಡಿ ಕಾನ್‌ಸ್ಟೇಬಲ್‌ಗಳ ಕಡೆ ನೋಡಿದನು.

ಮನೆಯವರು ಭಯ, ಗಾಬರಿಯಿಂದ ಮಾತಾಡುತ್ತಿದ್ದಾರೆ. ಆದರೆ ಪದ್ಮಿನಿಯನ್ನು ಅರೆಸ್ಟ್ ಮಾಡಿ ಹೊರಗೆ ನಿಂತಿರುವ ಜೀಬಿನ ಹತ್ತಿರ ಕರೆದುಕೊಂಡು ಹೋಗುತ್ತಿದ್ದಾರೆ. ಆ ಬಡಾವಣೆಯ ಜನಗಳಿಗೆ ಪೂರ್ತಿ ವಿಷಯ ತಿಳಿದಿಲ್ಲ. ಭಯಮಿಶ್ರಿತ ಕುತೂಹಲದಿಂದ ನೋಡುತ್ತಿದ್ದಾರೆ. ಮನೆಯವರೆಲ್ಲಾ ಗಾಬರಿ, ಉದ್ವೇಗ, ಭಯದಿಂದ ಆ ಜೀಪಿನ ಹತ್ತಿರ ಬರುತ್ತಿದ್ದಾರೆ. ಜೀಪು ವೇಗವಾಗಿ ಹೋಗುತ್ತಿದೆ.

ಸೈರನ್ ಮೊಳಗುತ್ತಿದೆ.

●●●

ಗೆಜ್ಜಗಳ್ಳಿ ಗ್ರಾಮ! ಮೈಸೂರಿನಿಂದ ನಂಜನಗೂಡಿಗೆ ಹೋಗುವ ಮಾರ್ಗದಲ್ಲಿ ಈ ಗ್ರಾಮ ಇದೆ. ಅಲ್ಲಿರುವ ನಿರ್ಜನ ಪ್ರದೇಶದ ಮನೆಯ (ಒಂಟಿ ಮನೆ) ಎದುರು ಹಳ್ಳಿಯ ಜನಗಳು ಸೇರಿದ್ದಾರೆ. ಸುದ್ದಿ ಮಧ್ಯಮದವರಿಗೆ ವಿಷಯ ತಿಳಿದ ಕೂಡಲೇ ಕ್ಯಾಮರಗಳೊಂದಿಗೆ ಹಾಜರಾಗಿದ್ದಾರೆ.

ಮನೆಯ ಒಳಭಾಗದ ದೃಶ್ಯ !

ಹಳೆಯ ಕಾಲದ ಮನೆಯನ್ನು ಇತ್ತೀಚೆಗೆ ಈ ಕಾಲಕ್ಕೆ ತಕ್ಕಂತೆ ಬದಲಾವಣೆ ಮಾಡಿದ್ದಾರೆ. ಎಲ್ಲಾ ರೀತಿಯ ಅನುಕೂಲಗಳಿವೆ.

ಆ ದೃಶ್ಯ ಕಂಡು ಬರುತ್ತಿದೆ. ಎರಡು ಹೂವಿನ ಹಾರಗಳು ನೆಲದ ಮೇಲೆ ಬಿದ್ದಿದೆ!

ಜೋಡಿ ದೀಪಗಳು ಮತ್ತು ಎರಡು ಮಣೆಗಳ ಮೇಲೆ ಕೆಂಪು ವಸ್ತ್ರ ಹಾಕಲಾಗಿದೆ ಮತ್ತು ಅರಿಶಿನ, ಕುಂಕುಮ ಮುಂತಾದ ಮಂಗಳ ದ್ರವ್ಯಗಳಿರುವ ನಾಲ್ಕು ಸ್ಟೀಲ್ ಬಟ್ಟಲುಗಳನ್ನು ಇಡಲಾಗಿದೆ.

ವಿಶೇಷತೆ ಏನು? ಕಬ್ಬಿಣದಿಂದ ಮಾಡಿರುವ ಹೋಮ ಕುಂಡ ಇದೆ. ಅದರಲ್ಲಿ ಈಗಲೂ ಸಹ ಬೆಂಕಿ ಹೊಗೆಯಾಡುತ್ತಿದೆ. ಅಲ್ಲಲ್ಲಿ ಬೂದಿ ಆವರಿಸಿದೆ.

ಫ್ರಂಟ್ ಹಾಲ್‌ನ ಸ್ವಲ್ಪ ದೂರದಲ್ಲಿರುವ ಟೇಬಲ್ ಇದೆ. ಅದರ ಬಲ ಭಾಗದ ನೆಲದ ಮೇಲೆ ಡೆಡ್‌ಬಾಡಿ ಬಿದ್ದಿದೆ. ಎದೆಭಾಗದಿಂದ ರಕ್ತದ ಕೋಡಿ ಹರಿದು ಹೆಪ್ಪುಕಟ್ಟಿದೆ.

ವಿಚಿತ್ರ ಏನು? ರಕ್ತದ ಕಲೆ ಇರುವ ಹೆಜ್ಜೆ ಗುರುತುಗಳು ಕಂಡು ಬರುತ್ತಿದೆ. ಪೊಲೀಸ್ ಅಧಿಕಾರಿಗೆ ನೋಟ ಮಾತ್ರದಿಂದ ಗೊತ್ತಾಯಿತು.

ಮನುಷ್ಯರ ಹೆಜ್ಜೆ ಗುರುತಲ್ಲ. ಪ್ರಾಣಿಯ ಹೆಜ್ಜೆ ಗುರುತು. ಫಿಂಗರ್ ಪ್ರಿಂಟ್‌ನವರು ಆ ಗುರುತುಗಳನ್ನು ತುಂಬಾ ಸೂಕ್ಷ್ಮವಾಗಿ ಗಮನಿಸಿದರು.

ಅವರ ಅಭಿಪ್ರಾಯ ಏನು? ಅದು ನಾಯಿ ತಿರುಗಾಡಿರುವ ಮೂಡಿರುವ ಹೆಜ್ಜೆ ಗುರುತು.

ಫ್ರಂಟ್ ಡೋರ್ ಓಪನ್ ಆಗಿತ್ತು. ಆಗ ರಕ್ತ ಕಂಡಿದ್ದರಿಂದ ಡೆಡ್‌ಬಾಡಿ ಹತ್ತಿರ ಬಂದಿದೆ. ಬಹುಶಃ ಆ ನಾಯಿ ರಕ್ತ ನೆಕ್ಕಿರಬೇಕು ಎಂದರು.

ಫೋಟೋಗ್ರಾಫರ್, ಫಿಂಗರ್ ಪ್ರಿಂಟ್‌ನವರು ಮತ್ತು ಡಾಕ್ಟರ್ ತಮ್ಮ ಕೆಲಸ ಮಾಡುತ್ತಿದ್ದಾರೆ.

ಡಾಕ್ಟರ್ ಶವಪರೀಕ್ಷೆ ಮಾಡಿದ ನಂತರ ''ಸಾಯುವ ಮೊದಲು ವಿಪರೀತ ಕುಡಿದಿದ್ದಾನೆ. ಹರಿತವಾದ ಆಯುಧದಿಂದ ತಿವಿದು ಕೊಲೆ ಮಾಡಲಾಗಿದೆ. ಸಾವು ರಾತ್ರಿ ಹತ್ತರಿಂದ ಹನ್ನೊಂದು ಗಂಟೆ ಅವಧಿಯಲ್ಲಿ ಸಂಭವಿಸಿರಬಹುದು. ಸಾವಿಗೆ ಬೇರೆ ಏನಾದರೂ ಕಾರಣ ಇದ್ದರೆ ಪೋಸ್ಟ್‌ಮಾರ್ಟಮ್ ನಂತರ ಗೊತ್ತಾಗುತ್ತದೆ'' ಎಂದರು.

ಶವ ಬಿದ್ದಿರುವ ಜಾಗದಿಂದ ಎಡಭಾಗದಲ್ಲಿರುವ ಮಂಚದ ಅಡಿಯಲ್ಲಿ ಉದ್ದವಾದ ಚಾಕು ಬಿದ್ದಿದೆ. ಈ ಮೊದಲು ಅದನ್ನು ಗಮನಿಸಿರಲಿಲ್ಲ. ಅದರ ಮೇಲೆ ಕರ್ಚಿಫ್ ಹಾಕಿ ಎತ್ತಿಕೊಂಡು ಪರೀಕ್ಷೆ ಮಾಡಿದರು.

ಪೊಲೀಸರಿಗೆ ಸುದ್ದಿ ತಿಳಿದದ್ದು ಬೆಳಗಿನ ಆರು ಗಂಟೆ ಸಮಯದಲ್ಲಿ. ಗ್ರಾಮದಲ್ಲಿ ವಾಸವಾಗಿರುವ ಒಬ್ಬರು ಆ ಮನೆ ಇರುವ ರಸ್ತೆಯಲ್ಲಿ ಹೋಗುತ್ತಿದ್ದಾಗ, ಉರಿಯುತ್ತಿದ್ದ ವಿದ್ಯುತ್ ದೀಪ ಮತ್ತು ತೆರೆದಿರುವ ಬಾಗಿಲನ್ನು ಕಂಡು ಅನುಮಾನ ಬಂದು ಒಳಗೆ ಹೋಗಿ ನೋಡಿದ್ದರು.

ಕೂಡಲೇ ಪೊಲೀಸರಿಗೆ ಫೋನ್ ಮಾಡಿದ್ದನು. ಇಲ್ಲಿಗೆ ಬಂದಾಗ ಮೊದಲು ಸಿಕ್ಕಿದ್ದು ಪದ್ಮಿನಿಯ ಮೊಬೈಲ್ ಮತ್ತು ವ್ಯಾನಿಟಿ ಬ್ಯಾಗು. ಮೂಲೆಯಲ್ಲಿ ಅವಳ ಹೆಸರಿನ ಅಕ್ಷರಗಳಿದ್ದ ಕರ್ಚಿಫ್ ಸಹ ಬಿದ್ದಿತ್ತು. ಹಾಗಾಗಿ ಅವಳನ್ನು ಅರೆಸ್ಟ್ ಮಾಡಿದ್ದರು.

ತನಿಖೆಯಿಂದ ತಿಳಿದದ್ದೇನು?

ಈ ರೌಡಿ ಪದ್ಮಿನಿಯನ್ನು ಪ್ರೀತಿಸಲು, ಮದುವೆ ಆಗಲು ವಿಪರೀತ ಕಾಟ ಕೊಡುತ್ತಿದ್ದ. ರೌಡಿಯ ಕಾರು ಮನೆಯ ಮುಂದೆ ನಿಂತಿತ್ತು. ಅದರೊಳಗೆ ಮತ್ತೊಬ್ಬಳು ಯುವತಿ ಪ್ರಿಯಾಂಕಳಿಗೆ ಸಂಬಂಧ ಪಡುವ ಸಾಕ್ಷಿ, ಆಧಾರಗಳು ಸಿಕ್ಕಿದ್ದವು.

ಅವಳನ್ನು ಬಂಧಿಸಿ ವಿಚಾರಣೆ ಮಾಡಿದಾಗ ಸತ್ಯ ಹೇಳಿದ್ದಳು. ಪದ್ಮಿನಿ, ಪ್ರಿಯಾಂಕರ ಬೆರಳು ಗುರುತುಗಳನ್ನು ಪಡೆಯಲಾಗಿದೆ. ಪದ್ಮಿನಿಯನ್ನು ನಗರದ ಪೊಲೀಸ್ ಲಾಕಪ್‌ನಲ್ಲಿ ಕೂರಿಸಲಾಗಿದೆ. ತನಿಖೆ ತೀವ್ರಗೊಂಡಿದೆ.

ಕೊಲೆಯ ಸುದ್ದಿ, ರೌಡಿಯ ಹುಚ್ಚು ಪ್ರೇಮ ಮತ್ತು ಪದ್ಮಿನಿಯನ್ನು ಹೆದರಿಸಿ ಮದುವೆ ಆಗಿದ್ದ ಸುದ್ದಿ ಸೋಷಿಯಲ್ ಮೀಡಿಯಾಗಳಲ್ಲಿ ವೈರಲ್ ಆಗಿದೆ. ಇದೇನು ಸಾಮಾನ್ಯ ಅಲ್ಲ.

ಚಂದನ್ ರೆಡ್ಡಿ ಪದ್ಮಿನಿನ ರಹಸ್ಯವಾಗಿ ಮದುವೆ ಆಗಲು ತನ್ನ ಸಹಾಯ ಬಯಸಿದ್ದು ಮತ್ತು ವಿವಾಹಕ್ಕೆ ಪೂರಕವಾಗಿ ಎಲ್ಲಾ ಸಿದ್ಧತೆಗಳನ್ನು ಮಾಡಿಕೊಂಡಿದ್ದನ್ನು ಅವಳು ತಿಳಿಸಿದ್ದಳು.

ಪೊಲೀಸ್ ಅಧಿಕಾರಿ ಆ ಮನೆಯ ಸುತ್ತಲು ತಿರುಗುತ್ತಾ ಅಂಗುಲ, ಅಂಗುಲವನ್ನೂ ಎಚ್ಚರಿಕೆಯಿಂದ ಗಮನಿಸುತ್ತಿದ್ದಾನೆ. ಮನೆಯ ಮುಂಭಾಗದ ಹೊಸಿಲಿನ ಹತ್ತಿರ ಪರ್ಸ್ ಬಿದ್ದಿರೋದು ಕಂಡು ಬಂದಿತು.

ಡ್ರೈವಿಂಗ್ ಲೈಸೆನ್ಸ್. ವಿಸಿಟಿಂಗ್ ಕಾರ್ಡ್. ಎರಡು ಸಾವಿರ ಹಣ ಇದೆ.

ಡ್ರೈವರ್ ಹೆಸರು ಎನ್. ಡಿಸೋಜಾ, ವಿಳಾಸ ಮತ್ತು ಫೋನ್ ನಂಬರ್ ಇದೆ. ಅವನ ಬಗ್ಗೆ ಮಾಹಿತಿ ಸಂಗ್ರಹಿಸಲು ಪ್ರಾರಂಭಿಸಿದರು.

ಸಿನಿಮಾ ನಟಿ ಮಲ್ಲಿಕಾಳ ಡ್ರೈವರ್ ಕಮ್ ಬಾಡಿಗಾರ್ಡ್...!

ಮಲ್ಲಿಕಾಳನ್ನು ವಿಚಾರಣೆ ಮಾಡಿದಾಗ ಅವನು ಕೆಲಸಕ್ಕೆ ಬಂದಿಲ್ಲ ಎಂಬುದು ತಿಳಿಯಿತು. ಕಂಟ್ರೋಲ್ ರೂಮ್ ಮೂಲಕ ಮೆಸೇಜ್ ಪಾಸ್ ಆಯಿತು. ಪೊಲೀಸರು ಹದಿನೆಂಟು ಗಂಟೆಗಳ ಅವಧಿಯಲ್ಲಿ, ಚೆನ್ನೈನಲ್ಲಿದ್ದ ಅವನನ್ನು ಅರೆಸ್ಟ್ ಮಾಡಿದ್ದರು.

ಡಿಸೋಜಾನ ಫಿಂಗರ್ ಪ್ರಿಂಟ್ ಪಡೆದು ಪರಿಶೀಲನೆಗೆ ಕಳಿಸಲಾಯಿತು.

ಮೊದಲ ರಿಪೋರ್ಟ್ ಏನು?

ಕೊಲೆಗೆ ಬಳಸಿದ್ದ ಆಯುಧದ ಮೇಲೆ ಪದ್ಮಿನಿ ಪಾರಿಜಾತಳ ಬೆರಳು ಗುರುತು ಹೋಲಿಕೆ ಆಗಿರಲಿಲ್ಲ.

ಡಿಸೋಜಾ ಲಾಕಪ್‌ನಲ್ಲಿದ್ದಾನೆ. ತನಿಖೆ ತೀವ್ರಗೊಂಡಿದೆ. ಪೊಲೀಸರು ಲಾಠಿ ಸೇವೆ ಮಾಡಿದ ಮೇಲೆ ಸತ್ಯ ಹೊರಬಂದಿತು. ತಲೆಮರೆಸಿಕೊಳ್ಳಲು ಪ್ರಯತ್ನ ಮಾಡುತ್ತಿದ್ದ ಸಿನಿಮಾ ನಟಿ ಮಲ್ಲಿಕಾಳನ್ನು ಅರೆಸ್ಟ್ ಮಾಡಿದರು.

ಚಂದನ್‌ರೆಡ್ಡಿ ಈ ಸಿನಿಮಾ ನಟಿಯನ್ನು ಬ್ಲಾಕ್‌ಮೇಲ್ ಮಾಡುತ್ತಿದ್ದನು. ಅವಳ ರಹಸ್ಯ ಪತ್ತೆಮಾಡಿ, ಸಾಕ್ಷಿ, ಆಧಾರ ಸಂಗ್ರಹಿಸಿ ಬ್ಲಾಕ್‌ಮೇಲ್ ಮಾಡಿ ಸಾಕಷ್ಟು ಹಣವನ್ನು ವಸೂಲಿ ಮಾಡಿದ್ದನು. ಅವನ ಕಾಟ ತಡೆಯಲಾರದೆ, ನಂಬಿಕಸ್ಥ ಡ್ರೈವರ್‌ನ ಮೂಲಕ ಕೊಲೆ ಮಾಡಿಸಿದ್ದಾಳೆ. ಚಂದನ್‌ರೆಡ್ಡಿಯ ದಿನನಿತ್ಯದ ಚಟುವಟಿಕೆಗಳು ಮತ್ತು ಪದ್ಮಿನಿಯ ಪ್ರಕರಣದ ಬಗ್ಗೆ ತಿಳಿದಿದ್ದರಿಂದ, ಆ ರಾತ್ರಿ ಪದ್ಮಿನಿ ಅಲ್ಲಿಂದ ತಪ್ಪಿಸಿಕೊಂಡು ಬಂದ ಮೇಲೆ, ಕುಡಿದು ತೂರಾಡುತ್ತಿದ್ದ ಅವನನ್ನು ಕೊಲೆ ಮಾಡಿದ್ದನು. ಫಿಂಗರ್ ಪ್ರಿಂಟ್ ರಿಪೋರ್ಟ್ ಪ್ರಕಾರ ಕೊಲೆಗೆ ಬಳಸಿದ್ದ ಆಯುಧದ ಮೇಲೆ ಅವನ ಬೆರಳು ಗುರುತುಗಳಿರೋದು ದೃಢವಾಗಿದೆ.

ಪದ್ಮಿನಿ ನಿರಪರಾಧಿ ಎಂಬುದು ನಿರೂಪಿತವಾಗಿದೆ. ಸಿನಿಮಾ ನಟಿ ಮಲ್ಲಿಕಾ ಮತ್ತು ಡ್ರೈವರ್‌ನನ್ನು ಅರೆಸ್ಟ್ ಮಾಡಲಾಗಿದೆ. ನ್ಯಾಯಾಲಯದಲ್ಲಿ ಈ ಕೇಸಿನ ವಿಚಾರಣೆ ನಡೆಯುತ್ತಿದೆ.

☯

# ಕೇರಳದ ಸೈಕೋಗೆ ಕೊಡಗಿನಲ್ಲಿ ನಾಲ್ಕು ಬಲಿ!



ಆರೋಪಿ ಗಿರೀಶ

**ಹೋದ ಕಡೆಗಳಲ್ಲಿ ಹೆಂಗಸರನ್ನು ಪಟಾಯಿಸಿ ಮದುವೆಯಾಗಿ ಅವರಿಗೆ ಮಕ್ಕಳು ಕರುಣಿಸಿ ಅಲ್ಲಿಂದ ಎಸ್ಕೇಪ್ ಆಗಿ ಹಲವು ಅಪರಾಧ ಕೃತ್ಯಗಳಲ್ಲಿ ಭಾಗಿಯಾಗಿ ಪೊಲೀಸರಿಗೆ ಬೇಕಾಗಿದ್ದ ಕೇರಳದ ಕ್ರಿಮಿನಲ್ ವೊಬ್ಬ ಕೊಡಗಿಗೆ ಬಂದು ಕಾಫಿ ಬೆಳೆಗಾರರಿಗೆ ಕೆಲಸಗಾರರನ್ನು ಕರೆ ತರುವ ಕೆಲಸ ಮಾಡಿದ್ದಲ್ಲದೆ, ಗಂಡನಿಂದ ದೂರವಿದ್ದ ಮಹಿಳೆಯನ್ನು ತನ್ನ ಬಲೆಗೆ ಕೆಡವಿಕೊಂಡು ಬಳಿಕ ಅವಳಿಗೂ ಚಳ್ಳೆ ಹಣ್ಣು ತಿನ್ನಿಸಿ ಓಡಿ ಹೋಗಿ ಮತ್ತೆ ಬಂದು ಹೆಂಡತಿಯೊಂದಿಗೆ ಜಗಳ ಮಾಡಿಕೊಂಡು ಹೆಂಡತಿ ಸೇರಿದಂತೆ ಆಕೆಯ ಮಗಳು, ಅಜ್ಜ, ಅಜ್ಜಿ ಹೀಗೆ ನಾಲ್ವರನ್ನು ನಿರ್ಧಯಿಯಾಗಿ ಕೊಚ್ಚಿ ಕೊಂದು ಇದೀಗ ಜೈಲ್ ಸೇರಿದ್ದಾನೆ. ಈ ಭೀಕರ ಘಟನೆ ದಕ್ಷಿಣಕೊಡಗಿನ ಪೊನ್ನಂಪೇಟೆ ಪೊಲೀಸ್ ಠಾಣಾ ವ್ಯಾಪ್ತಿಯ ಬೇಗೂರು ಗ್ರಾಮದ ಬಾಳಂಗಾಡು ಎಂಬಲ್ಲಿ ನಡೆದಿದೆ.**

**ಕೊಡಗು**

✍ಬಿ.ಎಂ. ಲವಕುಮಾರ್

ಕೊಲೆಯಾದವರು ಅಮಾಯಕರು, ಬಡವರು, ಕೂಲಿ ಮಾಡಿಕೊಂಡು ವಯೊಸುಕಲು ಗುಡಿಸಲಲ್ಲಿ ಬದುಕುತ್ತಿದ್ದವರು. ಬುಡಕಟ್ಟು ಜನಾಂಗದ ಈ ಕುಟುಂಬವನ್ನು ಬರ್ಬರವಾಗಿ ಕೊಂದು ಜೈಲ್ ಸೇರಿರುವ ಹಂತಕ ಸೈಕೋ ಕಿಲ್ಲರ್ ಎಂದರೆ ತಪ್ಪಾಗಲಾರದು. ನಾಲ್ಕು ಮಂದಿ ಅದರಲ್ಲೂ ಏನೂ ಗೊತ್ತಿಲ್ಲದ ಐದು ವರ್ಷದ ಬಾಲಕಿಯನ್ನು ಕೊಚ್ಚಿ ಕೊಂದಿದ್ದಾನೆ ಎಂದರೆ ಆತನನ್ನು ಮನುಷ್ಯ ಎನ್ನಲಾಗದು ಮನುಷ್ಯ ರೂಪದ ರಾಕ್ಷಸನಿರಬೇಕು. ಈ ಸೈಕೋ ಕಿಲ್ಲರ್ ಬಗ್ಗೆ ಹೇಳುವ ಮುನ್ನ ಕೊಲೆಯಾಗಿ ಹೋದ ಆ ನಾಲ್ವರನ್ನೊಳಗೊಂಡ ಕುಟುಂಬದ ಬಗ್ಗೆಹೇಳಲೇ ಬೇಕು.

ಸೈಕೋ ಕಿಲ್ಲರ್‌ನ ಕೃತ್ಯಕ್ಕೆ ಬಲಿಯಾದ ಕರಿಯ, ಗೌರಿ, ನಾಗಿ ಮತ್ತು ಆರು ವರ್ಷದ ಬಾಲಕಿ ಕಾವೇರಿ ಪೊನ್ನಂಪೇಟೆ ಪೊಲೀಸ್ ಠಾಣಾ ವ್ಯಾಪ್ತಿಯ ಬೇಗೂರು ಗ್ರಾಮದ ಬಾಳಂಗಾಡಿನ ನಿವಾಸಿಗಳು ಇವರು ಇಲ್ಲಿ ಕಳೆದ 40 ವರ್ಷಗಳಿಂದ ವಾಸಿಸುತ್ತಿದ್ದು, ಇವರು ಗುಡಿಸಲವಾಸಿಯಾಗಿದ್ದು, ಕೂಲಿ ಕೆಲಸ ಮಾಡಿಕೊಂಡು ಅದರಲ್ಲಿ ಜೀವನ ಮಾಡಿಕೊಂಡು ಬದುಕು ಸಾಗಿಸುತ್ತಾ ಬರುತ್ತಿದ್ದರು. ಸುತ್ತಮುತ್ತಲಿನ ತೋಟಗಳಲ್ಲಿ ಕೆಲಸ ಮಾಡಿಕೊಂಡಿದ್ದ ಇವರು ಗುಡಿಸಲ ಜೀವನಕ್ಕೆ ತೃಪ್ತಿ ಪಟ್ಟುಕೊಂಡಿದ್ದರು. ಸ್ಥಳೀಯರು ಹೇಳುವ ಪ್ರಕಾರ ಇವರಿಗೆ ಸರ್ಕಾರದ ಯಾವ ಸೌಲಭ್ಯಗಳು ಸಿಗುತ್ತಿರಲಿಲ್ಲ, ಮನೆಗೆ ಖಾತೆ, ರೇಷನ್ ಕಾರ್ಡ್, ಆಧಾರ್ ಕಾರ್ಡ್ ಹೀಗೆ ಯಾವುದೂ ಇಲ್ಲದೆ ನಿಕೃಷ್ಟರಾಗಿ ಬದುಕುತ್ತಿದ್ದರು ಎನ್ನಲಾಗುತ್ತಿದೆ.







ಕೊಲೆಯಾದ ಕರಿಯ, ನಾಗಿ ಹಾಗೂ ಕಾವೇರಿ

ಇವರನ್ನು ಮುಖ್ಯವಾಹಿನಿಗೆ ತರುವ ಕೆಲಸವನ್ನು ಯಾರೂ ಮಾಡಿರಲಿಲ್ಲ. ಅದಕ್ಕಿಂತ ಹೆಚ್ಚಾಗಿ ಇಂತಹ ಕುಟುಂಬಗಳು ಇರುವುದು ಸರ್ವೇ ಸಾಮಾನ್ಯವಾಗಿದ್ದು ಅದರಲ್ಲೂ ಕೃತ್ಯ ನಡೆದ ಬಳಿಕ ಇದೀಗ ಬಯಲಾಗಿದೆ. ಆದರೆ ತಲೆಮಾರುಗಳಿಂದ ಯಾರದ್ದೋ ಮನೆಯಲ್ಲಿ ಕೆಲಸ ಮಾಡಿ ಅವರು ಕೊಟ್ಟ ಕೂಲಿಯಲ್ಲಿ ಹೊಟ್ಟೆತುಂಬಿಸಿಕೊಂಡು ಅದರಲ್ಲಿಯೇ ತೃಪ್ತಿ ಪಡುತ್ತಿದ್ದ ಕರಿಯ ಮತ್ತು ಗೌರಿ ತನ್ನ ಮೊಮ್ಮಗಳು ನಾಗಿ ಮತ್ತು ಮರಿಮಗಳು ಕಾವೇರಿ ಎಲ್ಲರೂ ಗುಡಿಸಲಲ್ಲಿಯೇ ವಾಸವಾಗಿದ್ದರು. ಮೊಮ್ಮಗಳು ನಾಗಿಯನ್ನು ಸುಬ್ರಮಣಿ ಎಂಬಾತ ಮದುವೆಯಾಗಿದ್ದು ಆತನ ಮಗಳೇ ಕಾವೇರಿ.

ನಾಗಿ ಮತ್ತು ಸುಬ್ರಮಣಿ ಮದುವೆಯ ನಂತರ ದಾಂಪತ್ಯ ಸರಿ ಹೋಗಿರಲಿಲ್ಲ. ಹೀಗಾಗಿ ಅಜ್ಜನ ಮನೆಯಲ್ಲಿ ನಾಗಿ ಸೇರಿಕೊಂಡಿದ್ದಳಲ್ಲದೆ ಕೂಲಿ ಕೆಲಸಕ್ಕೆ ಹೋಗುತ್ತಿದ್ದಳು. ಹತ್ತಿರದ ತೋಟಗಳಲ್ಲದೆ ಜೀಪುಗಳಲ್ಲಿ ಹೆಂಗಸರೊಂದಿಗೆ ಬೇರೆಡೆಗೆ ಹೋಗಿ ಕೆಲಸ ಮಾಡುತ್ತಿದ್ದಳು ಹೀಗಿರುವಾಗಲೇ ಅವಳಿಗೆ ಪರಿಚಯವಾದವನೇ ಸೈಕೋ ಗಿರೀಶ್. ಈತ ಮೂಲತ: ಕೇರಳದ ವೈನಾಡು ಜಿಲ್ಲೆಯ ತಿರುನಲ್ಲಿಯ ಉಣಿತು ಪರಂಬು ಗ್ರಾಮದವನಾಗಿದ್ದು, ತಲಪುಝ ಠಾಣಾ ವ್ಯಾಪ್ತಿಯ ಅತ್ತಿಮಲ ಕಾಲೋನಿಯ ಮತ್ತು ತಿರುನೆಲ್ಲಿಯ ಉಂಡಿಗ ಪರಂಬು ಕಾಲೋನಿಯಲ್ಲಿ ಹೆಚ್ಚಾಗಿರುತ್ತಿದ್ದನು. ಈತ ನಿಯತ್ತಿನ ಪ್ರಾಣಿ ಅಂತು ಅಲ್ಲವೇ ಅಲ್ಲ. ಅದಾಗಲೇ ಆತ ಹಲವು ಕೃತ್ಯಗಳಲ್ಲಿ ಭಾಗಿಯಾಗಿದ್ದನು. ಅಷ್ಟೇ ಅಲ್ಲದೆ ಶೋಕಿಲಾಲನಾಗಿದ್ದ ಆತ ಹೆಂಗಸರನ್ನು ತನ್ನ ಬಲೆಗೆ ಬೀಳಿಸಿಕೊಳ್ಳುವುದರಲ್ಲಿಯೂ ನಿಸ್ಸೀಮನಾಗಿದ್ದನು.



ಕೊಲೆಯಾಗಿ ಬಿದ್ದಿರುವ ನಾಲ್ವರ ಮೃತದೇಹಗಳು

ಕೇರಳದಲ್ಲಿದ್ದಾಗಲೇ ಈತ ಎರಡು ಮದುವೆಯಾಗಿದ್ದು, ಮೊದಲ ಹೆಂಡತಿ ಪ್ರಿಯಗೆ ಐದು ಮಕ್ಕಳಿದ್ದು, ಮೂರು ಮಕ್ಕಳು ಪ್ರಿಯ ಜತೆಗಿದ್ದರೆ ಇನ್ನಿಬ್ಬರು ಆತನ(ಗಿರೀಶ) ತಂದೆ ತಾಯಿ ಬಳಿಯಿದ್ದಾರೆ. ಮೊದಲ ಮದುವೆ ಬಳಿಕ ಆಗಾಗ್ಗೆ ಹೆಂಡತಿ ಜತೆ ಜಗಳ ಮಾಡಿಕೊಂಡು ಮನೆ ಬಿಟ್ಟು ಹೋಗುತ್ತಿದ್ದ ಈತ ಮಾನಂದವಾಡಿಯಲ್ಲಿ ಮತ್ತೊಬ್ಬಾಕೆಯನ್ನು ಮದುವೆಯಾಗಿದ್ದನು. ಒಂದಷ್ಟು ದಿನ ಆಕೆ ಜತೆಗಿದ್ದು ಆಕೆಯ ಜತೆಗೂ ಜಗಳವಾಡಿಕೊಂಡು ಅಲ್ಲಿಂದ ಎಸ್ಕೇಪ್ ಆಗಿದ್ದ ಗಿರೀಶ ಅಲ್ಲಿಂದ ಕೆಲಸ ಹುಡುಕಿಕೊಂಡು ಕೊಡಗಿನತ್ತ ಬಂದಿದ್ದನು. ಇದರ ನಡುವೆ ಅದೆಷ್ಟು ಹೆಣ್ಣು ಮಕ್ಕಳ ಬದುಕಿಗೆ ಕೊಳ್ಳಿಯಿಟ್ಟಿದ್ದಾನೋ ಗೊತ್ತಿಲ್ಲ.

ಕೇರಳದಲ್ಲಿದ್ದಾಗಲೇ ಈತ ಹಲವು ಅಪರಾಧ ಚಟುವಟಿಕೆಯಲ್ಲಿ ಭಾಗಿಯಾದ ಆರೋಪವಿತ್ತು. ಜತೆಗೆ ಕೊಡಗಿಗೆ ಬಂದ ಬಳಿಕ ಇಲ್ಲಿಯೂ ಖತರ್‌ನಾಕ್ ಕೆಲಸ ಮಾಡಿದ್ದನು. ಅದು ಏನು ಎಂಬುದನ್ನು ನೋಡಿದ್ದೇ ಆದರೆ, ವಯನಾಡು ಜಿಲ್ಲೆಯ ತಲಪುಝ ಠಾಣಾ ವ್ಯಾಪ್ತಿಯಲ್ಲಿ ನಾಲ್ಕು ವರ್ಷಗಳ ಹಿಂದೆ ವ್ಯಕ್ತಿಯೊಬ್ಬರಿಗೆ ಪಾನಮತ್ತನಾಗಿ ಡಿಕ್ಕಿಪಡಿಸಿದ ಪರಿಣಾಮ ಆತ ಸಾವನ್ನಪ್ಪಿದ್ದನು ಈ ಪ್ರಕರಣದಲ್ಲಿ ಹಲವು ಬಾರಿ ವಾರೆಂಟ್ ಇದ್ದರೂ ನ್ಯಾಯಾಲಯಕ್ಕೆ ಹಾಜರಾಗದೆ ಪೊಲೀಸರ ಕಣ್ಣು ತಪ್ಪಿಸಿ ಕೊಡಗು, ಕೇರಳದಲ್ಲಿ ಓಡಾಡಿಕೊಂಡಿದ್ದನು. ಇನ್ನು ಕೊಡಗಿದೆ ಬಂದ ಬಳಿಕ ಪೊನ್ನಂಪೇಟೆಯ ಠಾಣಾ ವ್ಯಾಪ್ತಿಯಲ್ಲಿ ಶ್ರೀಗಂಧ ಮಾರಾಟ ಪ್ರಕರಣದಲ್ಲೂ ಈತ ಭಾಗಿಯಾದ ಬಗ್ಗೆ ಪ್ರಕರಣವಿದೆ.

ಜತೆಗೆ ಕಾಫಿ ಕುಯ್ಲು ಸಂದರ್ಭ ಕೇರಳದಿಂದ ತನ್ನದೇ ಜೀಪಿನಲ್ಲಿ ಕೊಡಗಿಗೆ ಕಾರ್ಮಿಕರನ್ನು ತಂದು ಬಿಡುತಿದ್ದ ಗಿರೀಶ ಕಾರ್ಮಿಕರ ಹಣವನ್ನು ತಾನೇ ಪಡೆದು ಹಣ ನೀಡದೆ ವಂಚಿಸುತ್ತಿದ್ದ ಬಗ್ಗೆಯೂ ಈತನ ಮೇಲೆ ಪ್ರಕರಣವಿದೆ. ಹೀಗೆ ಹಲವು ಪ್ರಕರಣದಲ್ಲಿಪೊಲೀಸರಿಗೆ ಬೇಕಾಗಿದ್ದರೂ ಪೊಲೀಸರು ಆತನನ್ನು ಹುಡುಕುವ ಪ್ರಯತ್ನ ಮಾಡಿರಲಿಲ್ಲ. ಒಂದು ವೇಳೆ ಆತನನ್ನು ಹಿಡಿದು ಜೈಲಿಗೆ ಅಟ್ಟಿದ್ದರೆ ಇವತ್ತು ನಾಲ್ವರ ಪ್ರಾಣ ಉಳಿಯುತ್ತಿತ್ತೇನೋ?

ಕೇರಳದಿಂದ ಕೆಲಸದವರನ್ನು ವಾಹನದಲ್ಲಿ ಕರೆ ತಂದು ತೋಟಗಳಿಗೆ ಕೆಲಸಕ್ಕೆ ಬಿಡುವ ಸಂದರ್ಭ ತೋಟದ ಕೆಲಸಕ್ಕೆ ಹೋಗುತ್ತಿದ್ದ ನಾಗಿಯ ಪರಿಚಯವಾಗಿತ್ತು. ಅದಾಗಲೇ ನಾಗಿ ಗಂಡ ಸುಬ್ರಹ್ಮಣಿಯಿಂದ ದೂರವಿರುವ ವಿಚಾರ ಗಿರೀಶನಿಗೆ ಗೊತ್ತಾಗಿತ್ತು. ಹೀಗಾಗಿ ಅವಳನ್ನು ಪಟಾಯಿಸುವ ಕೆಲಸ ಮಾಡಿದ್ದನು. ನಾಗಿಗೂ ಆತನ ಪೂರ್ವಾಪರ ಗೊತ್ತಿರಲಿಲ್ಲ. ಹೀಗಾಗಿ ನಾನು ನಿನ್ನನ್ನು ಮದುವೆಯಾಗುತ್ತೇನೆ ಎಂದು ಮನೆಗೆ ಬಂದವನು ಒಂದಷ್ಟು ಜತೆಗಿದ್ದು, ತನ್ನ ಕಾಮತೃಷೆ ತೀರಿಸಿಕೊಂಡಿದ್ದನು. ಆದರೆ ಸಂಸಾರದ ಜವಬ್ದಾರಿ ಹೊತ್ತುಕೊಳ್ಳಲು ತಯಾರಿರಲಿಲ್ಲ. ಅಲ್ಲದೆ ಎಂದಿನಂತೆ ತನ್ನ ಹಳೆ ಚಾಳಿಯನ್ನು ಮುಂದುವರೆಸಿ ಕೇರಳದ ಕಡೆಗೆ

☞ 12



ಘಟನಾ ಸ್ಥಳದಲ್ಲಿ ಪೊಲೀಸರ ಪರಿಶೀಲನೆ



ಬಂಧಿತ ಆರೋಪಿಯೊಂದಿಗೆ ಪೊಲೀಸರು

# ಸೈಕೋಗೆ ಕೊಡಗಿನಲ್ಲಿ ನಾಲ್ಕು ಬಲಿ!

11 ☜

ಹೋದರೆ ಮತ್ತೆ ಬರುತ್ತಿರಲಿಲ್ಲ.

ನಾಗಿ ಜತೆಗಿದ್ದಾಗ ಸೆಲ್ಫಿ ತೆಗೆದುಕೊಂಡು ಆಕೆಯ ಜತೆಗೆ ಜಾಲಿಯಾಗಿದ್ದನಲ್ಲದೆ ತನ್ನದೆಲ್ಲ ಮುಗಿದ ಬಳಿಕ ಹೆಂಡ ಕುಡಿದು ಆಕೆಯ ಜತೆಗೆ ಜಗಳ ತೆಗೆದು ಹೊಡಿದು ಬಡಿದು ಮಾಡಿ ಪರಾರಿಯಾಗಿ ಬಿಟ್ಟಿದ್ದನು. ಆತ ಹೋದ ಬಳಿಕ ಹಳೆಯ ಗಂಡನ ಪಾದವೇ ಗತಿ ಎಂಬ ಸ್ಥಿತಿ ನಾಗಿಯದ್ದಾಗಿತ್ತು. ಹೀಗಾಗಿ ಅವಳು ಹಳೆಯ ಗಂಡ ಸುಬ್ರಹ್ಮಣಿ ಜತೆಗೆ ಮತ್ತೆ ಕ್ಲೋಸ್ ಆಗಿದ್ದಳು ಹೀಗಾಗಿ ಗಿರೀಶನ ದೂರವಿಟ್ಟಿದ್ದಳು. ಈ ನಡುವೆ ನಾಗಿ ಮತ್ತು ಸುಬ್ರಹ್ಮಣಿ ಹತ್ತಿರವಾಗಿರುವ ವಿಚಾರ ತಿಳಿದ ಗಿರೀಶ ಬುಡಕ್ಕೆ ಮೆಣಸಿಟ್ಟುಕೊಂಡವನಂತೆ ಆಡಿದ್ದನು. ಅಲ್ಲದೆ ನಾಗಿಗೂ ಆವಾಜ್ ಹಾಕಿದ್ದನು. ಆದರೆ ಆಕೆ ಸೊಪ್ಪು ಹಾಕಿರಲಿಲ್ಲ ಹೀಗಾಗಿ ಆತನಿಗೆ ಅವಳ ಮೇಲೆ ದ್ವೇಷ ಹುಟ್ಟಿಕೊಂಡಿತ್ತು.



ನನ್ನನ್ನು ಬಿಟ್ಟು ಮತ್ತೆ ಗಂಡನ ಜತೆಗೆ ಹೋಗಿದ್ದ ನಾಗಿಯ ಮೇಲೆ ಇನ್ನಿಲ್ಲದ ಕೋಪ ಬಂದಿತ್ತಲ್ಲದೆ ಆಕೆಯನ್ನು ಮುಗಿಸಿಯೇ ಬಿಡಬೇಕೆಂಬ ತೀರ್ಮಾನಕ್ಕೆ ಗಿರೀಶ ಬಂದು ಬಿಟ್ಟಿದ್ದನು. ಹೀಗಾಗಿ ಮಾರ್ಚ್ 28ರಂದು ಗುರುವಾರ ರಾತ್ರಿ ಹೆಂಡವನ್ನಿಟ್ಟುಕೊಂಡು ನಾಗಿಯಿದ್ದ ಮನೆಗೆ ಹೋಗಿದ್ದನು. ಎಲ್ಲರಿಗೂ ಹೆಂಡಕೊಟ್ಟು ತಾನು ಕುಡಿದಿದ್ದಾನೆ. ರಾತ್ರಿ ನಾಗಿ ಜತೆಗೆ ಜಗಳ ತೆಗೆದಿದ್ದಾನೆ. ಅದು ಅತಿರೇಕಕ್ಕೆ ಹೋಗುತ್ತಿದ್ದಂತೆಯೇ ಕತ್ತಿಯನ್ನು ಆಕೆ ಮೇಲೆ ಬೀಸಿದ್ದಾನೆ. ಅಷ್ಟೇ ಅಲ್ಲದೆ ರಾಕ್ಷಸ ಅವತಾರ ತಾಳಿದ ಆತ ಮನೆಯಲ್ಲಿದ್ದ ಕರಿಯ, ಗೌರಿ, ನಾಗಿ ಮತ್ತು ಬಾಲಕಿ ಮೇಲೆ ಕತ್ತಿ ಬೀಸಿ ಹೇಗೆಂದರೆ ಹಾಗೆ ಕೊಚ್ಚಿ ಹಾಕಿದ್ದಾನೆ.

ಆ ಭೀಕರ ದೃಶ್ಯ ಹೇಗಿತ್ತೆಂದರೆ, ಇಡೀ ಗುಡಿಸಲು ರಕ್ತದಲ್ಲಿ ತೇವವಾಗಿತ್ತು. ಬಾಲಕಿಯ ಅಂಗಗಳೇ ಬೇರ್ಪಟ್ಟಿದ್ದವು. ತುಂಡಾದ ದೇಹಗಳು ಕೃತ್ಯದ ಭೀಕರತೆಯನ್ನು ಹೇಳುತ್ತಿದ್ದವು. ಆ ಗುಡಿಸಲ ಪಕ್ಕದಲ್ಲಿ ಯಾರ ಮನೆಯೂ ಇಲ್ಲದ ಕಾರಣ ಇಂತಹದೊಂದು ಕೃತ್ಯ ನಡೆದಿದೆ ಎಂಬುದೇ ಗೊತ್ತಾಗಿರಲಿಲ್ಲ. ಕೊಲೆ ಮಾಡಿದ ಬಳಿಕ ಗಿರೀಶ್ ಅಲ್ಲಿಂದ ಎಸ್ಕೇಪ್ ಆಗಿದ್ದನು. ಹಾಗೆ ಹೋದವನು ತನ್ನ ವಾಟ್ಸಪ್‌ನಲ್ಲಿ ನಾಗಿಯ ಫೋಟೋ ಹಾಕಿ ಮಲಯಾಳದಲ್ಲಿ ಶ್ರದ್ಧಾಂಜಲಿ ಸಲ್ಲಿಸಿದ್ದನು. ಇತ್ತ ಮಾರನೆಯ ದಿನ ಅಂದರೆ ಮಾರ್ಚ್ 28, ಶುಕ್ರವಾರ ಎಂದಿನಂತೆ ಕೆಲಸ ಮಾಡುವವರು ಬಂದಿದ್ದರು. ಗುಡಿಸಲ ಬಳಿ ಸದ್ದೇ ಕೇಳಿಸದಾಗ ಬಂದು ನೋಡಿದ್ದಾರೆ ಆಗ ಕೃತ್ಯ ಬಯಲಾಗಿದೆ. ಕೂಡಲೇ ಪೊಲೀಸರಿಗೆ ಮಾಹಿತಿ ನೀಡಲಾಗಿದ್ದು ಪೊನ್ನಂಪೇಟೆ ಪೊಲೀಸರು ಹಾಗೂ ಕೊಡಗು ಎಸ್ಪಿ ರಾಮರಾಜನ್, ಹೆಚ್ಚುವರಿ ಎಸ್ಪಿ ಸುಂದರ್ ರಾಜ್, ದಕ್ಷಿಣ ವಲಯ ಐಜಿಪಿ ಡಾ ಬೋರಲಿಂಗೇಗೌಡ ಸೇರಿದಂತೆ ಹಲವು ಪೊಲೀಸ್ ಅಧಿಕಾರಿಗಳು ಹಾಗು ಸಿಬ್ಬಂದಿ ಆಗಮಿಸಿ ಪ್ರಕರಣ ದಾಖಲಿಸಿಕೊಂಡು ತನಿಖೆ ಆರಂಭಿಸಿದ್ದಾರೆ.

ಈ ನಡುವೆ ಕೊಲೆ ಮಾಡಿದ ಹಂತಕ ಗಿರೀಶ್ ಕೇರಳಕ್ಕೆ ಪರಾರಿಯಾಗಿದ್ದನು. ಆತನ ಕುರಿತಂತೆ ಮಾಹಿತಿ ನೀಡಿದ ಹಿನ್ನಲೆಯಲ್ಲಿ ಅಲರ್ಟ್ ಆದ ವೈನಾಡು ಜಿಲ್ಲೆಯ ತಾಲಪೋಯ ಪೊಲೀಸ್ ಠಾಣೆಯ ಎಎಸ್ಐ ಟಿ. ಅನೀಶ್, ವಿಶೇಷ ಶಾಖೆಯ ಠಾಣಾಧಿಕಾರಿ ಜಿ. ಅನಿಲ್, ಸಿಬ್ಬಂದಿ ಶಫೀರ್ ಆರೋಪಿಯನ್ನು ಬಂಧಿಸಿದ್ದಾರೆ. ಈತನ ವಿಚಾರಣೆ ಮಾಡುವ ವೇಳೆ ನಕ್ಸಲ್ ಜಿಶಾಳ ಆಪ್ತ ಕುಟುಂಬದವನಾಗಿದ್ದ ಎಂಬ ಮಾಹಿತಿಯೂ ಸಿಕ್ಕಿದೆ. ಜತೆಗೆ ಇನ್ನು ಐವರನ್ನು ಕೊಲೆ ಮಾಡುವ ಉದ್ದೇಶ ಹೊಂದಿದ್ದ ಎನ್ನುವುದು ಕೂಡ ಬೆಳಕಿಗೆ ಬಂದಿದೆ. ಸದ್ಯ ಪೊಲೀಸರು ಬಂಧಿಸಿದ್ದು ಈತನನ್ನು ಗಲ್ಲಿಗೇರಿಸಬೇಕೆಂಬ ಆಕ್ರೋಶದ ಮಾತುಗಳು ಜನವಲಯದಲ್ಲಿ ಕೇಳಿ ಬರುತ್ತಿದೆ. ☯

# ಭಾವಿ ಪತಿಗೆ ಖೆಡ್ಡಾ ತೋಡಿದ ಪ್ರೇಯಸಿ!

9 ☜

ಮದುವೆಗೆ ಸಿದ್ದತೆಗಳನ್ನು ಮಾಡಿಕೊಳ್ಳುತ್ತಿದ್ದಾರೆ. ನಾನು ಈಗಾಗಲೇ ಕಾಲೇಜಿನ ಸಹಪಾಠಿ ಆಕಾಶ್‌ನನ್ನು ಪ್ರೀತಿಸುತ್ತಿದ್ದು, ಅವನೂ ಸಹ ನನ್ನನ್ನು ಪ್ರೀತಿಸುತ್ತಿದ್ದಾನೆ. ನಮ್ಮಿಬ್ಬರ ಪ್ರೀತಿಗೆ ಅಡ್ಡಿಯಾಗಿರುವ ಶಿವಕುಮಾರ್‌ಗೊಂದು ಗತಿಕಾಣಿಸಿದರೆ ನೆಮ್ಮದಿಯಾಗಿರಬಹುದೆಂದು ಲವರ್ ಆಕಾಶ್ ಬಳಿ ಹೇಳಿಕೊಂಡಾಗ ಅವನು ನನಗೆ ಬೆಂಬಲವಾಗಿ ನಿಂತುಕೊಂಡನು ಮತ್ತು ಅವನ ಸ್ನೇಹಿತರಾದ ಮೋಹನ್‌ರಾಜ್ ಮತ್ತು ದೀಪಕ್‌ನನ್ನು ಜೊತೆಗೆ ಸೇರಿಸಿಕೊಂಡು ಮರ್ಡರ್‌ಗೆ ಸ್ಕೆಚ್ ಹಾಕಿದ್ದೆವು. ಮೊದಲನೆಯದಾಗಿ ಕೆಜಿಎಫ್‌ನ ಪುರಾಣ ಪ್ರಸಿದ್ದ ಶ್ರೀ ಪ್ರಸನ್ನಲಕ್ಷ್ಮಿ ವೆಂಕಟರಮಣಸ್ವಾಮಿ ಜಾತ್ರಾ ಮಹೋತ್ಸವದ ಸಂದರ್ಭದಲ್ಲಿ ಕೊಲೆಗೆ ಬಲೆ ಬೀಸಿದ್ದೆವು. ಆದರೆ ಶಿವಕುಮಾರ್ ಜೊತೆಯಲ್ಲಿ ಅವನ ಸ್ನೇಹಿತರು ಇದ್ದುದ್ದರಿಂದ ಪ್ಲಾನ್ ವಿಫಲವಾಯಿತು. ನಂತರ ಅಂಥೋಣಿಯಾರ್ ಚರ್ಚ್‌ನಲ್ಲಿ ನಡೆದ ಜಾತ್ರೆಯ ಸಮಯದಲ್ಲಿ ಎರಡನೇ ಸಲ ಕೊಲೆಗೆ ಸ್ಕೆಚ್ ಹಾಕಿದ್ದೆವು. ಆದರೆ ಅಲ್ಲಿಯೂ ಸಂಬಂಧಿಕರು ಮತ್ತು ಸ್ನೇಹಿತರೊಂದಿಗೆ ಇದ್ದುದರಿಂದ ಮತ್ತೆ ನಮ್ಮಿಂದ ಬಚಾವ್ ಆದನು. ಮೂರನೇ ಬಾರಿಗೆ ಇವನನ್ನು ಬಿಡಬಾರದು. ರೌಡಿ ಶಿವಕುಮಾರ್‌ನನ್ನು ನೇರವಾಗಿ ಎದುರಿಸಲು ಸಾಧ್ಯವಾಗುವುದಿಲ್ಲ. ಅದಕ್ಕೆ ಅವನನ್ನು ಎಲ್ಲಿಯಾದರು ಒಂಟಿಯಾಗಿ ಕರೆದುಕೊಂಡು ಬಂದು ಸಮಯ ನೋಡಿ ಹತ್ಯೆ ಮಾಡಿ ಶವವನ್ನು ಅರಣ್ಯ ಪ್ರದೇಶದಲ್ಲಿ ಎಸೆದು ಯಾರೋ ಇವನ ವಿರೋಧಿ ಗುಂಪು ಕೊಲೆ ಮಾಡಿರಬೇಕೆನ್ನುವ ರೀತಿಯಲ್ಲಿ ಕಥೆ ಕಟ್ಟಿ ಎಲ್ಲರನ್ನು ನಂಬಿಸಬೇಕೆಂದು ದಿನಾಂಕ ಮತ್ತು ಸಮಯವನ್ನು ನಾವು ನಾಲ್ಕು ಜನರು ಸೇರಿಕೊಂಡು ನಿರ್ಧರಿಸಿದ್ದೆವು. ಅದರಂತೆ ಮೀನು ತಿನ್ನುವ ಬಯಕೆಯನ್ನು ಶಿವಕುಮಾರ್‌ಗೆ ಹೇಳಿ ಕಾಮಸಮುದ್ರಂ ಕಡೆ ಬೈಕ್‌ನಲ್ಲಿ ಹೋಗುತ್ತಿದ್ದಾಗ ಆಕಾಶ್, ಮೋಹನ್‌ರಾಜ್ ಮತ್ತು ದೀಪಕ್ ಮೂರು ಜನರು ಮುಸುಕು ಹಾಕಿಕೊಂಡು ಬಂದು ನಮ್ಮ ಏಲೆ ಅಟ್ಯಾಕ್ ಮಾಡಿ ನನಗೆ ಕೊಲೆ ಬೆದರಿಕೆ ಹಾಕಿದರು. ಆಗ ಶಿವಕುಮಾರ್ ಇವಳನ್ನು ಬಿಟ್ಟುಬಿಡಿ ನನಗೇನಾದರು ಮಾಡಿ ಎಂದು ಹೇಳಿ ಅರಣ್ಯದ ಕಡೆ ಓಡಿ ಹೋದನು. ಆಗ ಈ ಮೂರು ಜನರು ಹಿಂದೆಯೇ ಹೋಗಿ ಶಿವಕುಮಾರ್‌ನನ್ನು ಬರ್ಬರವಾಗಿ ಕೊಚ್ಚಿ ಕೊಲೆ ಮಾಡಿ ವಿಷಯ ತಿಳಿಸಿದರು ಎಂದು ಹೇಳಿದಳು.



ಎಲ್ಲಾ ನಾಲ್ಕು ಜನ ಆರೋಪಿಗಳಿಂದ ಹೇಳಿಕೆ ಪಡೆದ ನಂತರ ಅವರನ್ನು ಕೃತ್ಯ ನಡೆಸಿದ ಸ್ಥಳಕ್ಕೆ ಕರೆದುಕೊಂಡು ಹೋಗಿ ಪರಿಶೀಲಿಸಿದ ಮಲೆ ಕೃತ್ಯಕ್ಕೆ ಉಪಯೋಗಿಸಿದ್ದ ಮಚ್ಚು, ಲಾಂಗು ಮತ್ತು ಕತ್ತಿಗಳನ್ನು ಅಡಗಿಸಿಟ್ಟಿದ್ದ ಸ್ಥಳದಿಂದ ತೆಗೆದುಕೊಟ್ಟಿದ್ದು ಬೈಕ್‌ನ್ನು ಆಕಾಶ್ ಮನೆಯಿಂದ ವಶಕ್ಕೆ ಪಡೆದ ನಂತರ ಪೊಲೀಸರು ಕಾನೂನು ಸಂಘರ್ಷಕ್ಕೆ ಒಳಗಾದ ಮೂವರನ್ನು ಅಪ್ರಾಪ್ತರನ್ನು ಕೆಜಿಎಫ್‌ನ ಮಹಿಳಾ ಮತ್ತು ಮಕ್ಕಳ ರಕ್ಷಣಾ ಕೇಂದ್ರಕ್ಕೆ ಹಾಗೂ ಆರೋಪಿ ದೀಪಕ್‌ನನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ. ಕೊಲೆ ಆರೋಪಿಗಳನ್ನು ಬಂಧಿಸುವಲ್ಲಿ ಯಶಸ್ವಿಯಾಗಿರುವ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರನ್ನು ಎಸ್ಪಿ ಕೆ.ಎಂ. ಶಾಂತರಾಜುರವರು ಶ್ಲಾಘಿಸಿ ಅಭಿನಂದಿಸಿದ್ದಾರೆ. ☯

# ನಟೋರಿಯಸ್ ಕ್ರಿಮಿನಲ್ ಬಾಂಬೆ ಸಲೀಂ ಅರೆಸ್ಟ್!

7 ☜

ನ್ಯಾಯಾಲಯಗಳಲ್ಲಿ ಜಾಮೀನು ಪಡೆದು ಕೇಸಿಗೆ ಹಾಜರಾಗದೇ ತಲೆಮರೆಸಿಕೊಂಡಿದ್ದ ಬಾಂಬೆ ಸಲೀಂ ಬಗ್ಗೆ ತಿಳಿಯುತ್ತಿದ್ದಂತೆ ಅವನು ಮತ್ತು ಅವನ ಸಹಚರರನ್ನು ಬಂಧಿಸಲು ಬಾಗೇಪಲ್ಲಿ ಪೊಲೀಸರು ಎರಡು ತಂಡಗಳಾಗಿ ನಾಲ್ಕು ರಾಜ್ಯಗಳಲ್ಲಿ ತಲಾಶೆ ಮಾಡಲು ಮುಂದಾದರು. ಆಗ ಈ ಪೊಲೀಸ್ ಕಾರ್ಯಾಚರಣೆ ಬಗ್ಗೆ ತಿಳಿಯುತ್ತಿದ್ದಂತೆ ಕಿಡ್ನಾಪ್ ಮಾಡಿದ್ದ ಅಶ್ವತ್ಥನಾರಾಯಣಸ್ವಾಮಿರವರನ್ನು ಕೇರಳದ ಗಡಿಯಲ್ಲಿ ಬಿಟ್ಟು ಪರಾರಿಯಾದರು. ಅಶ್ವತ್ಥನಾರಾಯಣಸ್ವಾಮಿರವರನ್ನು ಸುರಕ್ಷಿತವಾಗಿ ಕರೆದುಕೊಂಡು ಬಂದು ಬಾಂಬೆ ಸಲೀಂ ಮತ್ತು ಅವನ ಸಹಚರರ ಬಗ್ಗೆ ಮಾಹಿತಿ ಪಡೆದ ನಂತರ ಅವರನ್ನು ಮನೆಗೆ ಕರೆದುಕೊಂಡು ಹೋಗಿ ಹೆಂಡತಿ, ಮಕ್ಕಳೊಂದಿಗೆ ಸೇರಿಸಿದರು. ಕಿಡ್ನಾಪ್ ಆಗಿದ್ದವರು ಸುರಕ್ಷಿತವಾಗಿ ಬಂದಿದ್ದರು. ಆರೋಪಿ ಬಾಂಬೆ ಸಲೀಂ ಮತ್ತು ಸಹಚರರನ್ನು ಪತ್ತೆ ಹಚ್ಚುವ ಕಾರ್ಯವನ್ನು ನಿಲ್ಲಿಸದೆ ಮುಂದುವರೆಸಿದರು.

ಫೆಬ್ರವರಿ 14ರಂದು ರಾತ್ರಿ ಕೇರಳದ ಗ್ರಾಮವೊಂದರಲ್ಲಿ ಅಡಗಿ ಕುಳಿತಿರುವ ಬಗ್ಗೆ ಪೊಲೀಸ್ ಬಾತ್ಮೀದಾರರು ನೀಡಿದ ಸುಳಿವಿನ ಮೇರೆಗೆ ಬಾಂಬೆ ಸಲೀಂ ಮತ್ತು ಅವನ ಸಹಚರರಾದ ಆಂಧ್ರಪ್ರದೇಶದ ಚಿಲಮತ್ತೂರಿನ ಅನಿಲ್, ಬೆಂಗಳೂರು ರಾಜಾನುಕುಂಟೆಯ ಚೇತನ್ ಮತ್ತು


ಪತ್ರಿಕಾಗೋಷ್ಠಿಯಲ್ಲಿ ಎಸ್ಪಿ ಮತ್ತು ಅಧಿಕಾರಿಗಳು

ರೌಡಿಶೀಟರ್ ನಾಗೇಶ್, ಬಾಗೇಪಲ್ಲಿಯ ರೌಡಿಶೀಟರ್ ಚೇತನ್, ಗುಡಿಬಂಡೆಯ ರೌಡಿಶೀಟರ್ ಬಾಬುರೆಡ್ಡಿ, ಬೆಂಗಳೂರು ವಾಸಿಗಳಾದ ರೌಡಿಶೀಟರವ ವಾಸಿಮ್ ಹಾಗೂ ಅಸ್ಸಾಂ ಮುಂತಾದವರನ್ನು ಬಂಧಿಸಿ ಅವರಿಂದ 5.15 ಲಕ್ಷ ರೂ. ಹಣ, 30 ಲಕ್ಷ ಬೆಲೆಬಾಳುವ ಇನೋವಾ ಕಾರು, ಎರಡು ಎಟಿಎಂ ಕಾರ್ಡ್ ಮತ್ತು ಕೃತ್ಯಕ್ಕೆ ಬಳಸುತ್ತಿದ್ದ ಎರಡು ಚಾಕು, ಮೂರು ಮಚ್ಚು, ಎರಡು ಕಬ್ಬಿಣದ ರಾಡುಗಳನ್ನು ವಶಕ್ಕೆ ಪಡೆದುಕೊಂಡ ನಂತರ ಆರೋಪಿಗಳನ್ನು ಪೊಲೀಸ್ ಠಾಣೆಗೆ ಕರೆದುಕೊಂಡು ಬಂದು ವಿಚಾರಣೆಗೆ ಒಳಪಡಿಸಲಾಗಿ ಅಪರಾಧ ಕೃತ್ಯಗಳನ್ನು ನಡೆಸಿ ಜೈಲಿನಲ್ಲಿದ್ದಾಗ ಬಾಗೇಪಲ್ಲಿ ಮತ್ತು ಗುಡಿಬಂಡೆಯ ಕೆಲವು ರೌಡಿಶೀಟರ್‌ಗಳು ಪರಿಚಯವಾಗಿ ಅವರು ಸ್ಥಳೀಯವಾಗಿ ನೀಡಿರುವ ಮಾಹಿತಿ ಆಧಾರದ ಮೇಲೆ ಜೈಲಿನಿಂದ ಹೊರಬಂದ ಮೇಲೆ ಎಲ್ಲರೂ ಸೇರಿ ಪ್ಲಾನ್ ಮಾಡಿಕೊಂಡು ಅಶ್ವತ್ಥನಾರಾಯಣಸ್ವಾಮಿ ಬೆಂಗಳೂರು-ಹೈದರಾಬಾದ್ ಹೈವೇ ಆದಿಗಾನಹಳ್ಳಿ ಕ್ರಾಸ್ ಬಳಿ ಬರುತ್ತಿದ್ದಾಗ ಅವರ ಸ್ವಿಫ್ಟ್ ಕಾರಿಗೆ ನಮ್ಮ ಕಾರನ್ನು ಅಡ್ಡಗಟ್ಟಿ ಆತನ ಮೇಲೆ ಹಲ್ಲೆ ಮಾಡಿ ಕಿಡ್ನಾಪ್ ಮಾಡಿಕೊಂಡು ಕರ್ನಾಟಕದ ಕೆಲವು ಕಡೆ ಸುತ್ತಾಡಿ ಕೇರಳದ ಕಡೆ ಹೋಗುತ್ತಿದ್ದಾಗ ಟೋಲ್ ಮತ್ತು ಚೆಕ್ ಪೋಸ್ಟ್‌ಗಳಲ್ಲಿ ಪೊಲೀಸರು ತಲಾಶೆ ನಡೆಸುತ್ತಿರುವ ಬಗ್ಗೆ ನಮ್ಮವರು ಕೊಟ್ಟ ಮಾಹಿತಿ ಮೇರೆಗೆ ಕಿಡ್ನಾಪ್ ಮಾಡಿದ್ದ ಅಶ್ವತ್ಥನಾರಾಯಣಸ್ವಾಮಿರವರನ್ನು ಗಡಿಭಾಗದಲ್ಲಿ ಬಿಟ್ಟು ಮನೆಯೊಂದರಲ್ಲಿ ವಾಸವಾಗಿದ್ದೆವು ಎಂದು ತಮ್ಮ ಹೇಳಿಕೆಯಲ್ಲಿ ತಿಳಿಸಿದನು. ಆರೋಪಿಗಳಿಂದ ಹೇಳಿಕೆಯನ್ನು ಪಡೆದ ನಂತರ ಕಿಡ್ನಾಪ್ ಮಾಡಿದ ಸ್ಥಳಕ್ಕೆ ಕರೆದುಕೊಂಡು ಹೋಗಿ ಸ್ಥಳ ಮಹಜರ್ ನಡೆಸಿದ ಮೇಲೆ ಬಾಂಬೆ ಸಲೀಂ ಸೇರಿದಂತೆ ಏಳು ಜನ ಸಹಚರರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಯಿತು. ಬಾಂಬೆ ಸಲೀಂ ಮತ್ತು ಸಹಚರರನ್ನು ಬಂಧಿಸಿರುವುದು ಮತ್ತು ವಿವಿಧ ಅಪರಾಧಗಳನ್ನು ಭೇದಿಸುವಲ್ಲಿ ಯಶಸ್ವಿಯಾಗಿರುವ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರನ್ನು ಅಭಿನಂದಿಸುವ ಕಾರ್ಯಕ್ರಮವನ್ನು ಏರ್ಪಡಿಸಲಾಗಿದ್ದು, ಇದೇ ಸಂದರ್ಭದಲ್ಲಿ ಎಸ್ಪಿ ಕುಶಾಲ್ ಚೌಕ್ಸಿರವರು ಮಾತನಾಡಿ ಸಾರ್ವಜನಿಕರು ಪೊಲೀಸರ ಜೊತೆ ಸಹಕರಿಸಿ ಮಾಹಿತಿ ನೀಡಿದಾಗ ಅಪರಾಧ ಚಟುವಟಿಕೆಗಳನ್ನು ತಗ್ಗಿಸಲು ಸಾಧ್ಯವಾಗುತ್ತದೆ ಎಂದು ಹೇಳಿದರಲ್ಲದೆ ಬಾಗೇಪಲ್ಲಿ ಪಿಐ ಮತ್ತು ತಂಡವು ಆರೋಪಿಗಳನ್ನು ಬಂಧಿಸಿ ಅವರಿಂದ ಲಕ್ಷಾಂತರ ರೂ.ಗಳು ಮತ್ತು ಆಭರಣಗಳನ್ನು ಪತ್ತೆ ಮಾಡಿ ವಾರಸುದಾರರಿಗೆ ಹಿಂದಿರುಗಿಸಿರುವುದು ತುಂಬಾ ಪ್ರಶಂಸನೀಯ ಕಾರ್ಯ ಎಂದರು. ವಿವಿಧ ಅಪರಾಧಗಳನ್ನು ಭೇದಿಸುವಲ್ಲಿ ಯಶಸ್ವಿಯಾದ ಪೊಲೀಸರನ್ನು ಅತ್ಯಂತ ಆತ್ಮೀಯವಾಗಿ ಸನ್ಮಾನಿಸಿ ಅಭಿನಂದಿಸಿದರು. ☯

ಪಾತಕ ಪ್ರಪಂಚ

# ಹನಿಮೂನ್ ಹುಚ್ಚ!

ವಿವಾಹಿತ ನವದಂಪತಿಗಳಲ್ಲಿ ಬರುವ ಮತ್ತು ಈ ಮಧುರವಾದ ಸುಖದ ಕ್ಷಣಗಳು ಜೀವನ ಪೂರ್ತಿ ನೆನಪಲ್ಲಿ ಉಳಿಯುವಂತ ಸನ್ನಿವೇಶವೇ ಮಧುಚಂದ್ರ.

ಹನಿಮೂನ್... ಹನಿಮೂನ್.

ಬಡಕುಟುಂಬದವರೇ ಆಗಲಿ, ಮಧ್ಯಮ ವರ್ಗದವರೇ ಆಗಲಿ, ಸಾಮಾನ್ಯರೇ ಆಗಿರಲಿ, ತಮ್ಮ ಆರ್ಥಿಕ ಪರಿಸ್ಥಿತಿಗೆ ಅನುಗುಣವಾಗಿ ಸುಂದರವಾದ ಸ್ಥಳಗಳನ್ನು ಆಯ್ಕೆ ಮಾಡಿಕೊಂಡು ಹೋಗುತ್ತಾರೆ.

ಮಧುಚಂದ್ರ ಮಧುರವಾಗಿರಲಿ ಮತ್ತು ಸುಖಕರವಾಗಿರಲಿ ಎಂದು ಸಂಬಂಧಿಕರು ಮತ್ತು ಆತ್ಮೀಯ ಗೆಳೆಯರು ಹಾರೈಸುತ್ತಾರೆ. ಆ ನವದಂಪತಿಗಳು ಸ್ವಂತ ವಾಹನ (ಆರ್ಥಿಕ ಸ್ಥಿತಿ ಉತ್ತಮವಾಗಿದ್ದರೆ)ದಲ್ಲಿ, ಇಲ್ಲದಿದ್ದರೆ ಸರ್ಕಾರದ ಬಸ್ಸುಗಳಲ್ಲಿ ಹೋಗುತ್ತಾರೆ. ಶ್ರೀಮಂತರು ಸ್ಟಾರ್ ಹೋಟೆಲ್‌ಗಳಲ್ಲಿ ರೂಮ್ ಬುಕ್ ಮಾಡುತ್ತಾರೆ.

ಇದು ನಿಜಜೀವನದ ಮತ್ತು ಮಧುಚಂದ್ರಕ್ಕೆ ಸಂಬಂಧ ಪಡುವ ವಾಸ್ತವ ಅಂಶಗಳು ಎಂದು ಹೇಳಬಹುದು. ಆದರೆ ಗುಜರಾತಿನ 'ಪಾಟೀಯಾಲ' ನಗರದಲ್ಲಿರುವ ಶ್ರೀಮಂತ ಯುವಕನ ಹನಿಮೂನ್ ತುಂಬಾ ವಿಚಿತ್ರ ಮತ್ತು ವಿಲಕ್ಷಣತೆಯಿಂದ ಕೂಡಿದೆ. ಈ ಜಗತ್ತಿನಲ್ಲಿ ಎಂತೆಂತಹ ವಿಚಿತ್ರ ತೆವಲಿನ ಜನಗಳು ಇರುತ್ತಾರೆ. ಸೂಚನೆ - ಹೆಸರು, ಪಾತ್ರ ಮತ್ತು ಘಟನೆಗಳು ಮತ್ತು ಸ್ಥಳಗಳ ಹೆಸರನ್ನು ಈ ನೆಲದ ನೇಟಿವೇಟಿಗೆ ತಕ್ಕಂತೆ ಬದಲಿಸಲಾಗಿದೆ.

●●●

ಅವಳು ತುಂಬಾ ಉದ್ವೇಗಗೊಂಡಿದ್ದಾಳೆ. ಅವಳ ಶರೀರ ಕಡಿಮೆ ಪ್ರಮಾಣದಲ್ಲಿ ಕಂಪಿಸುತ್ತಿದೆ.

ಕಾರಣ ಏನು? ಮನ್ಮಥರೂಪಿ ಶ್ರೀಮಂತ ಯುವಕನಿಂದ ಇನ್ನು ಕೆಲವೇ ನಿಮಿಷಗಳಲ್ಲಿ ಸಿಗಲಿರುವ ವಿಶಿಷ್ಟವಾದ ವಿಶೇಷವಾದ ಮಧುಚಂದ್ರದ ಸುಖ ಎಂಬುದು ನಿಜ.

ಅವಳ ಹೆಸರು ಚಂದ್ರಿಕ. ಪ್ರಾಯ ಇಪ್ಪತ್ತೊಂದು. ಫೈನಲ್ ಈಯರ್ ಡಿಗ್ರಿ ಓದುತ್ತಿದ್ದಾಳೆ. ಈ ಹಂತದಲ್ಲಿ, ಆ ಶ್ರೀಮಂತ ಯುವಕ ಶ್ರೀಗಂಧರಾಜ್ ಇವಳನ್ನು ನೋಡಲು ಆಗಾಗ ಬರುತ್ತಿದ್ದನು. ವಿಶೇಷತೆ ಏನು?

ಕಾಲೇಜಿನ ಯುವತಿಯರು ಇರುವಾಗ ಅಥವಾ ಪಬ್ಲಿಕ್ ಆಗಿ ಅವಳನ್ನು ಮೀಟ್ ಮಾಡಲು ಬರುತ್ತಿರಲಿಲ್ಲ. ಅವನ ಬಾಹ್ಯರೂಪದ ಆಕರ್ಷಣೆಗೆ ಇವಳು ಒಳಗಾಗಿದ್ದಳು. ಕಟ್ಟುಮಸ್ತಾದ ಶರೀರ. ಶ್ರೀಮಂತಿಕೆ ಲಕ್ಷಗಳಿರುವ ಆ ಯುವಕ ಬೆಲೆಬಾಳುವ ಡ್ರೆಸ್ ಧರಿಸುತ್ತಾನೆ. 'ಸ್ಯಾಂಟ್ರೋ ಮಾರ್ಕ್' ಎಂಬ ಹೊಸ ಮಾಡೆಲ್ ಕಾರಿನ ಬೆಲೆ ಇಪ್ಪತ್ತೆಂಟು ಲಕ್ಷಗಳು. ಆ ಕಾರಲ್ಲಿ ಇವಳನ್ನು ನೋಡಲು ಆಗಾಗ ಬರುತ್ತಿದ್ದನು.

ಅವಳಿಗೆ ಆಶ್ಚರ್ಯವಾಗಿತ್ತು. ಚಂದ್ರಿಕ ಸಾಮಾನ್ಯ ರೂಪಿನ ಯುವತಿ. ಬಡಕುಟುಂಬದವಳು. ಆದರೆ ಶ್ರೀಮಂತ ಮನ್ಮಥ ಯುವಕ. ನನ್ನನ್ನು ಯಾಕೆ ಮೆಚ್ಚಿಕೊಂಡ?

ಲವ್ ಈಸ್ ಬ್ಲೈಂಡ್! ಪ್ರೀತಿಗೆ ಬಾಹ್ಯರೂಪ ಮುಖ್ಯ ಅಲ್ಲ. ಬಡತನ-ಶ್ರೀಮಂತಿಕೆ ಮುಖ್ಯವಲ್ಲ. ಪ್ರೀತಿಗೆ ಪ್ರೀತಿನೇ ಮುಖ್ಯ.

ಇದು ಏನು ಸಾಮಾನ್ಯ ಪ್ರೀತಿ ಆಗಿರಲಿಲ್ಲ. ಅವಳ ಕುಟುಂಬದವರಿಗೆ ಧಾರಾಳವಾಗಿ ಹಣದ ಸಹಾಯ ಮಾಡಿದ್ದನು. ಅಗತ್ಯ ಇರುವ ಎಲ್ಲಾ ವಸ್ತುಗಳನ್ನು ಕೊಡಿಸಲು ಸ್ಟೋರ್ ಮಾಲೀಕರಿಗೆ, ಎಲೆಕ್ಟ್ರಿಕಲ್ ಸ್ಟೋರ್‌ನವರಿಗೆ ಹೇಳಿದ್ದನು.

ಎಲ್ಲವೂ ಮನೆ ತುಂಬಿತ್ತು.

ಚಂದ್ರಿಕಾಳಿಗೆ ಎಚ್ಚರಿಸಿದ್ದನು.

ಯಾವ ಕಾರಣದಿಂದಲೂ ನಮ್ಮಿಬ್ಬರ ಲವ್ ಬಗ್ಗೆ, ಮದುವೆ ಆಗಲಿರುವ ವಿಚಾರ ಮತ್ತು ನಾನು ಸಹಾಯ ಮಾಡಿರುವ ವಿಚಾರ ಬಹಿರಂಗ ಆಗಬಾರದು ಎಂದು ಎಚ್ಚರಿಸಿದ್ದನು.

ಮನೇಲಿ ನಂಬುವರೆ? ಒತ್ತಾಯ ಮಾಡಿ ಕೇಳಿದ್ದರು. ಆಗ ಸುಳ್ಳು ಹೇಳಿದ್ದಳು. ನನ್ನನ್ನು ಶ್ರೀಮಂತ ಯುವಕ ಲವ್ ಮಾಡುತ್ತಿದ್ದಾನೆ. ಅವನು ಸಹಾಯ ಮಾಡಿದ್ದಾನೆ ಎಂದು ಹೇಳಿದ್ದಳೇ ವಿನಹ ಅವನ್ಯಾರು ಅಂತ ಹೇಳಿರಲಿಲ್ಲ.

ಅವಳ ಮೊಬೈಲ್‌ನಲ್ಲೇ ಆಗಲಿ ಮತ್ತು ಲಾಕರ್ ನಲ್ಲೇ ಆಗಲಿ ಅವನ ಫೋಟೋ ಇರಲಿಲ್ಲ. ಆ ರೀತಿ ಇರಕೂಡದು. ಫೋಟೋ ಇಟ್ಟುಕೊಳ್ಳಬಾರದು ಎಂದು ಎಚ್ಚರಿಕೆ ನೀಡಿದ್ದರು.

ಇದು ತುಂಬಾ ಮುಖ್ಯವಾದ ಮತ್ತು ಗೌಪ್ಯತೆ ಕಾಪಾಡುವ ತಂತ್ರ ಆಗಿತ್ತು.

''ಚಂದ್ರಿಕ ಮೈಡಿಯರ್... ನಾನು ನಿನಗೆ ಫೋನ್ ಮಾಡಲ್ಲ. ನಿನಗೆ ನನ್ನ ನಂಬರ್ ಕೊಡಲ್ಲ. ಎಲ್ಲಿ, ಯಾವಾಗ ಮೀಟ್ ಮಾಡ್ಬೇಕು ಅಂತ ನಿನಗೆ ವಿಷಯ ತಿಳಿಸಲಾಗುತ್ತೆ.''

''ನೀವೇ ಮೀಟ್ ಮಾಡ್ತೀರ?''

''ನನ್ನ ಪರವಾಗಿ ಒಬ್ಬ ಬಂದು ಶ್ರೀಗಂಧರಾಜ್ ಕಡೆಯವನು ಅಂತ ಹೇಳಿ ಎಲ್ಲಾ ಹೇಳ್ತಾನೆ.''

ಅವಳು ಗಾಬರಿ, ಅನುಮಾನದಿಂದ ''ನೀವು ಇಷ್ಟೊಂದು ಹೆದರಲು ಕಾರಣ ಏನು'' ಎಂದು ಕೇಳಿದಳು.

''ಕಾರಣ ನನ್ನ ಡ್ಯಾಡಿ.''

''ಅಂದರೆ... ಅಂದರೆ...''

''ಅವರಿಗೆ ಪ್ರಭಾವಶಾಲಿ ರಾಜಕಾರಣಿಯ ಮಗಳ ಜೊತೆ ಮದುವೆ ಮಾಡಿಸಲು ಎಲ್ಲಾ ಸಿದ್ಧತೆ ಮಾಡಿಕೊಳ್ಳುತ್ತಿದ್ದಾರೆ. ನಿನ್ನನ್ನು ಲವ್ ಮಾಡುತ್ತಿರುವ ನಾನು ಬೇರೆ ಹೆಣ್ಣನ್ನು ಮದುವೆ ಆಗಲಾರೆ.''

''ಆದರೆ... ಆದರೆ...''

''ನೋಡು ಚಂದ್ರಿಕ... ನಾವಿಬ್ಬರು ರಹಸ್ಯವಾಗಿ ಮದುವೆ ಆಗಿ ಒಂದು ವಾರ ಹನಿಮೂನ್ ಆಚರಿಸೋಣ. ''ಆಮೇಲೆ ನಾನು ನಮ್ಮಿಬ್ಬರ ಮದುವೆ ಮತ್ತು ಹನಿಮೂನ್ ದೃಶ್ಯಗಳ ವೀಡಿಯೋ ಕ್ಲಿಪ್ ಕಳಿಸುತ್ತೇನೆ ಮತ್ತು ಸೋಷಿಯಲ್ ಮೀಡಿಯಾದಲ್ಲಿ ವೈರಲ್ ಮಾಡ್ತೀನಿ. ಆಗ ಡ್ಯಾಡಿ ಮದುವೆ ಸಂಬಂಧ ಒಪ್ಪಿಕೊಳ್ಳುತ್ತಾರೆ. ನೀನು ಸೊಸೆ ಆಗುತ್ತೀಯ.''

''ನಿನ್ನ ಡ್ಯಾಡಿ ಕೋಪ ಮಾಡಿಕೊಳ್ಳಲ್ವ?''

''ಅವರಿಗೆ ನಾನೊಬ್ಬನೇ ಮಗ. ನನ್ನ ಮೇಲೆ ತುಂಬಾ ಪ್ರೀತಿ ಇದೆ. ಎರಡು ದಿವಸ ಕೋಪ ಮಾಡಿಕೊಂಡಿರುತ್ತಾನೆ. ಆಮೇಲೆ ಎಲ್ಲಾ ಸರಿಯಾಗುತ್ತದೆ'' ಎಂದು ಹೇಳಿದನು.

ಆದರೂ ಅವಳಲ್ಲಿ ಆತಂಕ, ಭಯ ಕಾಡುತ್ತಿದೆ.

ಅವಳು ಮನೇಲಿ ಲವ್ ಮತ್ತು ಮದುವೆ ವಿಚಾರ ಹೇಳಿಲ್ಲ. ಹೆತ್ತವರಿಗೆ ಹೇಳದೆ ಗುಟ್ಟಾಗಿ ಮದುವೆ ಮಾಡಿಕೊಂಡರೆ ಅವರಿಗೂ ಸಹ ತುಂಬಾ ಬೇಜಾರಾಗುತ್ತದೆ.

ಏನು ಮಾಡಲಿ?

ಆದರೆ ಶ್ರೀಗಂಧರಾಜ್...! ಮನ್ಮಥ ರೂಪಿ ಶ್ರೀಮಂತ. ಅವನನ್ನು ಬಿಟ್ಟಿರಲಾರದೆ ಮನೇಲಿ ಸುಳ್ಳು ಹೇಳಿ ಹೊರಟಿದ್ದಳು.

●●●

ಹನಿಮೂನ್ ಎಲ್ಲಿ?

ಊಟಿ, ಕೊಡೈಕೆನಾಲ್ ಅಥವಾ ಇನ್ನಿತರ ಪ್ರಕೃತಿ ರಮಣೀಯ ಪ್ರದೇಶಗಳಲ್ಲಿ ಅಲ್ಲ.

ಗ್ರೇಟ್ ಗಾರ್ಡನ್ ಬಂಗಲೆ! 'ಬೈಲಾಪುರ' ಎಂಬ ಗ್ರಾಮದಲ್ಲಿರುವ ಪ್ರಕೃತಿ ಸೌಂದರ್ಯದ ನಡುವೆ ಬಂಗಲೆ ನಿರ್ಮಿಸಲಾಗಿದೆ. ಡೇ ಅಂಡ್ ನೈಟ್ ವಾಚ್ ಮಾಡಲು ಮತ್ತು ಈ ಶ್ರೀಮಂತನಿಗೆ ಬೇಕಾದ ಡ್ರಿಂಕ್ಸ್ ಮತ್ತು ನಾನ್ ವೆಜ್ ಐಟಂಗಳನ್ನು ಸಿದ್ಧಪಡಿಸಲು ಇವರು ಸಿದ್ಧರಾಗಿರುತ್ತಾರೆ. ಶ್ರೀಗಂಧರಾಜ್ ಎಚ್ಚರಿಕೆ ನೀಡಿದ್ದನು. ಅದು ಏನು ಗೊತ್ತೆ?

ಇಲ್ಲಿಗೆ ಯಾರೇ ಬರಲಿ, ಇಲ್ಲಿ ಏನೇ ನಡೆಯಲಿ ಬಹಿರಂಗ ಆಗಬಾರದು. ಎಚ್ಚರ ತಪ್ಪಿದರೆ ನಿಮ್ಮಿಬ್ಬರ ಪ್ರಾಣ ಉಳಿಯೋಲ್ಲ.

ಈ ಸೆಕ್ಯುರಿಟಿಯವರಿಗೆ ಬೇರೆಯವರಿಗೆ ಕೊಡುವುದಕ್ಕಿಂತ ಹತ್ತದಷ್ಟು ಜಾಸ್ತಿ ಸಂಬಳ ಮತ್ತು ಸ್ಪೆಷಲ್ ಬೋನಸ್ ಅಂತ ಆಗಾಗ ಕೊಡುವುದರಿಂದ ನಿಷ್ಠೆಯ ನಾಯಿಗಳಂತೆ ಸೇವೆ ಮಾಡಿಕೊಂಡಿದ್ದಾರೆ.

ಪ್ರೋಗ್ರಾಂ ಫಿಕ್ಸ್ ಆಗಿದೆ! ನಾಳೆ ಸಂಜೆ ಮದುವೆ. ರಾತ್ರಿ ಫಸ್ಟ್‌ನೈಟ್. ಆಮೇಲೆ ಹನಿಮೂನ್.

●●●

ಬೆಳಗಿನ ಒಂಭತ್ತು ಗಂಟೆ ಹೊತ್ತಿಗೆ ಅವಳು ಕಾಲೇಜಿಗೆ ಹೋಗಲು ಮನೆಯಿಂದ ಹೊರಗೆ ಬಂದಳು. ದೂರದಿಂದ ಅವಳನ್ನು ಫಾಲೋ ಮಾಡುತ್ತಿದ್ದ ವ್ಯಕ್ತಿ, ಸರ್ಕಲ್ ಹತ್ತಿರ ಬಂದ ಮೇಲೆ ಎಲ್ಲಾ ಕಡೆ ಒಂದು ಸಲ ನೋಡಿದ ನಂತರ ಬೇಗ ಬೇಗ ಹೆಜ್ಜೆ ಹಾಕುತ್ತಾ ಅವಳ ಹತ್ತಿರ ಬಂದು ತುಂಬಾ ಮೆಲುಧ್ವನಿಯಲ್ಲಿ ''ಮೇಡಂ... ನಾನು ಶ್ರೀಗಂಧರಾಜ್ ಅವ ಕಡೆಯವನು'' ಎಂದನು.

ಅವಳು ಹಿಂತಿರುಗಿದಳು.

ಮುಖದ ತುಂಬಾ ಗಡ್ಡ ಬೆಳೆಸಿಕೊಂಡಿರುವ ದಡೂತಿ ವ್ಯಕ್ತಿ ತುಂಬಾ ಹತ್ತಿರದಲ್ಲಿ ನಿಂತಿದ್ದಾನೆ. ಈಗಾಗಲೇ ನಾಲ್ಕು ಸಲ ಅವನನ್ನು ನೋಡಿದ್ದರಿಂದ ಗಾಬರಿ ಆಗಲಿಲ್ಲ.

''ಮೇಡಂ... ಸಂಜೆ ಐದು ಗಂಟೆಗೆ ನೀವು ಶಿವಾನಂದ ಸರ್ಕಲ್ ಹತ್ತಿರ ಬರಬೇಕಂತೆ. ನಮ್ಮ ಕಾರು ಅಲ್ಲಿಗೆ ಬರುತ್ತೆ. ನಿಮ್ಮನ್ನು ಸಾಹೇಬರು ಇರುವ ಜಾಗಕ್ಕೆ ಕರೆದುಕೊಂಡು ಹೋಗುತ್ತೇನೆ.''

''ಅಂದರೆ... ಅಂದರೆ...''

''ಇವತ್ತು ಸಂಜೆ ಮದುವೆ ಅಂತೆ. ನೀವು ಈ ವಿಚಾರನ ಮನೇಲಿ ಹೇಳದೆ ಬರಬೇಕು.''

''ಆದರೆವಿ ನನ್ನ ಲಗೇಜ್...''

''ಅದರ ಅಗತ್ಯ ಏನಿಲ್ಲ. ಸಾಹೇಬರು ಎಲ್ಲಾ ರೆಡಿ ಮಾಡಿಸಿದ್ದಾರೆ.''

ಅವಳಿಗೆ ಚಡಪಡಿಕೆ ಉಂಟಾಗಿದೆ.

ಈ ಅನೂಹ್ಯತೆ ಯಾಕೆ?

ಅವಳು ಗಾಢವಾಗಿ ಚಿಂತಿಸುತ್ತಿದ್ದಾಳೆ.

''ಹಲೋ ಮೇಡಂ... ಕಾಲೇಜ್ ಗುಡ್‌ಬೈ ಹೇಳಿ ರೆಡಿಯಾಗಿ ಬನ್ನಿ. ನಿಮಗೆ ಮೇಕಪ್ ಸೆಟ್, ಡ್ರೆಸ್‌ಗಳು ಎಲ್ಲಾ ಅಲ್ಲೇ ಇದೆ. ನೀವು ಆರಾಮವಾಗಿ ಬನ್ನಿ.''

ಅವಳು ತಲೆಯಾಡಿಸಿದಳು.

ಆ ದಡೂತಿ ಗಂಭೀರವಾಗಿ ''ನೆಪಿರಲಿ ಮೇಡಂ. ಈ ಸಂಗತಿನ ಯಾರೊಬ್ಬರಿಗೂ ಹೇಳಬಾರದು. ಮದುವೆಯಾದ ಮೇಲೆ ಆ ವೀಡಿಯೋ ದೃಶ್ಯಗಳನ್ನು ವಾಟ್ಸಾಪ್, ಸ್ಟೇಟಸ್ ಮತ್ತು ಫೇಸ್‌ಬುಕ್‌ಗಳಲ್ಲಿ ಹಾಕುತ್ತಾನೆ. ಅಲ್ಲಿಯತನಕ ಇದು ಗೌಪ್ಯವಾಗಿರಬೇಕು.''

ಅವಳು ತಲೆಯಾಡಿಸಿದಳು.

ಅಂತರ್ಯದಲ್ಲಿ ಗಾಬರಿ ಕಾಡುತ್ತಿದೆ.

ಅವಳು ಆ ಕ್ಷಣಗಳಲ್ಲಿ ತೀರ್ಮಾನ ಮಾಡಿದಳು. ಶ್ರೀಗಂಧರಾಜ್ ಹತ್ತು ಲಕ್ಷ ಕೊಟ್ಟು ಭೋಗ್ಯಕ್ಕೆ ಮನೆ ಮಾಡಿಕೊಟ್ಟಿದ್ದಾನೆ. ಲಕ್ಷಗಳ ಲೆಕ್ಕದಲ್ಲಿ ಹಣ ಕೊಟ್ಟಿದ್ದಾನೆ.

ಅವನು ಪ್ರಾಯದ ಯುವಕ. ಬಾಹ್ಯರೂಪದಲ್ಲಿ ವಿಶೇಷ ಆಕರ್ಷಣೆ ಇದೆ. ಪ್ರಭಾವಶಾಲಿ ದೊಡ್ಡ ಕುಟುಂಬದ ಯುವಕ ಆಗಿರೋದ್ರಿಂದ ತಂದೆಗೆ ಹೆದರಿ ಗೌಪ್ಯವಾಗಿ ವ್ಯವಹಾರ ಮಾಡುತ್ತಿದ್ದಾನೆ ಎಂದು ಹೇಳಬಹುದು.

ಅವಳು ಕಾಲೇಜಿಗೆ ಬಂದಿದ್ದಾಳೆ. ಹೇಗೆ... ಹೇಗೆ ಸಾಧ್ಯ? ಅವಳ ಎರಡು ಪೀರಿಯಡ್ ಮುಗಿದ ಮೇಲೆ ಮನೆಗೆ ಬಂದಳು. ಅಪ್ಪ-ಅಮ್ಮ ಮತ್ತು ಒಡಹುಟ್ಟಿದವರಿಗೆ ಹೇಳದೆ ಗೌಪ್ಯವಾಗಿ ಮದುವೆ ಆಗುವ ಸನ್ನಿವೇಶ ಬಂದಿದೆಯಲ್ಲ ಎಂದು ಅವಳಿಗೆ ದುಃಖ ಆಗುತ್ತಿದೆ. ಅವಳಿಗೆ ಅಳು ಬರುತ್ತಿದೆ. ಅತ್ತರೆ ಮನೆಯವರಿಗೆ ಅನುಮಾನ ಬಂದು ಕಾರಣವನ್ನು ಕೇಳುತ್ತಾರೆ.

ಅವಳು ಕಂಟ್ರೋಲ್ ಮಾಡಿಕೊಂಡಳು.

ಸಂಜೆ ಐದು ಗಂಟೆ. ಫ್ರೆಂಡ್ ಮನೆಗೆ ಹೋಗಿ ಬರ್ತೀನಿ ಎಂದು ಹೇಳಿ ಅವಳು ಅಲ್ಲಿಂದ ಹೊರಟಳು.

●●●

ನಗರದ ಪೊಲೀಸ್ ಸ್ಟೇಷನ್. ಬೆಳಗಿನ ಹತ್ತೂವರೆ. ಪೊಲೀಸ್ ಅಧಿಕಾರಿ ಶ್ರೀಗಂಗ ಫೋನ್ ಮಾಡಿ ಮಾತಾಡುತ್ತಾ ಟೀ ಕುಡಿಯುತ್ತಿರುವಾಗ ಗಂಡ-ಹೆಂಡತಿ ಮತ್ತು ಅವರ ಸಂಬಂಧಿಕರು ಪೊಲೀಸ್ ಸ್ಟೇಷನ್‌ಗೆ ಬಂದರು. ಫೋನಿನ ಸಂಭಾಷಣೆ ಮುಗಿದ ನಂತರ ಮಾತಾಡಿದನು.

''ಹೇಳಿ ನಿನ್ನಿಂದ ಏನಾಗಬೇಕು?''

ತಂದೆ ದುಃಖದಿಂದ ''ಸಾರ್... ನನ್ನ ಹೆಸರು ರಾಮಯ್ಯ. ತರಗುಪೇಟೆಯಲ್ಲಿ ವಾಸ ಮಾಡುತ್ತಿದ್ದೇನೆ. ಎರಡು ದಿನಗಳಿಂದ ನನ್ನ ಮಗಳು ಮನೆಗೆ ಬಂದಿಲ್ಲ'' ಎಂದು ಹೇಳಿ ಅವಳ ಫೋಟೋ ಮತ್ತು ಮೊಬೈಲ್ ನಂಬರ್, ತಮ್ಮ ಮನೆಯ ವಿಳಾಸ ಮತ್ತು ಉಳಿದ ವಿವರಗಳನ್ನು ಹೇಳಿದಾಗ ಪಿ.ಸಿ. ದಾಖಲಿಸಿಕೊಂಡನು.

''ಮನೆಯಿಂದ ಹೋಗಿದ್ದು ಯಾವಾಗ?''

''ಗುರುವಾರ ಸಂಜೆ ಐದು ಗಂಟೆಗೆ.''

''ಹೂಂ... ಅವಳು ಮನೆಯಿಂದ ಹೋಗುವಾಗ ಹೇಗಿದ್ದಳು?''

ತಾಯಿ ''ಒಂದು ರೀತಿ ಸಪ್ಪಗಿದ್ದಳು. ಅವಳನ್ನ ಯಾವುದೋ ಗೊಂದಲ ಕಾಡುತ್ತಿತ್ತು. ಆದರೆ ತುಂಬಾ ಕಷ್ಟದಿಂದ ಕಂಟ್ರೋಲ್ ಮಾಡಿಕೊಂಡಿದ್ದಳು. ಅವಳು ಯಾವುದೋ ತೊಳಲಾಟಕ್ಕೆ ಸಿಕ್ಕಿಕೊಂಡಿದ್ದಳು ಸಾರ್'' ಎಂದರು.

''ಓಕೆ... ಓಕೆ. ಆಕೆ ಯಾರನ್ನಾದರೂ ಲವ್ ಮಾಡಿದ್ಲಾ?''

''ನಮಗೆ ತಿಳಿದಂತೆ ಇಲ್ಲ.''

''ನಿಮಗೆ ತಿಳಿಯದಂತೆ ಯಾಕೆ ಮಾಡಿರಬಾರದು. ನಿಮಗೆ ತಿಳಿದರೆ ವಿರೋಧಿಸುತ್ತೀರ ಎಂಬ ಕಾರಣದಿಂದ ಗೊಪ್ಯವಾಗಿ ಎಲ್ಲ ವ್ಯವಹಾರ ಮಾಡಿ ಮನೆ ಬಿಟ್ಟು ಹೋಗಿದ್ದಾಳೆ. ಅವಳ ರೂಮನ್ನು ನೀವೊಂದು ಸಲ ಚೆಕ್ ಮಾಡಿದ್ದೀರ?''

''ಇಲ್ಲ ಸಾರ್. ಯಾಕೆ ಅಂದರೆ ನಮಗೆ ಅಂತಹ ಅನುಮಾನವೇ ಬರಲಿಲ್ಲ.''

''ಓಕೆ. ನೀವು ಕಂಪ್ಲೆಂಟ್ ಬರೆದು ಕೊಡಿ. ನಾನು ಬಂದು ನಿಮ್ಮ ಮಗಳ ರೂಮನ್ನು ಚೆಕ್ ಮಾಡ್ತೀನಿ. ಅವಳ ಆತ್ಮೀಯ ಗೆಳತಿಯರನ್ನು ಕರೆಸಿ ವಿಚಾರಣೆ ಮಾಡ್ತೀನಿ.

●●●

ಬೆಡ್‌ರೂಮನ್ನು ಅರ್ಧ ಗಂಟೆ ತಡಕಾಡಿದರು. ಆದರೆ ಅವಳ ಲವ್ವರ್ ಬಗ್ಗೆ ಯಾವ ಸುಳಿವು ಸಹ ಸಿಗಲಿಲ್ಲ.

ಆದರೆ ತಂದೆ ''ಸಾರ್... ಇತ್ತೀಚೆಗೆ ಅವಳು ನಮಗೆ ತುಂಬಾ ಹಣದ ಸಹಾಯ ಮಾಡಿದ್ಲು'' ಎಂದು ಎಲ್ಲಾ ವಿವರವಾಗಿ ಹೇಳಿದಾಗ ಪೊಲೀಸ್ ಅಧಿಕಾರಿ ಗಡುಸಾಗಿ ''ಆ ರೀತಿ ಸಹಾಯ ಮಾಡಲು ನಿಮ್ಮ ಮಗಳ ಹತ್ತಿರ ಹಣ ಇರಲಿಲ್ಲ. ಅಂದ ಮೇಲೆ ಬೇರೆ ಯಾರೋ ಅವಳ

☞14

13 ☜

ಲವ್‌ಗೆ ಬೆಲೆ ಕೊಟ್ಟು ಸಹಾಯ ಮಾಡಿದ್ದಾರೆ. ಆ ವ್ಯಕ್ತಿ ಯಾರು ಂತ ಕೇಳಿ ತಿಳಿದುಕೊಂಡಿದ್ದೀರ?''

ತಾಯಿ ಬೇಸರದಿಂದ ''ತುಂಬಾ ಒತ್ತಾಯ ಮಾಡಿದೆವು. ಆದರೆ ಬಾಯಿ ಬಿಡಲಿಲ್ಲ. ಕೊನೆಗೆ 'ನನ್ನನ್ನು ವಿವಾಹ ಆಗಲಿರುವ ಯುವಕ ನಮ್ಮ ಕುಟುಂಬದ ಬಡತನ ಕಂಡು ಧಾರಾಳವಾಗಿ ಸಹಾಯ ಮಾಡಿದ್ದಾನೆ' ಅಂತ ಹೇಳಿದ್ಲು.''

''ಅಂದರೆ ನಿಮ್ಮ ಮಗಳನ್ನು ಶ್ರೀಮಂತ ಕುಟುಂಬದ ವ್ಯಕ್ತಿ ಲವ್ ಮಾಡಿದ್ದಾನೆ ಅಂತ ಗೊತ್ತಾಗುತ್ತದೆ. ಓಕೆ. ಯಾವ ರೀತಿಯಲ್ಲಿ ಹಣದ ಸಹಾಯ ಮಾಡಿದ್ದ?''

''ಯಾವ ರೀತಿಯಲ್ಲಿ ಅಂದ್ರೇನು ಸಾರ್?''

''ಬ್ಯಾಂಕ್ ಮೂಲಕ ವ್ಯವಹಾರ ಮಾಡಿದ್ರಾ ಅಥವಾ ನಗದು ಕೊಟ್ಟಿದ್ರಾ?''

''ಅವನು ಯಾರು ಅಂತ ಗೊತ್ತಿಲ್ಲ. ನಮ್ಮ ಮಗಳು ತಂದು ಕೊಡುತ್ತಿದ್ಲು. ಹಾಗಾಗಿ ನಮಗೇನೂ ಗೊತ್ತಾಗುತ್ತಿರಲಿಲ್ಲ.''

''ನಿಮ್ಮ ಮಗಳ ಪಾಸ್‌ಬುಕ್ ಕೊಡಿ'' ಎಂದು ಕೇಳಿದಾಗ ತಂದೆ ಅದನ್ನು ತಂದುಕೊಟ್ಟರು. ಅವಳ ಖಾತೆಯಲ್ಲಿ ತುಂಬಾ ಕಡಿಮೆ ಹಣ ಇತ್ತು. ತಿಂಗಳಿಗೆ ಎರಡು ಅಥವಾ ಮೂರು ಸಾವಿರದ ವಿನಹ ಜಾಸ್ತಿ ವ್ಯವಹಾರ ಆಗಿರಲಿಲ್ಲ. ಬ್ಯಾಂಕ್ ವ್ಯವಹಾರ ಆಗಿದ್ದರೆ ಅವನ್ಯಾರು ಅಂತ ತಿಳಿಯಲು ಸುಳಿವು ಸಿಗುತ್ತಿತ್ತು. ಅದೂ ಸಹ ಇಲ್ಲದಂತಾಗಿದೆ.

ಆ ಮನೆಯಿಂದ ಹೊರಟ ಮೇಲೆ ಚಂದ್ರಿಕಾಳ ಆತ್ಮೀಯ ಗೆಳತಿಯರನ್ನೆಲ್ಲಾ ವಾಚಿರಿಸಿಕೊಂಡರು. ಆದರೆ ಅವರ್‍ಯಾರಿಗೂ ಅವಳ ಲವ್ ಬಗ್ಗೆ ಗೊತ್ತಿರಲಿಲ್ಲ.

ಆದರೆ ಒಬ್ಬಳು ಮಾತ್ರ ತಾನು ಕಂಡಿದ್ದನ್ನು ಹೇಳಿದ್ದಳು.

ಚಂದ್ರಿಕ ಸೌಮ್ಯ ಸ್ವಭಾವದ ಯುವತಿ. ಕಾಲೇಜಿನ ಯುವಕರ ಜೊತೆ ಹೆಚ್ಚು ಸೇರುತ್ತಿರಲಿಲ್ಲ. ಅವಳೇನು ರತಿ ವರ್ಚಸ್ಸಿನ ರೂಪವತಿ ಅಲ್ಲ. ಹಾಗಾಗಿ ಯುವಕರೂ ಸಹ ಅವಳ ಬಗ್ಗೆ ಅಷ್ಟೊಂದು ತೀವ್ರ ರೀತಿಯಲ್ಲಿ ಆಸಕ್ತಿ ತೋರಿಸುತ್ತಿರಲಿಲ್ಲ ಎಂದು ಹೇಳಬಹುದು.

ಆದರೆ... ಆದರೆ ನಗರದ ಬೇರೆ ಬೇರೆ ಕಡೆಗಳಲ್ಲಿ ಕಾರಲ್ಲಿ ಬರುತ್ತಿದ್ದ ಶ್ರೀಮಂತ ಯುವಕನ ಜೊತೆ ಮಾತಾಡಿದ್ದನ್ನು ಮತ್ತು ಅವನ ಜೊತೆ ಕಾರಲ್ಲಿ ತಿರುಗುತ್ತಿದ್ದದನ್ನು ಒಬ್ಬಳು ಯುವತಿ ನೋಡಿದ್ದಳು.

ಆ ಯುವಕರು ಯಾರು? ಹೀರೋ ಅಪಿಯರೆನ್ಸ್ ಇದ್ದ ಆಕರ್ಷಕ ರೂಪಿನವನು.

ಆ ಕ್ಷಣ ಅವಳಿಗೆ ಏನೋ ನೆನಪಿಗೆ ಬಂದು ತನ್ನ ಮೊಬೈಲ್ ತೆಗೆದಳು. ಫೋಟೋ ಗ್ಯಾಲರಿ ಓಪನ್ ಮಾಡಿ, ಆಕಸ್ಮಿಕವಾಗಿ ತೆಗೆದಿದ್ದ ಆ ಫೋಟೋಗಳನ್ನು ತೋರಿಸಿದಳು.

ಗುಲಾಬಿ ಬಣ್ಣದ ಸ್ಯಾಂಟ್ರೋ ಕಾರು.

ನಂಬರ್ ಪ್ಲೇಟ್ ಆಗುತ್ತಿದೆ.

ಅವರಿಬ್ಬರು ಕಾರಲ್ಲಿ ಕುಳಿತಿದ್ದಾರೆ. ರೆಡ್‌ಲೈಟ್ ಕಾರಣದಿಂದ ಟ್ರಾಫಿಕ್ ಜಾಮ್ ಆಗಿತ್ತು. ಈ ಯುವತಿ ಟೂ ವೀಲರ್‌ನಲ್ಲಿ ಹೋಗುತ್ತಿದ್ದಳು. ಆಕಸ್ಮಿಕವಾಗಿ ಆ ದೃಶ್ಯವನು ನನೋಡಿ ಮೊಬೈಲ್‌ನಲ್ಲಿ ಕ್ಲಿಕ್ ಮಾಡಿದಳು. ಪೊಲೀಸರಿಗೆ ಈ ಫೋಟೋಗಳನ್ನು ಫಾರ್‌ವರ್ಡ್ ಮಾಡಿದಳು. ಆ ಕ್ಷಣಗಳಲ್ಲಿ ಪೊಲೀಸ್ ಅಧಿಕಾರಿ ಆರ್‌ಟಿಓಗೆ ಫೋನ್ ಮಾಡಿ ನಂಬರ್ ಕಾರ್‌ನ ಡೀಟೈಲ್ಸ್ ತಿಳಿಸಲು ಹೇಳಿದರು.

ಶ್ರೀಗಂಧರಾಜ್ ಎಂಬ ಹೆಸರಿನಲ್ಲಿ ಕಾರು ರಿಜಿಸ್ಟ್ರೇಷನ್ ಆಗಿದೆ ಮತ್ತು ವಿಳಾಸ, ಫೋನ್ ನಂಬರ್ ಎಲ್ಲಾ ಸಿಕ್ಕಿದೆ.

ಪೊಲೀಸರು ಕಾರ್ಯಾಚರಣೆ ಪ್ರಾರಂಭ ಮಾಡಿದರು.

●●●

ಪೊಲೀಸರಿಗೆ ಮಾಹಿತಿ ಬಂದಿತು. ಆ ಮಾಹಿತಿ ಏನು?

ಚಂದ್ರಿಕ ಮನೆಗೆ ಬಂದಿದ್ದಾಳೆ!

ಪೊಲೀಸರು ಶ್ರೀಗಂಧರಾಜ್‌ನನ್ನು ಮೀಟ್ ಮಾಡುವ ಪ್ರೋಗ್ರಾಂ ಅನ್ನು ಈಗ ಮುಂದೂಡಿದ್ದಾರೆ ಮತ್ತು ಮುಖ್ಯ ಅಧಿಕಾರಿಗಳು ಈಗ ಚಂದ್ರಿಕಾಳ ಮನೆಗೆ ಹೋಗಿದ್ದಾರೆ.

●●●

ಪೊಲೀಸರು ಬಂದಿದ್ದಾರೆ ಎಂದು ತಿಳಿದ ಕೂಡಲೇ ಅವರೆಲ್ಲಾ ಗಾಬರಿಯಾದರು. ಆದರೆ ಚಂದ್ರಿಕ ಧೈರ್ಯ ತಂದುಕೊಂಡು ರೂಮಿನಿಂದ ಹೊರಗೆ ಬಂದಳು.

ಪೊಲೀಸರು ಪ್ರಶ್ನೆ ಕೇಳುತ್ತಿದ್ದಾರೆ.

ಅವಳು ಧೈರ್ಯವಾಗಿ ಉತ್ತರಿಸುತ್ತಿದ್ದಾಳೆ.

ನಾನು ಒಬ್ಬ ಯುವಕನನ್ನು ಲವ್ ಮಾಡಿದ್ದೆ. ಅವನ ಜೊತೆ ಹೋಗಿದ್ದೆ. ನಾವಿಬ್ಬರು ಮದುವೆ ಮಾಡಿಕೊಂಡೆವು. ನಾಲ್ಕು ದಿವಸ ನಾನು ಸಂತೋಷದಿಂದ ಇದ್ದೆವು. ಆ ನಂತರ ಅವನು ನನಗೆ ಮೋಸ ಮಾಡಿ ಹೊರಟು ಹೋದ. ಹಾಗಾಗಿ ನಾನು ಮನೆಗೆ ಬಂದುಬಿಟ್ಟೆ. ಅಂತಹ ಪ್ರೇಮ ವಂಚಕನನ್ನು ನಂಬಿ ನಾನು ನನ್ನ ಬದುಕನ್ನು ಹಾಳು ಮಾಡಿಕೊಂಡೆ.''

''ಅವನ್ಯಾರು ಅಂತ ಹೇಳಿ . ಅವನ ಫೋನ್ ನಂಬರ್ ವಿಳಾಸ ಕೊಡಿ ಅವನನ್ನು ಪತ್ತೆ ಮಾಡಿ ಕರೆತರುತ್ತೇವೆ.''

''ಅದರ ಅಗತ್ಯ ಇಲ್ಲ. ಇದು ನನ್ನ ಸ್ವಂತ ವಿಚಾರ ನಿಮ್ಮ ಸಹಾಯದ ಅಗತ್ಯ ಇಲ್ಲ. ಆ ವಂಚಕನ ಜೊತೆ ಪುನಹ ಜೀವನ ಮಾಡಲಾರೆ. ನಮ್ಮ ಮದುವೆಗೆ ಯಾವ ಆಧಾರ, ದಾಖಲೆ ಇಲ್ಲ. ನ್ಮದು ಒಂದು ರೀತಿಯಲ್ಲಿ ಗಾಂಧರ್ವ ರೀತಿಯ ವಿವಾಹ. ಇದನ್ನು ದಯವಿಟ್ಟು ಪಬ್ಲಿಕ್ ಮಾಡಿ ನನ್ನ ಮುಂದಿನ ಭವಿಷ್ಯವನ್ನು ಹಾಳು ಮಾಡಬೇಡಿ'' ಎಂದು ಗಂಭೀರವಾಗಿ ಹೇಳಿದಳು.

ಪೊಲೀಸ್ ಅಧಿಕಾರಿ ''ಓಕೆ ಮೇಡಂ ನಾವು ಈ ವಿಚಾರವಾಗಿ ಬಲವಂತ ಮಾಡೋಲ್ಲ. ಆದರೆ ನೀವು ನಗರದ ಶ್ರೀಮಂತ ಉದ್ಯಮಿಯ ಮಗ ಶ್ರೀಗಂಧರಾಜ್ ಎಂಬ ಯುವಕನ ಜೊತೆ ಕಾರಲ್ಲಿ ಓಡಾಡಿದ್ದನ್ನು ನಿಮ್ಮ ಗೆಳತಿ ಫೋಟೋ ತೆಗೆದು ನಮಗೆ ಫಾರ್‌ವರ್ಡ್ ಮಾಡಿದ್ದಾಳೆ'' ಎಂದು ಹೇಳಿ ಆ ಫೋಟೋಗಳನ್ನು ತೋರಿಸಿದರು.

ಅವಳು ಬೆಚ್ಚಿಬಿದ್ದಳು.

ಮುಖದ ರೀತಿ ಬದಲಾಯಿತು.

ಆದರೂ ಕೂಡಲೇ ಸಾವರಿಸಿಕೊಂಡು ''ಹೌದು... ನನಗೆ ಮತ್ತು ನಾನು ನಂಬಿ ಮೋಸ ಹೋಗಿದ್ದ ಪ್ರಿಯತಮನಿಗೆ ಕೆಲಸ ಕೊಡಿಸಿ ಅಂತ ಕೇಳಲು ಹೋಗಿದ್ದೆ.''

''ಅವರ ಜೊತೆ ಕೆಲವು ಸಲ ಕಾರಲ್ಲಿ ತಿರುಗಾಡಿದ್ದೀರ ಎಂಬ ಮಾಹಿತಿ ಬಂದಿದೆ.''

''ಹೌದು... ನಿಜ... ತಿರುಗಾಡಿದ್ದೇನೆ. ಅದೇ ಅಪರಾಧನ? ಕಾರ್ಯವಾಸಿ ಕತ್ತೆ ಕಾಲು ಕಟ್ಟು ಅಂತ ನೀವು ಕೇಳಿಲ್ವ. ನಮ್ಮಿಬ್ಬರಿಗೆ ಕೆಲಸ ಸಿಗಲಿ ಅಂತ ಅವನ ಜೊತೆ ಆಗಾಗ ಹೋಗುತ್ತಿದ್ದೆ. ಸಾರ್... ನನಗೆ ವಿಪರೀತ ತಲೆನೋಯುತ್ತಿದೆ. ನೀವು ನಿಮ್ಮ ಪ್ರಶ್ನೆಗಳು ನಾಳೆ ಕೇಳಿ. ಬಹುಶಃ, ಕೇಳುವಂತಹ ತಪ್ಪು ನನ್ನಿಂದ ನಡೆದಿಲ್ಲ. ತಾವು ಇನ್ನು ಹೊರಡಬಹುದು'' ಎಂದು ಹೇಳಿ ಎದ್ದು ನಿಂತು ಕೈ ಮುಗಿದು ತನ್ನ ರೂಮಿಗೆ ಹೊರಟಳು.

●●●

ಅವಳು ನಿಜ ಹೇಳಿರಲಿಲ್ಲ.

ಹಿಂದೆ ನಡೆದದ್ದೇನು?

ಬದುಕಿರುವತನಕ ಎಂದೂ ಮರೆಯಲಾಗದಂತಹ ಅಸಹ್ಯಕರ ಘಟನೆಗಳು!

ಅವಳು ರೂಮಲ್ಲಿ ಮಲಗಿದ್ದಾಳೆ.

ಕಂಬನಿ ಜಾರುತ್ತಿದೆ.

ಕಂಬನಿ ಕಣ್ಣುಗ್ಗಳಲ್ಲಿ ಆಕ್ರೋಶ ಇದೆ. ತಂದೆ-ತಾಯಿ ಮತ್ತು ತುಂಬಾ ಹತ್ತಿರದ ಇಬ್ಬರು ಸಂಬಂಧಿಗಳಿದ್ದಾರೆ. ಅವರು ಗಾಬರಿ, ದುಃಖ, ಆತಂಕದಿಂದ ಸಂತೈಸುತ್ತಿದ್ದಾರೆ.

ಅವಳು ಅಳುತ್ತಲೇ ಆಕ್ರೋಶದಿಂದ ತನ್ನ ಕೆಟ್ಟ ಕಹಿ ಅನುಭವವನ್ನು ಹೇಳಿಕೊಳ್ಳುತ್ತಿದ್ದಾಳೆ.

●●●

ಅವಳು ಮಿನಿ ಪ್ಯಾಲೇಸ್ ಬಂಗಲೆ ರೀತಿ ಇದ್ದ ವೈಭವಯುತವಾದ ಬಂಗಲೆಗೆ ಬಂದಳು. ಅವಳನ್ನು ಸೆಕ್ಯುರಿಟಿಯವನು ಕೂರಿಸಿ ಕುಡಿಯಲು ವಿಶೇಷವಾದ ಬಾದಾಮಿ ಹಾಲು ಕೊಟ್ಟನು.

ಫೋನ್ ಕಾಲ್ ಬಂದಿತು.

''ನನ್ನ ಪತ್ನಿ ಆಗಲಿರುವ ಚಂದ್ರಿಕ ಒಳಗೆ ಬಾ'' ಎಂದು ಕೂಡಲೇ, ಅವಳನ್ನು ಎರಡನೇ ಮಹಡಿಯಲ್ಲಿರುವ ರೂಮಿಗೆ ಕರೆತರಲಾಯಿತು.

ಅಲ್ಲಿ ಕಂಡಿದ್ದೇನು?

ಮೀನುಗಳು, ಮಾಂಸದ ತುಂಡುಗಳಿಂದ ಮಾಡಿರುವ ಹಾರಗಳ ಅಲಂಕಾರ.

ಕುರಿ ತಲೆ ಕತ್ತರಿಸಲಾಗಿದೆ.

ಒಂದು ಬಕೇಟ್ ತುಂಬಾ ಸಗಣಿ ನೀರು. ಬೇರೆ ಬೇರೆ ಬಕೇಟ್‌ಗಳಲ್ಲಿ ಬಣ್ಣ, ಬಣ್ಣದ ನೀರುಗಳನ್ನು ತುಂಬಿಸಲಾಗಿದೆ. ಎಲ್ಲರೂ ತುಂಬಾ ವಿಚಿತ್ರವಾಗಿದೆ ಮತ್ತು ಭಯ ಉಂಟಾಗುವ ರೀತಿ ಇದೆ.

ಶ್ರೀಗಂಧರಾಜ್.

ಮನ್ಮಥ ರೂಪಿ ಯುವಕ ತುಂಬಾ ವಿಕೃತ ರೀತಿಯಲ್ಲ ವೇಷ ಧರಿಸಿಕೊಂಡು ಈಗ ಹುಚ್ಚನ ರೀತಿ ಕುಣಿಯುತ್ತಿದ್ದಾನೆ. ಅವಳ ಕೈ ಹಿಡಿದು ಎಳೆದು ಅವಳ ಸೀರೆ, ರವಿಕೆ ಎಲ್ಲಾ ಕಿತ್ತೆಸೆದು ಈಗ ಪೂರ್ಣ ಬೆತ್ತಲೆಗೊಳಿಸಿ ಮಾಂಗಲ್ಯ ಕಟ್ಟಿದನು.

ಎಂತಹ ಮಾಂಗಲ್ಯ ?

ಮೂಳೆಗಳ ತುಂಡುಗಳನ್ನು ಸೇರಿಸಿ ಕಟ್ಟಿ ಮಾಡಿರುವ ಮತ್ತು ತುದಿಯಲ್ಲಿ ಸಣ್ಣ ಮಗುವಿನ ತಲೆಬುರುಡೆ ಇರುವ ರಕ್ತ ಲೇಪನದ ಮಾಂಗಲ್ಯ.

ಅವಳ ಸುತ್ತ ಕುಣಿಯುತ್ತಾ ಮೊದಲು ಮೂತ್ರ ತುಂಬಿರುವ ಗತಿಗೆ ಎತ್ತಿ ಅವಳ ತಲೆ ಮೇಲೆ ಸುರಿದನು. ಆಮೇಲೆ ರಕ್ತ, ನಂತರ ಸಗಣಿ (ಹಸಿ)ಯಿಂದ ಅವಳ ಮೈ, ಮುಖ ಮೇಲೆಲ್ಲಾ ರಪ ರಪನೆ ಬಡಿದನು.

ಅವಳು ಪೂರ್ಣ ಬೆತ್ತಲಾಗಿದ್ದಾಳೆ. ತುಂಬಾ ವಿಲಕ್ಷಣವಾಗಿ ಕಾಣುತ್ತಿದ್ದಾಳೆ. ಇವನೂ ಸಹ ಬೆತ್ತಲಾಗಿ ಅವಳಿಗೆ ಮಾಂಗಲ್ಯ ಕಟ್ಟಿದನು.

ನಂತರ ಏನಾಯಿತು?

ಅವಳ ಶರೀರದ ತುಂಬಾ ಬಣ್ಣ ಬಣ್ಣಗ್ಗಳ ನೀರನ್ನು ಸುರಿದನು. ಅವಳನ್ನು ಎತ್ತಿಕೊಂಡು ಗಿರ್‍ರನೆ ತಿರುಗುತ್ತಾ ಹುಚ್ಚು ಹುಚ್ಚಾಗಿ ಕುಣಿಯಲಾರಂಭಿಸಿದನು.

ಮದುವೆಗೆ ಸಂಬಂಧ ಪಡುವಂತ ಹಾಡನ್ನು ಹಾಕಿಕೊಂಡು ವಿಕೃತ-ವಿಲಕ್ಷಣವಾಗಿ ಡ್ಯಾನ್ಸ್ ಮಾಡಲಾರಂಭಿಸಿದನು.

ಶೃಂಗಾರದಾಟ ಆಡಲಿಲ್ಲ.

ಕಾಮ ಮಿಲನ ಆಗಲಿಲ್ಲ.

ನಾಲ್ಕು ತಿನಗಳ ಕಾಲ ಅವಳಿಗೆ ಚಿತ್ರ-ವಿಚಿತ್ರ ಹಿಂಸೆ ನೀಡುತ್ತಿದ್ದನು. ಇದು ಅವಳಿಗೆ ಪ್ರತ್ಯಕ್ಷ ನರಕ ದರ್ಶನ ಉಂಟಾಯಿತು. ಅವನಿಗೆ ಇದು ಬೇಜಾರಾಗಿದ್ದರಿಂದ ಇವಳ ಕತ್ತಿನಲ್ಲಿದ್ದ ಮಾಂಗಲ್ಯ ಕಿತ್ತು, ಬ್ಲಾಕ್‌ಮೇಲ್ ಬೆದರಿಕೆ ಹಾಕಿ ಬಿಡುಗಡೆ ಮಾಡಿದನು.

ಇದನ್ನು ಅವಳು ಕಂಬನಿ ಮಿಡಿಯುತ್ತಾ ತನ್ನವರಿಗೆ ಹೇಳಿದಳು.

ಇದು ರಹಸ್ಯವಾಗಿರಲಿ ಎಂದು ತನ್ನವರಿಗೆ ಎಚ್ಚರಿಕೆ ನೀಡಿದಳು.

●●●

ಶ್ರೀಗಂಧರಾಜ್ ವಿಕೃತ-ವಿಲಕ್ಷಣ ಚಪಲಗಾರ ಶ್ರೀಮಂತ. ಅವನ ದೃಷ್ಟಿಗೆ ಬಿದ್ದವಳು ಮಾಲತಿ...! ಬಡಕುಟುಂಬದವಳು. ಸ್ಥಳೀಯ ಪತ್ರಿಕೆಯಲ್ಲಿ ಕೆಲಸ ಮಾಡುತ್ತಿದ್ದಳು. ಮಾಲತಿಗೆ ಹಣದ ಆಕರ್ಷಣೆ ತೋರಿಸಿ ಬಲೆಗೆ ಹಾಕಿಕೊಂಡನು.

ಚಂದ್ರಿಕಾಳಿಗೆ ಮಾಡಿದಂತೆ ಇವಳ ಜೊತೆ ಸಹ ಹುಚ್ಚಾಟ ಆಡಿದನು. ಅವಳು ಆತ್ಮೀಯ ಗೆಳತಿ ಚಂದ್ರಿಕ ಎಲ್ಲವನ್ನೂ ಹೇಳಿದ್ದರಿಂದ, ನಾಲ್ಕಾರು ಪತ್ರಿಕೆಯ ವರದಿಗಾರರು ಮತ್ತು ಪೊಲೀಸರನ್ನು ರಹಸ್ಯವಾಗಿ ಜೊತೆಗೆ ಕರೆದುಕೊಂಡು ಹೋಗಿದ್ದಳು.

ರಹಸ್ಯ ಬಹಿರಂಗ ಆಗಿತ್ತು. ಬಲವಾದ ಸಾಕ್ಷಿ, ಆಧಾರಗಳ ಸಮೇತ ಸುದ್ದಿ ಮಾಧ್ಯಮಗಳಲ್ಲಿ ಅಬ್ಬರದ ಪ್ರಚಾರ ಪಡೆದಿದ್ದರಿಂದ ಮತ್ತು ಸ್ವಯಂ ಪೊಲೀಸರು ಸಹ ಪ್ರತ್ಯಕ್ಷವಾಗಿ ಕಂಡು ದಾಖಲಿಸಿಕೊಂಡಿದ್ದರಿಂದ ಶ್ರೀಗಂಧರಾಜ್‌ನನ್ನು ಬಂಧಿಸಲು ಸುಲಭವಾಯಿತು. ☯


## ಓದುಗರ ಗಮನಕ್ಕೆ

### ರಾಜಕೀಯ ಸುದ್ದಿಯೂ ಇರುತ್ತದೆ...

'ಪೊಲೀಸ್ ನ್ಯೂಸ್' ವಾರಪತ್ರಿಕೆಯಲ್ಲಿ ಬರೀ ಅಪರಾಧ ವರದಿಗಳು ಮಾತ್ರ ಬರುತ್ತದೆ ಅಂದುಕೊಳ್ಳಬೇಡಿ. ಬದಲಾದ ಕಾಲಮಾನದಲ್ಲಿ ಇನ್ನು ಮುಂದೆ ರಾಜಕೀಯ, ಭ್ರಷ್ಟಾಚಾರ, ಮುಚ್ಚಿ ಹೋಗಿರುವ 'ಕ್ರೈಂ' ಮುಂತಾದ ರಹಸ್ಯ ವರದಿಗಳನ್ನು ಬ್ಲಾಸ್ಟ್ ಮಾಡಲಿದ್ದೇವೆ. ನಿಮ್ಮ ಊರುಗಳಲ್ಲಿ ಇಂತಹ ಬ್ಲಾಸ್ಟ್ ಮಾಡುವಂತಹ ಸುದ್ದಿಗಳಿದ್ದರೆ ನಮಗೆ ಕಳುಹಿಸಿ ಕೊಡಿ. ನಿಮ್ಮ ಹೆಸರು, ವಿಳಾಸವನ್ನು ರಹಸ್ಯವಾಗಿಡುವ ಜವಾಬ್ದಾರಿ ನಮ್ಮದು. ನೀವು ಕಳುಹಿಸುವ ವರದಿಗೆ ದಾಖಲೆಗಳಿದ್ದರೆ ಒಳ್ಳೆಯದು. ಅಕಸ್ಮಾತ್ ದಾಖಲೆಗಳು ಇಲ್ಲದಿದ್ದಲ್ಲಿ, ನೀವು ಕಳುಹಿಸುವ ವರದಿಯಲ್ಲಿ ದಾಖಲೆಗಳು ಸಿಗುವ ಜಾಗವನ್ನು ನಮೂದಿಸಿದರೆ ಸಾಕು, ದಾಖಲೆ ಎತ್ತುವ ಜವಾಬ್ದಾರಿ ನಮ್ಮದು.

**ನಮ್ಮ ವಿಳಾಸ :**

8884452699 policenewsreporter@gmail.com ☎ 080-23588510

ನಂ. 165, 8ನೇ ಮುಖ್ಯರಸ್ತೆ, ಬಿಇಎಂಎಲ್ ಬಡಾವಣೆ, ಬಸವೇಶ್ವರನಗರ, ಬೆಂಗಳೂರು-560 079

# ಬಾಲಿವುಡ್ ಲೆಜೆಂಡರಿ ನಟ ಮನೋಜ್‌ಕುಮಾರ್ ಇನ್ನಿಲ್ಲ



ಭಾರತೀಯ ಚಿತ್ರರಂಗದ ಜನಪ್ರಿಯ ನಟ ಮನೋಜ್‌ಕುಮಾರ್ ನಿಧನರಾಗಿದ್ದಾರೆ. ಅವರಿಗೆ 87 ವರ್ಷ ವಯಸ್ಸಾಗಿತ್ತು. ದೇಶಭಕ್ತಿಯ ಸಿನಿಮಾಗಳ ಮೂಲಕ ಜನರ ಮನಸ್ಸು ಗೆದ್ದಿದ್ದರು. ಮನೋಜ್ ಕುಮಾರ್ ಅವರಿಗೆ ಹೃದಯ ಸಂಬಂಧಿ ಕಾಯಿಲೆ ಇತ್ತು. ಹೀಗಾಗಿ ಅವರನ್ನು ಮುಂಬೈನ ಕೋಕಿಲಾಬೇನ್ ಧೀರಬಾಯಿ ಅಂಬಾನಿ ಆಸ್ಪತ್ರೆಗೆ ದಾಖಲು ಮಾಡಲಾಗಿತ್ತು.

ಆದರೆ, ಚಿಕಿತ್ಸೆ ಫಲಕಾರಿಯಾಗದೆ ಮನೋಜ್ ಕುಮಾರ್ ಏಪ್ರಿಲ್ 4ರಂದು ಬೆಳಗ್ಗೆ 3.30ಕ್ಕೆ ಇಹಲೋಕ ತ್ಯಜಿಸಿದ್ದಾರೆ. ಹೃದಯ ಸಂಬಂಧಿ ಕಾಯಿಲೆ ಜೊತೆಗೆ ಅವರಿಗೆ ಲಿವರ್ ಸಮಸ್ಯೆ ಕೂಡ ಇತ್ತು. ಲಿವರ್ ಸಿರಿಯೋಸಿಸ್‌ನಿಂದಲೂ ಬಳಲುತ್ತಿದ್ದರು ಎಂದು ಹೇಳಲಾಗಿದೆ. ಬಾಲಿವುಡ್‌ನ ಲೆಜೆಂಡರಿ ನಟನ ನಿಧನಕ್ಕೆ ಪ್ರಧಾನಿ ನರೇಂದ್ರ ಮೋದಿ ಸಂತಾಪ ಸೂಚಿಸಿದ್ದಾರೆ.



ಪ್ರಧಾನಿ ನರೇಂದ್ರ ಮೋದಿ ಅವರು ಮನೋಜ್ ಕುಮಾರ್ ಜೊತೆಗಿನ ಎರಡು ಫೋಟೊಗಳನ್ನು ತನ್ನ ಎಕ್ಸ್‌ಖಾತೆಯಲ್ಲಿ ಶೇರ್ ಮಾಡಿದ್ದು, ದಿಗ್ಗಜನ ಅಗಲಿಕೆ ಬಗ್ಗೆ ಭಾವುಕರಾಗಿದ್ದಾರೆ. ಮನೋಜ್‌ಕುಮಾರ್ ಭಾರತೀಯ ಸಿನಿಮಾದ ಐಕಾನ್. ಅವರಲ್ಲಿದ್ದ ದೇಶಭಕ್ತಿಯಿಂದ ವಿಶೇಷವಾಗಿ ಅವರನ್ನು ನೆನಪಿಸಿಕೊಳ್ಳಲಾಗುತ್ತೆ. ಅದು ಅವರ ಸಿನಿಮಾಗಳಲ್ಲಿಯೂ ಕೂಡ ಪ್ರತಿಬಿಂಬಿಸುತ್ತಿತ್ತು. ಮನೋಜ್‌ಕುಮಾರ್ ಅವರ ವೃತ್ತಿ ಬದುಕು ರಾಷ್ಟ್ರಕ್ಕೆ ಹೆಮ್ಮೆ. ಹಾಗೇ ಅದು ಮುಂದಿನ ಪೀಳಿಗೆಗೆ ಸ್ಫೂರ್ತಿಯಾಗಿ ಮುಂದುವರೆಯುತ್ತೆ. ಇಂತಹ ದು:ಖದ ಸಮಯದಲ್ಲಿ ಅವರ ಕುಟುಂಬ ಮತ್ತು ಅಭಿಮಾನಿಗಳಿಗೆ ನಾನು ಸಂತಾಪವನ್ನು ಸೂಚಿಸುತ್ತೇನೆ. ಓಂ ಶಾಂತಿ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

ಬಾಲಿವುಡ್ ದಿಗ್ಗಜ ಮನೋಜ್‌ಕುಮಾರ್ ದೀರ್ಘ ಕಾಲದಿಂದ ಅನಾರೋಗ್ಯ ಸಮಸ್ಯೆಯಿಂದ ಬಳಲುತ್ತಿದ್ದರು. ಹೃದಯ ಹಾಗೂ ಲಿವರ್ ಸಮಸ್ಯೆ ಕೊನೆಯ ದಿನಗಳಲ್ಲಿ ಉಲ್ಬಣಿಸಿತ್ತು. ಈ ಕಾರಣವನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ, ಚಿಕಿತ್ಸೆ ಫಲಿಸದೆ ಮನೋಜ್‌ಕುಮಾರ್ ನಿಧನರಾಗಿದ್ದಾರೆ.

ಮನೋಜ್‌ಕುಮಾರ್ ಮೂಲಕ ಹೆಸರು ಹರಿಕೃಷ್ಣನ್ ಗೋಸ್ವಾಮಿ. 1937, ಜುಲೈ 24ರಂದು ಅಬೋಟಾಬಾದ್ ಎಂಬ ಚಿಕ್ಕ ಟೌನ್‌ನಲ್ಲಿ ಜನಿಸಿದ್ದರು. ಇಂದು ಈ ಪಟ್ಟಣವನ್ನು ಖೈಬರ್ ಪಖ್ತುಂಖ್ವಾ ಎಂದು ಗುರುತಿಸಲಾಗಿದ್ದು ಇದು ಪಾಕಿಸ್ತಾನದಲ್ಲಿದೆ. ಇನ್ನು ಸಿನಿಮಾಗಾಗಿ ಇವರ ಹೆಸರು ಬದಲಾಯಿಸಲಾಗಿತ್ತು. ಮನೋಜ್‌ಕುಮಾರ್ 1957ರಲ್ಲಿ ಬಾಲಿವುಡ್‌ಗೆ ಎಂಟ್ರಿ ಕೊಟ್ಟಿದ್ದರು. ಸಿನಿಮಾ ಮೇಲಿನ ಅಪಾರ ಆಸಕ್ತಿ ಅವರನ್ನು ಸಿನಿಮಾಗೆ ಬರುವಂತೆ ಮಾಡಿತ್ತು. 1961ರಲ್ಲಿ ತೆರೆಕಂಡಿದ್ದ 'ಕಂಚ್ ಕಿ ಗುಡಿಯಾ' ಸಿನಿಮಾ ಇವರಿಗೆ ಮೇಜರ್ ಹಿಟ್ ಕೊಟ್ಟಿತ್ತು.

1965ರಲ್ಲಿ ತೆರಕಂಡಿದ್ದ 'ಗುಮ್ನಾಮ್' ಮನೋಜ್ ಕುಮಾರ್ ವೃತ್ತಿ ಬದುಕಿನಲ್ಲಿ ಅತೀ ದೊಡ್ಡ ಹಿಟ್ ಕೊಟ್ಟ ಸಿನಿಮಾ ಆಯ್ತು. ಆ ಈ ಸಿನಿಮಾ ಅತೀ ಹೆಚ್ಚು ಗಳಿಕೆ ಕಂಡ ಸಿನಿಮಾಗಳ ಸಾಲಿಗೆ ಸೇರಿತ್ತು. ಇಲ್ಲಿ ಮನೋಜ್ ಕುಮಾರ್ ವೃತ್ತಿ ಬದುಕು ಯಶಸ್ಸಿನ ಹಾದಿಯನ್ನೇ ಹಿಡಿಯುತ್ತಾ ಮುಂದೆ ಸಾಗಿತ್ತು. ಮನೋಜ್‌ಕುಮಾರ್ ತನ್ನ ವೃತ್ತ ಜೀವನದಲ್ಲಿ ಅತೀ ಹೆಚ್ಚು ದೇಶ ಭಕ್ತಿ ಸಿನಿಮಾಗಳಲ್ಲಿ ಕಾಣಿಸಿಕೊಂಡಿದ್ದೇ ಹೆಚ್ಚು.

1965ರಲ್ಲಿ ಸ್ವಾತಂತ್ರ್ಯ ಹೋರಾಟಗಾರ ಭಗತ್ ಸಿಂಗ್ ಕುರಿತ ಸಿನಿಮಾ 'ಶಹೀದ್'ನಲ್ಲಿ ನಟಿಸಿದ್ದರು. ಆ ಬಳಿಕ ಮನೋಜ್‌ಕುಮಾರ್ ಸಾಕಷ್ಟು ದೇಶ ಪ್ರೇಮ ಸಾರುವ ಸಿನಿಮಾಗಳಲ್ಲಿ ನಟಿಸಿದ್ದರು. ಅವುಗಳಲ್ಲಿ 1967ರಲ್ಲಿ ಬಂದ 'ಉಪ್ಕಾರ್', 'ಪೂರಬ್ ಔರ್ ಪಶ್ಚಿಮ್', 'ಕ್ರಾಂತಿ' ಸಿನಿಮಾಗಳಲ್ಲಿ ನಟಿಸಿದ್ದರು. 'ಕ್ರಾಂತಿ' ಸಿನಿಮಾ ಮನೋಜ್‌ಕುಮಾರ್ ವೃತ್ತಿ ಬದುಕಿಗೆ ಹೊಸ ಇಮೇಜ್ ಕೊಟ್ಟಿತ್ತು. ಅವರ ಅಭಿಮಾನಿಗಳು ಇವರನ್ನು ಭರತ್‌ಕುಮಾರ್ ಅಂತಲೇ ಕರೆಯುವುದಕ್ಕೆ ಶುರು ಮಾಡಿದ್ದರು.

ಮನೋಜ್‌ಕುಮಾರ್ ಕೇವಲ ನಟನಾಗಿ ಅಷ್ಟೇ ಗುರುತಿಸಿಕೊಂಡಿರಲಿಲ್ಲ, 1972ರಲ್ಲಿ ತೆರೆಕಂಡ 'ಶೋರ್' ಸಿನಿಮಾವನ್ನು ಕೂಡ ನಿರ್ದೇಶನ ಮಾಡಿದ್ದರು. 1975ರಲ್ಲಿ 'ರೋಟಿ, ಕಪಡಾ ಔರ್ ಮಕಾನ್' ಎಂಬ ಸಿನಿಮಾವನ್ನು ನಿರ್ದೇಶಿಸಿದ್ದರು. ಈ ಸಿನಿಮಾ ಫಿಲ್ಮ್ ಫೇರ್ ಅತ್ಯುತ್ತಮ ನಿರ್ದೇಶಕ ಪ್ರಶಸ್ತಿ ಕೂಡ ಸಿಕ್ಕಿತ್ತು. ಮನೋಜ್‌ಕುಮಾರ್ ಕಲಾ ಸೇವೆಯನ್ನು ಪರಿಗಣಿಸಿ, ಅವರಿಗೆ 1992ರಲ್ಲಿ ಪದ್ಮಶ್ರೀ ಪ್ರಶಸ್ತಿ, ಫಿಲ್ಮ್ ಫೇರವ ಜೀವಮಾನ ಸಾಧನೆ ಪ್ರಶಸ್ತಿ, 2015ರಲ್ಲಿ ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿ ಕೂಡ ಲಭಿಸಿತ್ತು. 2004ರಲ್ಲಿ ಮನೋಜ್‌ಕುಮಾರ್ ಅಧಿಕೃತವಾಗಿ ಭಾರತೀಯ ಜನತಾ ಪಾರ್ಟಿಗೆ ಸೇರಿಕೊಂಡಿದ್ದರು.

# ನೆಟ್ ಫ್ಲಿಕ್ಸ್ ಸಿರೀಸ್ ನೋಡಿ ಬ್ಯಾಂಕಿನ ಲಾಕರನ್ನೇ ದರೋಡೆಗೈದ ಖದೀಮರು!

5 ☞

**15 ಲಕ್ಷ ಸಾಲಕ್ಕೆ ಅರ್ಜಿ, ಸಾಲ ಕೊಡದ ಬ್ಯಾಂಕನ್ನೇ ದರೋಡೆ**

ಪ್ರಮುಖ ಆರೋಪಿ ವಿಜಯಕುಮಾರ್ ನ್ಯಾಮತಿ ಪಟ್ಟಣದಲ್ಲಿ 25-30 ವರ್ಷಗಳಿಂದ ವಿಐಪಿ ಸ್ನ್ಯಾಕ್ಸ್




ಹೆಸರಿನ ಬೇಕರಿ ಮತ್ತು ಸ್ವೀಟ್ಸ್ ಅಂಗಡಿಯನ್ನು ತಂದೆಯೊಂದಿಗೆ ನಡೆಸಿಕೊಂಡು ಬಂದಿದ್ದ. ಮತ್ತಷ್ಟು ವ್ಯಾಪಾರ ಅಭಿವೃದ್ಧಿಗೆ ಯೋಜನೆ ಹಾಕಿ, 15 ಲಕ್ಷ ರೂ. ಸಾಲಕ್ಕಾಗಿ 2023ರ ಮಾರ್ಚ್ ತಿಂಗಳಲ್ಲಿ ನ್ಯಾಮತಿಯ ಎಸ್‌ಬಿಐ ಬ್ಯಾಂಕ್‌ಗೆ ಅರ್ಜಿ ಸಲ್ಲಿಸಿದ್ದ. ಆದರೆ ಆತನ ಸಿಬಿಲ್ ಸ್ಕೋರ್ ಸರಿಯಾಗಿಲ್ಲದ್ದರಿಂದ ಬ್ಯಾಂಕ್ ಸಿಬ್ಬಂದಿ ಸಾಲಕ್ಕೆ ನಿರಾಕರಿಸಿದ್ದರು. ಆನಂತರ ಸಂಬಂಧಿಕರ ಹೆಸರಿನಲ್ಲೂ ಸಾಲ ಪಡೆಯುವುದಕ್ಕಾಗಿ ಮತ್ತೆ ಎಸ್‌ಬಿಐ ಬ್ರಾಂಚ್‌ನಲ್ಲಿ ಅರ್ಜಿ ಸಲ್ಲಿಸಿದ್ದರು. ಆಗಲೂ ಸಾಲದ ಅರ್ಜಿಗಳು ತಿರಸ್ಕೃತಗೊಂಡಿದ್ದವು. ಇದರಿಂದಾಗಿ ವಿಜಯಕುಮಾರ್ ಬ್ಯಾಂಕ್ ಬಗ್ಗೆ ದ್ವೇಷ ಬೆಳೆಸಿಕೊಂಡಿದ್ದ.

**ವೆಬ್ ಸಿರೀಸ್ ನೋಡಿ ಬ್ಯಾಂಕ್ ಲೂಟಿ**

ಆರೋಪಿಗಳು ಬ್ಯಾಂಕ್ ದರೋಡೆ ಮಾಡುವುದಕ್ಕಾಗಿ ಸಾಕಷ್ಟು ತಯಾರಿ ಮಾಡಿಕೊಂಡಿದ್ದರು. ಯೂಟ್ಯೂಬ್ ಹಾಗೂ ವಿವಿಧ ಒಟಿಟಿ ಪ್ಲಾಟ್ ಫಾರ್ಮ್‌ಗಳಲ್ಲಿ ಬ್ಯಾಂಕ್ ದರೋಡೆ ಹಾಗೂ ಬ್ಯಾಂಕ್ ಕಳ್ಳತನಕ್ಕೆ ಸಂಬಂಧಿಸಿದ ಅನೇಕ ವಿಡಿಯೋಗಳನ್ನು ಸುಮಾರು 6 ತಿಂಗಳ ಕಾಲ ನೋಡಿದ್ದು ಅದರಂತೆ ಸಿದ್ಧತೆ ನಡೆಸಿದ್ದರು. ಕೃತ್ಯ ಎಸಗಲು ಆರು ತಿಂಗಳಿಂದ ಹೊಂಚು ಹಾಕಿದ್ದ ಆರೋಪಿಗಳು ದರೋಡೆಗೆ ಬೇಕಾಗುವ ಸಲಕರಣೆಗಳನ್ನು ಶಿವಮೊಗ್ಗ ಹಾಗೂ ನ್ಯಾಮತಿ ಪಟ್ಟಣದಲ್ಲಿ ಖರೀದಿಸಿದ್ದರು. ದರೋಡೆಗೂ ಮೂರು ತಿಂಗಳ ಹಿಂದೆ ಆರೋಪಿಗಳು ನ್ಯಾಮತಿ ತಾಲ್ಲೂಕಿನ ಸುರಹೊನ್ನೆ ಶಾಲೆಯ ಬಳಿ ಕೃತ್ಯಕ್ಕೆ ರೂಪುರೇಷೆಗಳನ್ನು ತಯಾರಿಸಿದ್ದರು. ಇನ್ನುಳಿದ ಮಂಕಿ ಕ್ಯಾಪ್, ಗ್ಲೌಸ್, ಬ್ಲ್ಯಾಕ್ ಶರ್ಟ್ ಮತ್ತು ಪ್ಯಾಂಟ್‌ಗಳನ್ನು ಮಾರ್ಕೆಟ್‌ನಿಂದ ಖರೀದಿಸಿ ಇಟ್ಟುಕೊಂಡಿದ್ದರು.

**ಕದ್ದ ಚಿನ್ನವನ್ನು ಬಾವಿಯಲ್ಲಿ ಮುಚ್ಚಿಟ್ಟಿದ್ದ ಕಳ್ಳರು**

ಆರೋಪಿಗಳು ಕಳವು ಮಾಡಿದ್ದ ಚಿನ್ನದ ಪೈಕಿ ಸ್ವಲ್ಪ ಭಾಗವನ್ನು ವಿಜಯಕುಮಾರ್ ತನ್ನ ಮನೆಯಲ್ಲೇ ಇದ್ದ ಡಸ್ಟರ್ ಕಾರಿನ ಡಿಕ್ಕಿಯಲ್ಲಿ ಬಚ್ಚಿಟ್ಟಿದ್ದ. ಇದಲ್ಲದೆ, ಒಂದಷ್ಟು ಚಿನ್ನವನ್ನು ಸಣ್ಣ ಲಾಕರ್‌ಗೆ ತುಂಬಿಸಿ ತಮಿಳುನಾಡಿನ ಮಧುರೈ ಬಳಿಯ ನಿರ್ಜನ ಪ್ರದೇಶದಲ್ಲಿ ಪಾಳು ಬಾವಿಯಲ್ಲಿ ಹಾಕಿಟ್ಟಿದ್ದ.



ಒಂದಷ್ಟು ಚಿನ್ನವನ್ನು ಬ್ಯಾಂಕ್‌ಗಳಲ್ಲಿ ಮತ್ತು ಚಿನ್ನದ ಅಂಗಡಿಗಳಲ್ಲಿ ವಿಜಯ್ ತನ್ನ ಹಾಗೂ ತನ್ನ ಸಂಬಂಧಿಕರ ಹೆಸರಿನಲ್ಲಿ ಅಡವಿಟ್ಟು ಹಣವನ್ನು ಪಡೆದಿದ್ದ. ಈ ಹಣದಿಂದ ಸ್ವಲ್ಪ ಹಣವನ್ನು ಅಭಿ, ಚಂದ್ರು, ಮಂಜುಗೆ ತಲಾ 1 ಲಕ್ಷದಂತೆ ಕೊಟ್ಟು ಊರಿನಲ್ಲಿ ಒಂದು ದೊಡ್ಡ ಮನೆ ಕಟ್ಟಿಸಿದ್ದು, ಕೆಲವು ನಿವೇಶನಗಳನ್ನು ಖರೀದಿ ಮಾಡಿದ್ದ ಎಂದು ಪೊಲೀಸರು ಹೇಳಿದ್ದಾರೆ.

**ಕೃತ್ಯಕ್ಕೆ ಬಳಸಿದ್ದ ವಸ್ತುಗಳು ಕೆರೆಗೆ ಎಸೆದಿದ್ದ ಕಳ್ಳರು**

ಕೃತ್ಯಕ್ಕೆ ಬಳಸಿದ ಮಂಕಿ ಕ್ಯಾಪ್, ಹ್ಯಾಂಡ್ ಗ್ಲೌಸ್‌ಗಳನ್ನು ನಾಶಪಡಿಸಿದ್ದು, ಇನ್ನುಳಿದ ಹೈಡ್ರಾಲಿಕ್ ಕಟರ್, ಗ್ಯಾಸ್ ಸಿಲಿಂಡರ್ ಇತರ ವಸ್ತುಗಳನ್ನು ಸವಳಂಗ ಕೆರೆಗೆ ಎಸೆದಿರುವುದಾಗಿ ತನಿಖೆಯಲ್ಲಿ ಆರೋಪಿಗಳು ಪೊಲೀಸರಿಗೆ ತಿಳಿಸಿದ್ದಾರೆ. ಅಲ್ಲದೆ, ಎಸ್‌ಬಿಐ ಬ್ಯಾಂಕ್‌ನಿಂದ ತಂದಿದ್ದ ಹಾರ್ಡ್ ಡಿಸ್ಕ್ ಡಿವಿಆರ್ ಅನ್ನು ಕಲ್ಲಿನಿಂದ ಜಜ್ಜಿ ಹಾಳು ಮಾಡಿ ನಂತರ ಕೆರೆಗೆ ಎಸೆದಿದ್ದಾಗಿ ಪೊಲೀಸರಿಗೆ ಹೇಳಿದ್ದಾರೆ.

2024 ಅಕ್ಟೋಬರ್ 28ರಂದು ಕಳ್ಳರು ಯಾವುದೇ ಸುಳಿವು ಬಿಟ್ಟುಕೊಡದೆ ಎಸ್‌ಬಿಐ ಬ್ಯಾಂಕ್ ದರೋಡೆ ಮಾಡಿದ್ದರು. ಕಿಟಕಿ ಮೂಲಕ ಬ್ಯಾಂಕ್ ಒಳನುಗ್ಗಿ ಗ್ಯಾಸ್ ಕಟರ್ ಮೂಲಕ ಲಾಕರ್ ಕತ್ತರಿಸಿ ಚಿನ್ನಾಭರಣ ದೋಚಿದ್ದರು. ಅಲ್ಲದೆ ಸಿಸಿಟಿವಿಯಲ್ಲೂ ಬರದಂತೆ ಸಾಕ್ಷಿ ಸಿಗದಂತೆ ಪ್ಲಾನ್ ಮಾಡಿದ್ದರು. ಬಡವರು, ರೈತರು ಬೇರೆ ಬೇರೆ ಸಂದರ್ಭದಲ್ಲಿ ಅಡವಿಟ್ಟಿದ್ದ 17 ಕೆಜಿ ಚಿನ್ನವನ್ನು ಕಳ್ಳರು ಕದ್ದೊಯ್ದಿದ್ದರು. ಕೆಲವು ತಾಂತ್ರಿಕ ಅಂಶಗಳನ್ನು ಪರಿಗಣಿಸಿ ಆರೋಪಿ ವಿಜಯ್‌ಕುಮಾರ್ ಬಗ್ಗೆ ಪೊಲೀಸರು ಸಂಶಯಪಟ್ಟು ತನಿಖೆ ನಡೆಸಲಾರಂಭಿಸಿದ್ದರು. ಆರು ಆರೋಪಿಗಳನ್ನು ಬಂಧಿಸಿದ್ದು ಕರಗಿಸದೆ ಉಳಿದಿದ್ದ 17.01 ಕೆಜಿ ಬಂಗಾರವನ್ನು ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.



POLICE NEWS REGISTERED KA/BGW-1618/2024-26 REGD. WITH RNI NO. 36669/82 PAGES : 16 | POSTED AT BANGALORE PSO BG 560026 Every Tuesday | Publishing Date : 6.4.2025



## ‘ಕೆಡಿ’ ಚಿತ್ರ ಬಿಡುಗಡೆಗೆ ತಡ ಮಾಡಲ್ಲ, ಆಗಸ್ಟ್‌ನಲ್ಲಿ ತೆರೆಗೆ: ನಿರ್ದೇಶಕ ಪ್ರೇಮ್

ಧ್ರುವ ಸರ್ಜಾ, ರೀಷ್ಮಾ ನಾಣಯ್ಯ, ರವಿಚಂದ್ರನ್, ರಮೇಶ್ ಅರವಿಂದ್ ಮತ್ತು ಬಾಲಿವುಡ್ ತಾರೆಯರಾದ ಸಂಜಯ್ ದತ್ ಮತ್ತು ಶಿಲ್ಪಾ ಶೆಟ್ಟಿ ನಟಿಸಿರುವ ನಿರ್ದೇಶಕ ಪ್ರೇಮ್ ಅವರ ‘ಕೆಡಿ’ ಚಿತ್ರವು ಏಪ್ರಿಲ್ ಅಥವಾ ಮೇ ತಿಂಗಳಲ್ಲಿ ಬಿಡುಗಡೆಯಾಗಬೇಕಿತ್ತು. ಆದರೆ, ಕಾರಣಾಂತರಗಳಿಂದ ವಿಳಂಬವಾಗಿದ್ದು, ಇನ್ಮುಂದೆ ಯಾವುದೇ ಕಾರಣಕ್ಕೂ ಚಿತ್ರ ಬಿಡುಗಡೆಗೆ ತಡ ಮಾಡುವುದಿಲ್ಲ ಎಂದು ನಿರ್ದೇಶಕ ಪ್ರೇಮ್ ತಿಳಿಸಿದ್ದಾರೆ. ಕೆವಿಎನ್ ಪ್ರೊಡಕ್ಷನ್ಸ್ ನಿರ್ಮಿಸಿರುವ ಬಹುಭಾಷಾ ಚಿತ್ರವು ಈಗ ಆಗಸ್ಟ್‌ನಲ್ಲಿ ಬಿಡುಗಡೆಯಾಗುವ ಗುರಿಯನ್ನು ಹೊಂದಿದೆ. ‘ಸೆಟ್ಟಾಗಲ್ಲ ಹೋಗೇ ನಂಗು ನಿಂಗು’ ಎಂಬ ಹಾಡು ಬಿಡುಗಡೆ ಸಮಾರಂಭದಲ್ಲಿ ಪ್ರೇಮ್ ಅವರೇ ಈ ಅಪ್ಡೇಟ್ ನೀಡಿದ್ದಾರೆ.

‘ಇನ್ನು ಮುಂದೆ ಚಿತ್ರ ಬಿಡುಗಡೆಯಲ್ಲಿ ಯಾವುದೇ ವಿಳಂಬವಾಗುವುದಿಲ್ಲ ಎಂದು ನಾನು ಭರವಸೆ ನೀಡುತ್ತೇನೆ. ಚಿತ್ರ ಈ ವರ್ಷದ ಆಗಸ್ಟ್‌ನಲ್ಲಿ ಬಿಡುಗಡೆಯಾಗಲಿದೆ. ‘ಸೆಟ್ಟಾಗಲ್ಲ ಹೋಗೆ ನಂಗು ನಿಂಗು’ ಹಾಡಿನ ಅಂತಿಮ ದೃಶ್ಯಗಳನ್ನು ಹೊರತುಪಡಿಸಿ ಉಳಿದೆಲ್ಲ ಚಿತ್ರೀಕರಣ ಪೂರ್ಣಗೊಂಡಿದೆ’ ಎಂದರು. ಧ್ರುವ ಸರ್ಜಾ ಪಾತ್ರದ ಸುತ್ತ ಕೇಂದ್ರೀಕೃತವಾಗಿರುವ ಕೆಡಿ ಚಿತ್ರದ ಭಾವನಾತ್ಮಕ ಕಥಾಹಂದರವು 70 ಮತ್ತು 80ರ ದಶಕದ ರೆಟ್ರೋ ಹಿನ್ನೆಲೆಯಲ್ಲಿ ಮೂಡಿಬಂದಿದೆ.

‘ಈ ಅವಧಿಯ ಸನ್ನಿವೇಶದಲ್ಲಿ ಚಿತ್ರೀಕರಣ ನಡೆಸುವುದು ಸುಲಭವಾಗಿರಲಿಲ್ಲ, ನಾವು ಹೆಚ್ಚುವರಿ ಕಾಳಜಿ ವಹಿಸಿದ್ದೇವೆ. ಆ ಕಾಲದ ಭಾವನೆಗೆ ಸರಿಹೊಂದಿಸಲು ‘ಸೆಟ್ಟಾಗಲ್ಲ ಹೋಗೆ...’ ಹಾಡಿನ ಒಂದು ಭಾಗವನ್ನು ಆಮ್ ಸ್ಟಾರ್‌ನಲ್ಲಿ ಚಿತ್ರೀಕರಿಸಿದ್ದೇವೆ. ಇದಲ್ಲದೆ, ನಾವು ಚಿತ್ರಕ್ಕಾಗಿ ಹಲವಾರು ಸೆಟ್‌ಗಳನ್ನು ನಿರ್ಮಿಸಿದ್ದೇವೆ’ ಎಂದರು.

‘ಸೆಟ್ಟಾಗಲ್ಲ ಹೋಗೆ...’ ಹಾಡು ಈಗಾಗಲೇ ಅಭಿಮಾನಿಗಳ ಮೆಚ್ಚುಗೆ ಗಳಿಸಿದೆ. ನಿರ್ದೇಶಕ ಪ್ರೇಮ್, ಹಾಡಿನ ಹುಕ್ ಸ್ಟೆಪ್‌ಗಳನ್ನು ಆಯ್ಕೆ ಮಾಡಲು ಪ್ರೇಕ್ಷಕರಿಗೆ ಅವಕಾಶ ನೀಡಿದ್ದಾರೆ. ಅತ್ಯುತ್ತಮವಾದದ್ದನ್ನು ಅಧಿಕೃತ ಮ್ಯೂಸಿಕ್ ವಿಡಿಯೋದಲ್ಲಿ ಸೇರಿಸಲಾಗುವುದು. ಇದನ್ನು ಆಮ್‌ಸ್ಟಾರ್‌ನಲ್ಲಿ ಚಿತ್ರೀಕರಿಸಲಾಗುವುದು. ಸ್ಪರ್ಧೆಯ ವಿಜೇತರನ್ನು ಹಾಡಿನ ಆಡಿಯೋ ಬಿಡುಗಡೆ ಸಮಾರಂಭದಲ್ಲಿ ಗೌರವಿಸಲಾಗುತ್ತದೆ.

## ಶಾಸ್ತ್ರದಲ್ಲಿ ಏನೇ ಇರಲಿ.. ನೀವು ಹೇಗೆ ಬದುಕುತ್ತೀರಾ ಅನ್ನೋದು ಮುಖ್ಯ; ಅಜಯ್ ರಾವ್

ಸ್ಯಾಂಡಲ್‌ವುಡ್‌ನ ಕೃಷ್ಣ ಅಜಯ್ ರಾವ್ ಬಹಳ ದಿನಗಳ ಬಳಿಕ ಮತ್ತೊಂದು ಸಿನಿಮಾ ಮೂಲಕ ರೀ ಎಂಟ್ರಿ ಕೊಡುತ್ತಿದ್ದಾರೆ. ಕಳೆದ ಕೆಲವು ದಿನಗಳಿಂದ ಇವರ ‘ಯುದ್ಧಕಾಂಡ 2’ ಸಿನಿಮಾ ಬಗ್ಗೆ ಚರ್ಚೆಯಾಗುತ್ತಿದೆ. ಇತ್ತೀಚೆಗೆ ಈ ಸಿನಿಮಾವನ್ನು ರಿಲೀಸ್ ಮಾಡುವುದಕ್ಕೆ ‘ಟಾಕ್ಸಿಕ್’ ನಿರ್ಮಿಸುತ್ತಿರುವ ಕೆವಿಎನ್ ಪ್ರೊಡಕ್ಷನ್ ಮುಂದೆ ಬಂದಿದೆ. ಈ ವೇಳೆ ಅಜಯ್ ರಾವ್ ಕೆಲವು ವಿಷಯಗಳಿಗೆ ಉತ್ತರ ಕೊಟ್ಟಿದ್ದಾರೆ.



‘ಯುದ್ಧಕಾಂಡ 2’ ಸಿನಿಮಾವನ್ನು ಅಜಯ್ ರಾವ್ ಅವರೇ ನಿರ್ಮಾಣ ಮಾಡಿದ್ದಾರೆ. ಈ ಸಿನಿಮಾವನ್ನು ನಿರ್ಮಿಸುವುದಕ್ಕೆ ಅಜಯ್ ರಾವ್ ಮೈ ತುಂಬಾ ಸಾಲ ಮಾಡಿಕೊಂಡಿದ್ದಾಗಿ ಹಲವು ಸುದ್ದಿ ವಾಹಿನಿಗಳಿಗೆ ನೀಡಿದ ಸಂದರ್ಶನದಲ್ಲಿ ಹೇಳಿಕೊಂಡಿದ್ದಾರೆ. ಈ ವೇಳೆ ಇನ್ನೂ ಕೆಲವು ಗಂಭೀರ ವಿಷಯಗಳ ಬಗ್ಗೆನೂ ಓಪನ್ ಆಗಿ ಮಾತಾಡಿದ್ದಾರೆ.

‘ಯುದ್ಧಕಾಂಡ 2’ ಬಿಡುಗಡೆ ಒಡಾಡುತ್ತಿದ್ದ ಅಜಯ್ ರಾವ್‌ಗೆ ರಾಕಿಂಗ್ ಸ್ಟಾರ್ ಯಶ್ ನೆರವಿಗೆ ಬಂದಿದ್ದಾರೆ. ಸ್ವತ: ಯಶ್ ಕೆವಿಎನ್ ಜೊತೆ ಮಾತಾಡಿ ಈ ಸಿನಿಮಾ ಬಿಡುಗಡೆಗೆ ವ್ಯವಸ್ಥೆ ಮಾಡಿಕೊಟ್ಟಿದ್ದಾರೆ. ಈ ವಿಷಯವನ್ನು ಹಲವು ಸಂದರ್ಶನಗಳಲ್ಲಿ ಅಜಯ್ ರಾವ್ ಬಹಿರಂಗ ಪಡಿಸಿದ್ದಾರೆ. ಹೆಚ್ಚು ಮಾಹಿತಿಯನ್ನು ಬಿಟ್ಟುಕೊಡದೇ ಇದ್ದರೂ ಯಶ್ ಸಹಾಯವನ್ನು ಅಜಯ್ ರಾವ್ ನೆನಪಿಸಿಕೊಂಡಿದ್ದಾರೆ. ಈ ಸಂದರ್ಭದಲ್ಲಿ ಇತ್ತೀಚೆಗೆ ಅಜಯ್ ರಾವ್ ತಮ್ಮ ವಿಚ್ಛೇದನದ ಬಗ್ಗೆ ಹಬ್ಬಿದ್ದ ಸುದ್ದಿಯನ್ನು ರಿವೀಲ್ ಮಾಡಿದ್ದಾರೆ. ಮೊದಲು ‘ಯುದ್ಧಕಾಂಡ 2’ ರಿಲೀಸ್‌ಗೆ ಕೆವಿಎನ್ ಪ್ರೊಡಕ್ಷನ್ ಮುಂದೆ ಬಂದಿದ್ದಕ್ಕೆ ಕಾರಣವನ್ನು ಬಿಚ್ಚಿಟ್ಟಿದ್ದಾರೆ. ಯಶ್ ತಮಗೆ ಹೇಗೆ ನೆರವಾದವರು ಅನ್ನೋದನ್ನು ರಿವೀಲ್ ಮಾಡಿದ್ದಾರೆ. ಕೆವಿಎನ್ ಸಂಸ್ಥೆಯವರು ಸಿನಿಮಾವನ್ನು ನೋಡಿ ಮೆಚ್ಚುಗೆಯಿಂದಾನೇ ಬಿಡುಗಡೆ ಮಾಡುವುದಕ್ಕೆ ಹೊರಟಿದ್ದಾರೆ. ಇದೆಲ್ಲ ಒಬ್ಬ ವ್ಯಕ್ತಿಯ ಹೃದಯ ಶ್ರೀಮಂತಿಕೆಯಿಂದಾನೇ ಆಗಿದ್ದು. ಯಾಕಂದ್ರೆ, ಅವರ ಅಭಿಮಾನಿಗಳಿಗೆ ಆ ವ್ಯಕ್ತಿಯ ತೂಕವೇನು? ಕಷ್ಟದಲ್ಲಿ ಇದ್ದವರಿಗೆ ಒಳ್ಳೆಯನ್ನು ಮಾಡುವುಕ್ಕೆ ನಿಲ್ಲುತ್ತಾರೆ ಅನ್ನೋದು ಗೊತ್ತಾಗಬೇಕು. ಅವರು ನಮ್ಮ ರಾಕಿಂಗ್ ಸ್ಟಾರ್ ಯಶ್ ಅವರೇ ಕೂಡ ಆ ಸಂಸ್ಥೆಯೊಂದಿಗೆ ಸಿನಿಮಾವನ್ನು ನೋಡಿ ಅಂತ ಮಾತಾಡಿದ ಮೇಲೆ ಕೆವಿಎನ್ ಅವರು ಆ ಸಿನಿಮಾ ನೋಡಿ, ತುಂಬಾ ಚೆನ್ನಾಗಿದೆ. ದೊಡ್ಡ ಮಟ್ಟದಲ್ಲಿ ರಿಲೀಸ್ ಮಾಡೋಣ ಅಂತ ಹೇಳಿದ್ದಾರೆ ಎಂದು ಅಜಯ್ ರಾವ್ ಪರ್ವ ಟಿವಿಗೆ ನೀಡಿದ ಸಂದರ್ಶನದಲ್ಲಿ ತಿಳಿಸಿದ್ದಾರೆ.

‘ಯುದ್ಧಕಾಂಡ 2’ ಸಿನಿಮಾಗಾಗಿ ಸಿಕ್ಕಾಪಟ್ಟೆ ಸಾಲ ಮಾಡಿದ್ದಾಗಿ ಹೇಳಿಕೊಂಡಿದ್ದಾರೆ. ಆದರೆ ತಾನು ಸಾಲ ಮಾಡಿದ್ದು ಕೇವಲ ಸಿನಿಮಾಗಾಗಿ ಮಾತ್ರ ಅಂತಾನೂ ಹೇಳಿದ್ದಾರೆ. ಎಷ್ಟು ಸಾಲ ಮಾಡಿಕೊಂಡಿದ್ದೀನಿ ಅಂತ ಲೆಕ್ಕ ಹಾಕುವುದಕ್ಕೆ ಆಗುವುದಿಲ್ಲ, ಸಿಕ್ಕಾಪಟ್ಟೆ ಸಾಲ ಮಾಡಿಕೊಂಡಿದ್ದೇನೆ. ಅದು ಮಾತ್ರ ನಿಜ. ನಾನು ಯಾವತ್ತೂ ದುಡ್ಡಿಗೆ ಲೆಕ್ಕ ಹಾಕಿದವನಲ್ಲ, ದುಡ್ಡು ಮಾಡಬೇಕು ಅಂತ ಬಂದವನಲ್ಲ, ಕಲಾವಿದನಾಗಬೇಕು ಅಂತ ಬಂದವನು. ಸಾಲ ಮಾಡಿದ್ದೀನಿ ಅಂತ ಹೇಳ್ತಿರೋದು, ಅಷ್ಟು ಸಾಲ ಮಾಡುವ ತಾಕತ್ತು ಇದೆ ಅನ್ನೋದಕ್ಕೆ ಹೇಳಿದ್ದು. ಸಾಲ ಮಾಡಿದ್ದೀನಿ ಅಂತ ಕೊರಗುತ್ತಿಲ್ಲ, ಅಷ್ಟು ಸಾಲ ಮಾಡಿದ್ದೀನಿ ಅಂದರೆ, ಅಷ್ಟು ಸಂಪಾದನೆ ಮಾಡಿದ್ದೀನಿ ಅಂತಾನೇ ಅರ್ಥ ಎಂದು ಹೇಳಿದ್ದಾರೆ.

ಕೆಲವು ದಿನಗಳ ಹಿಂದಷ್ಟೇ ಅಜಯ್ ರಾವ್ ಜ್ಯೋತಿಷ್ಯದ ಬಗ್ಗೆ ಹೇಳಿಕೆ ನೀಡಿದ್ದರು. ಅಲ್ಲಿಂದ ಅವರ ವಿಚ್ಛೇದನದ ಬಗ್ಗೆನೂ ಸುದ್ದಿ ಹರಿದಾಡಿತ್ತು. ಅದಕ್ಕೂ ಅಜಯ್ ರಾವ್ ಸ್ಪಷ್ಟನೆ ನೀಡಿದ್ದಾರೆ. ನಾವು ಚೆನ್ನಾಗಿದ್ದೀವಿ. ನಿಮಗೆ ಜ್ಯೋತಿಷ್ಯ ಗೊತ್ತಾ ಅಂತ ಕೇಳಿದ್ದಕ್ಕೆ ಹಾಗೆ ಹೇಳಿದ್ದೆ. ನಾನು ಸಿನಿಮಾ ವಿಚಾರವನ್ನೂ ಹೇಳಿದ್ದೆ. ಕೃಷ್ಣಲೀಲಾ ಸಿನಿಮಾ ಮಾಡಿದ್ದು ತುಂಬಾನೇ ಕೆಟ್ಟ ಮುಹೂರ್ತ ಅಂತಾನೂ ಹೇಳಿದ್ದರು. ಅದು ಕೋಟಿಗಟ್ಲೆ ಸಂಪಾದನೆ ಮಾಡಿದೆ. ಬ್ಲಾಕ್ ಬಸ್ಟರ್ ಸಿನಿಮಾ ಎನಿಸಿಕೊಂಡಿದೆ. ಶಾಸ್ತ್ರದಲ್ಲಿ ಏನೇ ಇರಲಿ, ನೀವು ಹೇಗೆ ಬದುಕುತ್ತೀರ. ನಿಮ್ಮ ಶ್ರಮ ಎಷ್ಟಿರುತ್ತೆ? ನಿಮ್ಮ ಶ್ರದ್ಧೆ ಎಷ್ಟಿರುತ್ತೆ? ಇದಕ್ಕಿಂತ ಮೀರಿದ್ದು ಇರುತ್ತೆ ಅನ್ನೋದನ್ನು ಹೇಳುವುದಕ್ಕೆ ಬಂದೆ. ದಾಂಪತ್ಯ ಜೀವನವೇ ಆಗಿರಲಿ, ಸಿನಿಮಾನೇ ಆಗಿರಲಿ. ನೀವು ತುಂಬಾನೇ ಇಷ್ಟ ಪಟ್ಟು ಇದ್ದರೆ, ಇದ್ಯಾವುದೂ ವರ್ಕ್ ಆಗಲ್ಲ, ಇದನ್ನು ಮೀರಿ ದೇವರ ಅನುಗ್ರಹ ಆಶೀರ್ವಾದ ಇರುತ್ತೆ ಅಂತ ಆ ರೀತಿ ಹೇಳಿದ್ದು ಎಂದು ಕ್ಲಾರಿಟಿ ಕೊಟ್ಟಿದ್ದಾರೆ.

ಇನ್ನು ಅಜಯ್ ರಾವ್ ಕತೆಯನ್ನು ಆಯ್ಕೆ ಮಾಡಿಕೊಳ್ಳುವುದರಲ್ಲಿ ಎಡವುತ್ತಿದ್ದಾರಾ? ಎಂದು ಪ್ರಶ್ನೆ ಮಾಡಲಾಗಿತ್ತು. ಅದಕ್ಕೂ ಸ್ಪಷ್ಟೀಕರಣ ನೀಡಿದ್ದಾರೆ. ಕಥೆಗಳ ಆಯ್ಕೆಯಲ್ಲಿ ತಪ್ಪಾಗಿದೆ ಅಂತಲ್ಲ, ಅವತ್ತಿನ ಕಾಲದಲ್ಲಿ ಬಂದ 10 ಕಥೆಗಳಲ್ಲಿ ಬೆಸ್ಟ್ ಯಾವುದು ಇತ್ತೋ ಅದನ್ನೇ ಆಯ್ಕೆ ಮಾಡಿದ್ದು. ಆ ಆಯ್ಕೆಗಳಲ್ಲಿ ಬಿಟ್ಟಿದ್ದೀನಿ ಅಂದರೆ, ಇದಕ್ಕಿಂತ ಎಷ್ಟು ಕೆಟ್ಟದಾಗಿದೆ ಅಂತ ಯೋಚನೆ ಮಾಡಿ. ಎಂದಿದ್ದಾರೆ.





## ಹಿರಿಯ ನಟ ಸುದರ್ಶನ್ ಪತ್ನಿಯ ನೆರವಿಗೆ ನಿಂತ ದರ್ಶನ್!

ನಟ ದರ್ಶನ್, ಆಶ್ರಮದ ಪಾಲಾಗಿದ್ದ ಹಿರಿಯ ನಟ ಸುದರ್ಶನ್ ಪತ್ನಿ ಶೈಲಶ್ರೀ ಅವರ ನೆರವಿಗೆ ನಿಂತಿದ್ದು, ಯಾರೂ ಇಲ್ಲದೇ ಆಶ್ರಮ ಪಾಲಾಗಿದ್ದ ಅವರ ಖರ್ಚುಗಳನ್ನು ನೋಡಿಕೊಳ್ಳುತ್ತಿದ್ದಾರೆ. ಈ ಬಗ್ಗೆ ನಿರ್ದೇಶಕ ಹಾಗೂ ಹಿರಿಯ ಪತ್ರಕರ್ತ ಗಣೇಶ್ ಕಾಸರಗೋಡು ಅವರು ತಮ್ಮ ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿದ್ದಾರೆ. ಒಂದು ಕಾಲದಲ್ಲಿ ಕನ್ನಡ ಚಿತ್ರರಂಗವನ್ನಾಳಿದ ಕಲಾವಿದರ ಕುಟುಂಬದ ಕುಡಿಯೊಂದು ನೆಲೆ ಬೆಲೆಯಿಲ್ಲದೇ ಇದೇ ಬೆಂಗಳೂರಿನ ಆಶ್ರಮಕ್ಕೆ ಸೇರಿಕೊಂಡು ಆಶ್ರಯ ಪಡೆದಿರುವ ದುರಂತ ಸುದ್ದಿಯೊಂದರ ಹಿಂದೆ ಬಿದ್ದಿದ್ದೇನೆ.



ಕನ್ನಡ ಚಿತ್ರರಂಗಕ್ಕೆ ಭದ್ರ ಬುನಾದಿ ಹಾಕಿಕೊಟ್ಟ ಹಿರಿಯ ನಟ, ನಿರ್ದೇಶಕ, ನಿರ್ಮಾಪಕ ಆರ್.ಎನ್. ನಾಗೇಂದ್ರರಾಯರ ಮುದ್ದಿನ ಸೊಸೆ ಇಲ್ಲೇ ಈ ಕಾಂಕ್ರೀಟ್ ಕಾಡಿನ ನಡುವೆ ಕಳೆದು ಹೋಗಿದ್ದಾರೆ. ಸುದರ್ಶನ್ ಅವರ ಸಾವಿನ ನಂತರ ದಿಕ್ಕಿಲ್ಲದ ಪರದೇಶಿಯಾಗಿ ಏಕಾಂಗಿ ಬದುಕು ಕಂಡುಕೊಂಡಿದ್ದ ಶೈಲಶ್ರೀ ಮೇಡಂ ಸೈಲೆಂಟ್ ಆಗಿ ಆಶ್ರಮ ಸೇರಿಕೊಂಡಿರುವ ಹೃದಯ ವಿದ್ರಾವಕ ಸುದ್ದಿಯೊಂದು ಬಂದಿದೆ.

ಈ ಮೊದಲು ಅಪಾರ್ಟ್‌ಮೆಂಟ್ ಒಂದರಲ್ಲಿ ಶೈಲಶ್ರೀ ಅವರು ವಾಸವಿದ್ದರು. ಆದರೆ, ಅದರ ಮಾಲೀಕರು ಬಿಲ್ಡಿಂಗ್ ನೆಲಸಮ ಮಾಡಿದ್ದರಿಂದ ಶೈಲಸ್ರೀ ಅವರು ಬೇರೆ ನೆಲೆ ಕಂಡುಕೊಳ್ಳಬೇಕಿತ್ತು. ಆಗ ಹಿರಿಯ ನಟಿಯೊಬ್ಬರು ಶೈಲಶ್ರೀ ಸಹಾಯಕ್ಕೆ ಬಂದರು. ಅವರ ಸಲಹೆಯಂತೆ ಆಶ್ರಮ ಸೇರಿದರು. ಆರಂಭದಲ್ಲಿ ಖರ್ಚು ವೆಚ್ಚಗಳನ್ನು ಹಿರಿಯ ನಟಿ ನೋಡಿಕೊಳ್ಳುತ್ತಿದ್ದರು. ಆದರೆ, ತಿಂಗಳುಗಳು ಉರುಳಿದಂತೆ ಇದು ಸಾಧ್ಯವಾಗಿಲ್ಲ, ಆಗ ಸಹಾಯಕ್ಕೆ ಬಂದಿದ್ದು ದರ್ಶನ್. ಶೈಲಶ್ರೀ ಅವರ ಕೊನೆಗಾಲದವರೆಗೂ ಸಹಾಯ ಮಾಡಲು ದರ್ಶನ್ ಒಪ್ಪಿ ಮುಂದೆ ಬಂದಿದ್ದಾರೆ ಎಂದು ಬರೆದುಕೊಂಡಿದ್ದಾರೆ.

Vol. 40 No. 44 Edited, Printed, Published & Owned by M. RAHUL, Printed by him at Shri Omkar Printers, # 4/1, Mahimappa Industrial Estate, Near PIA Bhavan, 100ft Road, Jalahalli Cross, Chokkasandra, T. Dasarahalli Post, BANGALORE-560 057. ☎ 080-23588510, 9513892666
Email: policenewsreporter@gmail.com